
ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಕನ್ನಡ ವಾರಪತ್ರಿಕೆ
ಸಂಪುಟ 1 ಸಂಚಿಕೆ 8
ಜುಲೈ 22, 2007
ರೂ. 5/-

ಕೊಂಕಣಿ ಮಂಚ್‌ನ ಅರ್ಥಹೀನ ಹಳಹಳಿಕೆ



ಪೇಜ್ 8

ಭಯೋತ್ಪಾದನೆಯ ಬೀಜಗಳು ಮೊಳೆಯುತ್ತಿವೆ ಏಕೆ?



ಪೇಜ್ 5

ಮಲೆನಾಡಿನ ನಕ್ಸಲೀಯರು

ನಾಡುಸುಡುವ ಕಾಡುಕಿಚ್ಚು


ಪೇಜ್ 9

ಹೆಚ್.ಡಿ. ಕೋಟೆ : ಹಸಿವೆಂಬ ಹದ್ದು ಮರಿಹಕ್ಕಿಯೊಂದ ಹೊತ್ತೊಯ್ದಿತೋ

ಹಳಸಲು ಮೌಲ್ಯದ 'ಯುಗಾದಿ'




ಸಾರ್ವಜನಿಕ ಉದ್ದಿಮೆಗಳ ರಕ್ಷಣೆಗೆ ಹೋರಾಟ



ಲಾಲ್ ಮಸೀದ್ : ಮುಷರ್ರಫ್ ಬ್ಲೂಸ್ಟಾರ್

ಜ್ಯೋತಿದಾ ಗೆ 94

2007ರ ಜುಲೈ 8ಕ್ಕೆ ಹಿರಿಯ ಕಮ್ಯುನಿಸ್ಟ್ ನಾಯಕ ಜ್ಯೋತಿ ಬಸುಗೆ 94 ವರ್ಷಗಳು. ಇದರ ನೆನಪಿಟ್ಟುಕೊಂಡ ಗೆಳೆಯರು, ಪಕ್ಷದ ಸಂಗಾತಿಗಳು ವಿಶೇಷವಾಗಿ ಮಕ್ಕಳು ಅವರಿಗೆ ಬೆಳಿಗ್ಗೆಯೇ ಹೂಗುಚ್ಛ ನೀಡಿ ಅಭಿನಂದಿಸಿದರು.



ಇಲ್ಲಿ ಛೋಟಾ ಮೋಟಾ ಲೀಡರ್‌ಗಳು ತಮ್ಮ ಹುಟ್ಟುಹಬ್ಬಕ್ಕೆ ಎಷ್ಟೆಲ್ಲಾ ಕಟೌಟ್ ಹಾಕಿ ಶುಭಾಶಯ ಹೇಳಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ನೋಡುವ ಕಣ್ಣುಗಳಿಗೆ ಕಲ್ಕತ್ತಾದಲ್ಲಿ ಅಂತಹದ್ದೇನೂ ಇರಲೇ ಇಲ್ಲ ಎಂಬುದು ಕಾಣಬೇಕು. "ಹುಟ್ಟುಹಬ್ಬಗಳನ್ನು ಆಚರಿಸಿಕೊಳ್ಳುವುದು ಮಾರ್ಕ್ಸ್‌ವಾದಿಗಳ ಸಂಸ್ಕೃತಿ ಅಲ್ಲ. ಹೂಗುಚ್ಛ, ಅಭಿನಂದನೆಯ ಸವಿ ಮಾತು ಹೊತ್ತು ಬಂದ ಮಕ್ಕಳು, ಗೆಳೆಯರನ್ನು ಆಹ್ವಾನಿಸದೇ ಹೇಗೆ ಹೊರಗೆ ಕಳಿಸಲಿ, ಮನ ನೋಯಿಸಲಿ" ಎಂಬ ಸೌಜನ್ಯಪೂರ್ವಕ, ಸೈದ್ಧಾಂತಿಕ ಎಚ್ಚರದ ಮಾತುಗಳನ್ನು ಜ್ಯೋತಿ ದಾ ಹೇಳಿದರು. ಈ ದಿನ ಮತ್ತೆ ಮತ್ತೆ ಬರಲಿ ಅಲ್ವೇ. ಯಾಕೆಂದರೆ ವಯಸ್ಸಾಯಿತೆಂದು ಜ್ಯೋತಿ ದಾ ಮೂಲೆ ಹಿಡಿದು ಕುಂತವರಲ್ಲ... ಯಾವಾಗಲೂ ಜನರತ್ತಲೇ ಗಮನ. ಅದಕ್ಕೆ ಎಲ್ಲಾ ಸಹೃದಯಿಗಳ ನಮನ.

ಭಾವಿ ರಾಷ್ಟ್ರಾಧ್ಯಕ್ಷೆ ಬಂದರು ಬೆಂಗಳೂರಿಗೆ

ಮೊನ್ನೆ ಜುಲೈ 7 ರಂದು ರಾಜ್ಯಕ್ಕೆ ರಾಷ್ಟ್ರಪತಿ ಚುನಾವಣೆಯ ಅಭ್ಯರ್ಥಿ ಶ್ರೀಮತಿ ಪ್ರತಿಭಾ ಪಾಟೀಲ್‌ರವರು ಮತಯಾಚನೆಗೆ ಬಂದಿದ್ದರು. ಇದು ಒಂದರ್ಥದಲ್ಲಿ ದಿಢೀರ್ ಭೇಟಿ. ವಿಧಾನಸಭಾ ಅಧಿವೇಶನ ನಡೆಯುತ್ತಿರುವಾಗ



'ಮತದಾರರನ್ನು' ಭೇಟಿಯಾಗುವ ಇಚ್ಛೆ ಅವರದು. ಇದ್ದದು ಎರಡು ಗಂಟೆ ಮಾತ್ರ. ಈ ಸಮಯದಲ್ಲೇ ಶಾಸಕರನ್ನು ಭೇಟಿಯಾದರು, ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಮನವಿ ಮಾಡಿದರು, ಸಿಪಿಐ(ಎಂ) ಹಾಗೂ ಇತರೆ ಪ್ರಜಾಸತ್ತಾತ್ಮಕ ಪಕ್ಷಗಳ ಶಾಸಕರನ್ನು ಪ್ರತ್ಯೇಕವಾಗಿ ಕಂಡು ಮನವಿ ಮಾಡಿದರು. ಭಾರತದ ಇಂದಿನ ಪರಿಸ್ಥಿತಿಯಲ್ಲಿ ಧರ್ಮನಿರಪೇಕ್ಷ, ಭಾರತದ ಸಂವಿಧಾನ ಹಾಗೂ ಅದರ ಘನತೆ, ಗೌರವಗಳನ್ನು ಎತ್ತಿ ಹಿಡಿಯಲು ಬದ್ಧರೆಂದು ಘೋಷಿಸಿದರು. ಸದ್ಯಕ್ಕೆ ಸಾಕಲ್ಲವೇ?

ಅಂದ ಹಾಗೆ ಜೆಡಿ(ಎಸ್) ಪಕ್ಷ ಇನ್ನು ಯಾರಿಗೂ ತನ್ನ ಬೆಂಬಲವೆಂದು ಪ್ರಕಟಿಸಿಲ್ಲ. ಯಾಕಿರಬಹುದು? ಇದೇ ಹೊತ್ತಿನಲ್ಲಿ ಎಲ್ಲರೂ ಅಂದು 07.07.07 ಎಂದು ಖುಷಿಯಿಂದ ಗಡಿಯಾರದ ಸಮಯದಿಂದ ಪುಳಕಿತವಾಗುತ್ತಿರುವಾಗಲೇ ನೆನಪೊಂದು ಹಾರಿಬಂತು. 07.07.2002 ರಂದು ಅಂದಿನ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್‌ರವರು ಬೆಂಗಳೂರಿಗೆ ಆಗಮಿಸಿದ್ದರು. ನಗರದ ಟೌನ್‌ಹಾಲ್‌ನಲ್ಲಿ ಅವಿಸ್ಮರಣೀಯ ನಾಗರೀಕ ಸನ್ಮಾನ. ಈಗಲೂ ಆ ಹಿರಿಯ ಚೇತನದ ಮಾತುಗಳ ಘಂಟಾನಾದ ಮನದೊಳಗೆ ಹೃದಯಗಳೊಳಗೆ.

○ **ಜೀ.**

'ಸಮಾಜವಾದಿ'ಚಂದ್ರಶೇಖರ್

ಜುಲೈ 8 ರಂದು ಮಾಜಿ ಪ್ರಧಾನಿ ಚಂದ್ರಶೇಖರ್ ನಿಧನರಾದಾಗ ಅವರಿಗೆ 80 ವರ್ಷ. ಆಗಲೂ ಅವರಿಗೆ 'ಯಂಗ್ ಟರ್ಕ್' ಎಂಬ ಬಿರುದು ಹಿರಿಯ ಸಮಾಜವಾದಿಗೆ. ಜೀವಮಾನವಿಡಿ ಕಾಂಗ್ರೆಸ್ಸನ್ನು ವಿರೋಧಿಸುವುದಾಗಿ ಹೇಳುತ್ತಾ ಬಂದಿದ್ದ ಚಂದ್ರಶೇಖರ್ ಮಂಡಲ್‌ಗೆ ಎದುರಾಗಿ ಬಿಜೆಪಿ ಮಂದಿರದ ವಿಷಯ ಹಿಡಿದು ರಥಯಾತ್ರೆ ನಡೆಸಿದಾಗ ಸೆಕ್ಯುಲರಿಸಂ ಪರವಾಗಿ ದೃಢ ನಿಲುವು ತಳೆದ ವಿ.ಪಿ.ಸಿಂಗ್ ಸರ್ಕಾರಕ್ಕೆ ಬೆಂಬಲ ವಾಪಸ್ ಪಡೆದಾಗ ಒಂದು ವಿಶಿಷ್ಟ ಸನ್ನಿವೇಶ ಬಳಸಿ ಕಾಂಗ್ರೆಸ್‌ನ ಬೆಂಬಲದಿಂದಲೇ ಪ್ರಧಾನಿಯಾಗಲು ಕೈ ಚಾಚಿದ್ದು ಇತಿಹಾಸ. ಹಾಗೆಯೇ ಈ ಅವಧಿಯಲ್ಲಿ ಇರಾಕ್ ಮೇಲಿನ ದಾಳಿಗೆ ಹೊರಟ ಅಮೇರಿಕಾ ಯುದ್ಧ ವಿಮಾನಗಳಿಗೆ ತೈಲ ತುಂಬಿಸಿದ್ದು, ಭಾರತದ ಬಂಗಾರವನ್ನು ಸಾಲಕ್ಕಾಗಿ ವಿದೇಶದಲ್ಲಿ ಅಡವಿಟ್ಟ ಹಿರಿಯ ಸಮಾಜವಾದಿಯ ಈ ಕ್ರಮಗಳ ವಿರುದ್ಧ ಪ್ರತಿಭಟನೆಗಳು ನಡೆದಿದ್ದ ಕೂಡ ಇತಿಹಾಸವೀಗ.

ಉನ್ನತ ಶಿಕ್ಷಣ ಸಚಿವರಿಗೆ ಅಗತ್ಯ ಪ್ರಾಥಮಿಕ ಶಿಕ್ಷಣ

ಏನೇ ಆಗಲಿ ಕರ್ನಾಟಕದ ವಿಶ್ವ ವಿದ್ಯಾಲಯಗಳ ಪ್ರವೇಶಕ್ಕೆ ಸಿ.ಇ.ಟಿ. ಪರೀಕ್ಷೆಯ ಮೂಲಕವೇ ಮಾಡಿಸುವೆ ಎಂದು ಹೇಳಿಕೊಂಡಿದ್ದ ಉನ್ನತ ಸಚಿವ ಶಂಕರಮೂರ್ತಿ ಕೊನೆಗೂ ಪ್ರತಿಭಟನೆಗೆ ಮಣಿಯಬೇಕಾಗಿ ಬಂದಿದೆ. ಒಂದೆಡೆ ವಿದ್ಯಾರ್ಥಿಗಳ ಅಷ್ಟೇ ಅಲ್ಲ ಆಳುವ ಪಕ್ಷಗಳ ಶಾಸಕರೇ ವಿಧಾನಸಭೆಯಲ್ಲಿ ಮೂಗು ಹಿಡಿದು ಮಾತು ಬರಿಸಿದರು. ವಿಶ್ವ ವಿದ್ಯಾಲಯಗಳ ಸ್ಥಾಪನೆ, ಅದರ ಪ್ರಾದೇಶಿಕ ವಿಭಿನ್ನತೆಗಳ ವೈಶಿಷ್ಟ, ವಿ.ವಿ. ಸ್ವಾಯತ್ತತೆ ಕಾಯುವ ಹೊಣೆ ಮರೆತ ಉನ್ನತ ಶಿಕ್ಷಣ ಸಚಿವರಿಗೆ ಇವನ್ನೆಲ್ಲಾ ಕಾಪಾಡಬೇಕೆಂಬ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕಾದ ಅಗತ್ಯವಿದೆ.



ಪತ್ರಿಕೆ ಚೆನ್ನಾಗಿದೆ ಮೂರು ಕೊಡ ನೀರು ಹಾಗೂ ಗೆಲುವೆನೆಂಬ ಭಾಷೆ ಮನಮುಟ್ಟುವಂತಿದೆ. ಜ್ಞಾನ ವಿಜ್ಞಾನದ ಕಡೆ ಹೆಚ್ಚಿನ ಒಲವು ಇರಲಿ. ಸುನೀತಾ ವಿಲಿಯಮ್ಸ್ ಬಗ್ಗೆಯೂ ಪರಿಚಯಿಸಿ.

ಲವಿತ್ರಾ ವಿ.ವಸ್ತ್ರದ್, ಕಲಬುರ್ಗಿ

ಬಿಜೆಪಿಗೆ ತನ್ನ ಸ್ವತಂತ್ರ ಅಭ್ಯರ್ಥಿ ಆರ್‌ಎಸ್‌ಎಸ್ ಖುಳ ಶೇಖಾವತ್‌ನನ್ನು ನಿಲ್ಲಿಸುವ ಅವಶ್ಯಕತೆ ಇತ್ತಾ? ಸ್ವಾತಂತ್ರ ಪೂರ್ವದಲ್ಲಿ ಬ್ರಿಟಿಷ್ ಸರ್ಕಾರದಿಂದ ಪ್ರಶಂಸಾ ಪತ್ರ ಸ್ವೀಕರಿಸಿದ ಚೆಡ್ಡಿ ಚತುರ ಶೇಖಾವತ್ ಮಾಡಿದ ಸಾಧನೆಗಳೇನು? ಬಾಬ್ರಿ ಮಸೀದಿ ಧ್ವಂಸಕ್ಕೆ ತನ್ನ ಚೇಲಾಗಳನ್ನು ಕಳುಹಿಸಿ ಛೀಮಾರಿ ಹಾಕಿಸಿಕೊಂಡಿದ್ದ. ಎನ್.ಡಿ.ಎ. ಸರ್ಕಾರದ ಅಸ್ತಿತ್ವದಲ್ಲಿ ಕೇವಲ ಮುಸ್ಲಿಂರನ್ನು ಓಲೈಸುವುದಕ್ಕಾಗಿ ಅವರ ಮತಕ್ಕಾಗಿ ಕಲಾಂರನ್ನು ರಾಷ್ಟ್ರಪತಿ ಸ್ಥಾನಕ್ಕೆ ತಂದರು, ಈಗ ಯುಪಿಎ ತನ್ನ ಅಭ್ಯರ್ಥಿ ಮಹಿಳೆಯನ್ನು ತಂದಾಗ ಇವರೇಕೆ ವಿರೋಧ ಮಾಡಬೇಕು? ಬಿಜೆಪಿ ಸ್ವತಂತ್ರ ಅಭ್ಯರ್ಥಿ ಬರೀ ಚೆಡ್ಡಿಗಳಿಂದ ಬಹುಮತಗಳಿಸಲು ಸಾಧ್ಯವೇ? ಬರೀ ಕೋಮುವಾದಿ ಅಧಿಕಾರಕ್ಕಾಗಿ ಹೋರಾಡುವ ಚೆಡ್ಡಿಗಳಿಗೆ ಭಾರತದಲ್ಲಿ ನೆಲೆ, ಅಲೆ ಎಲ್ಲಿದೆ? ಇವರ ಆತುರದಿಂದ ಭರದಿಂದ ಜಾರಿಗೊಳಗಾದ ಖಾಸಗೀಕರಣ ಉದಾರೀಕರಣದಿಂದ ಜಾಗತೀಕರಣದಿಂದ ಇಂದು ದೇಶ ಎತ್ತ ಸಾಗಿದೆ? ಚೆಡ್ಡಿಗಳನ್ನು ಬುಡ ಸಮೇತ ಕಿತ್ತೊಗೆಯುವ ಕೆಲಸ ನಮ್ಮ ಜನತೆ ಮಾಡಬೇಕಿದೆ.

ಡಿ.ಎಲ್.ನಾಗರಾಜ್

ಮುಸ್ಲಿಂ ಮೂಲಭೂತವಾದ ಭಯೋತ್ಪಾದಕರು?

ತಮ್ಮ ಸಂಚಿಕೆಯಲ್ಲಿ ಬೆಂಗಳೂರು ಮೂಲದ ಭಯೋತ್ಪಾದಕರು ವಿಶ್ಲೇಷಕವಾಗಿ ಮೂಡಿ ಬಂದಿದೆ. ನಮ್ಮ ಚೆಡ್ಡಿಗಳು ಎಲ್ಲಿ ಭಯೋತ್ಪಾದನೆ ನಡೆದಿದೆ ಅಲ್ಲಿ ಒಂದೊಮ್ಮೆ ಮುಸ್ಲಿಮರ ಹೆಸರು ಇದ್ದರೆ ಸಾಕು ತಮ್ಮ ಚೆಡ್ಡಿ ಒಳಗೆ ಚೇಳು ನುಗ್ಗಿದಂತೆ ಹಿಂದುತ್ವದ ಬಗ್ಗೆ ಕಿರುಚಾಡುತ್ತಾರೆ.

ನಮ್ಮ ದೇಶದಲ್ಲಿ ಹುಟ್ಟಿ ಬೆಳೆದ ಮುಸ್ಲಿಮರು ಹಿಂದೂ ಭಾರತ ದೇಶದ ಜನರಲ್ಲವೇ? ಸಮೂಹ ನಾಶಕ ಬಾಂಬ್, ಅಣುಬಾಂಬ್ ತಯಾರಿಸುತ್ತಿದ್ದಾರೆಂದು ಅಮೇರಿಕಾ, ಇರಾಕ್, ಇರಾನ್ ಮತ್ತು ಅರಬ್ ದೇಶಗಳ ಮೇಲೆ ಆಕ್ರಮಣ ಮಾಡಿ ಅಲ್ಲಿ ಬಹಳಷ್ಟು ಮುಸ್ಲಿಮರನ್ನು ಕೊಂದು ಅಲ್ಲಿರುವ ಅನಿಲವನ್ನು ತಮ್ಮದಾಗಿಸಿಕೊಂಡು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದೆ. ಈ ಭಯೋತ್ಪಾದಕರನ್ನು ಹುಟ್ಟು ಹಾಕಿದ್ದು ಇಂಗ್ಲೆಂಡ್ ಅಮೇರಿಕಾ. ಮುಸ್ಲಿಂರಿಗೆ ನೆಲೆ ಇಲ್ಲದಂತೆ ಮಾಡಿರುವವರ ವಿರುದ್ಧ ಮಹಾ ಹೋರಾಟ ರೂಪುಗೊಳ್ಳುವ ಅವಕಾಶಗಳೇ ಇಲ್ಲ. ಈ ನೀತಿ ವಿರುದ್ಧ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಡಲು ಸನ್ನದ್ಧರಾಗಬೇಕಿದೆ.

ಡಿ.ಎಲ್.ಶ್ವೇತಾ

ಕ್ಯಾತೆ ಶೀರ್ಷಿಕೆಯಲ್ಲಿ ವಿ.ಶ್ರೀನಿವಾಸ ಬರೆದ ಕರಡಿ ಕುಣಿತ ಷೇರು ಮಾರುಕಟ್ಟೆ ಬಗ್ಗೆ ಚೆನ್ನಾಗಿ ಮೂಡಿ ಬಂದಿದೆ. .

ಡಿ.ಎಲ್.ಸುರೇಶ್, ಹರಪನಹಳ್ಳಿ



ಕೂಲಿಕಾರರ ನೆಚ್ಚಿನ ಒಡನಾಡಿ ಡೇವಿಡ್ ಇನ್ನಿಲ್ಲ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಕೃಷಿ ಕೂಲಿಕಾರರ ಸಂಘಟನೆಯನ್ನು ಹುಟ್ಟುಹಾಕಿ, ದಲಿತ ಕೃಷಿ ಕೂಲಿಕಾರರ ಭೂಮಿ, ಮನೆ ನಿವೇಶನ, ಹಕ್ಕುಪತ್ರ, ಮೊದಲಾದ ಬೇಡಿಕೆಗಳಿಗಾಗಿ ಹೋರಾಟಗಳನ್ನು ನಡೆಸುತ್ತಾ ಬಂದಿದ್ದ ಸಂಗಾತಿ ಡೇವಿಡ್ ಅವರು 27-06-2007 ರಂದು ನಿಧರಾಗಿರುತ್ತಾರೆ.

ಕೆಲಕಾಲದಿಂದ ಅವರು ಅಸ್ವಸ್ತರಾಗಿದ್ದರು. ಮೊದಲು ಅವರು ದಲಿತ ಸಂಘರ್ಷ ಸಮಿತಿಯಲ್ಲಿ ಸಕ್ರಿಯರಾಗಿದ್ದರು. ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಜಾತಿ ಅಸ್ಪೃಶ್ಯತೆಯ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಲು ಎಲ್ಲ ಜಾತಿ ಜನಾಂಗಗಳಲ್ಲಿರುವ ಶೋಷಿತರನ್ನು ಒಂದುಗೂಡಿಸುವುದು ಅಗತ್ಯ ಎಂದು ಸ್ವಂತ ಅನುಭವದಿಂದ ಅರ್ಥಮಾಡಿಕೊಂಡು ಅವರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗೆ ಸೇರ್ಪಡೆಯಾದರು. ತಾವೇ ಸಾಕಿದ್ದ ಕುರಿ ಮೇಕೆಗಳನ್ನು ಮಾರಾಟ ಮಾಡಿ ಸಂಘಟನೆಯನ್ನು ಕಟ್ಟಲು ಓಡಾಡಿದರು. ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರ ಹಾಸ್ಟೆಲ್ ಸ್ಥಾಪನೆಗೆ ಒತ್ತಾಯಿಸಿ ರಾಯಚೂರು ಜಿಲ್ಲಾ ಕೇಂದ್ರಕ್ಕೆ ನಡೆಸಲಾದ ಕಾಲ್ನಡಿಗೆ ಜಾಥಾದ ಮುಂದಾಳತ್ವವನ್ನು ವಹಿಸಿದ್ದರು. ದಲಿತರಿಗೆ ಸ್ಮಶಾನ ಭೂಮಿಯನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸುತ್ತಾ ಬಂದಿದ್ದ ಅವರು ಶ್ರೀಮಂತ ಭೂಮಾಲೀಕರು ಅತಿಕ್ರಮಣ ಮಾಡಿಕೊಂಡು ಬಳಕೆ ಮಾಡುತ್ತಿದ್ದ ಸರ್ಕಾರಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ದಲಿತರ ಸ್ಮಶಾನಕ್ಕೆ ನೀಡಬೇಕೆಂದು ಆಗ್ರಹಿಸುತ್ತಾ ಬಂದಿದ್ದರು. ಅಚಾನಕವಾಗಿ ಅವರ ಮಗಳೇ ತೀರಿಕೊಂಡಾಗ, ಸಂಘದಲ್ಲಿ ತೀರ್ಮಾನ ಮಾಡಿ, ತಹಶೀಲ್ದಾರರ ಕಛೇರಿಯ ಎದುರು ಮಗಳ ಶವವನ್ನಿಟ್ಟು ಸತ್ಯಾಗ್ರಹ ಮಾಡುವುದಾಗಿ ತಹಶೀಲ್ದಾರ್‌ರಿಗೆ ತಿಳಿಸಿದಾಗ, ಭೂಮಾಲೀಕರು ಕಬಳಿಸಿದ್ದ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಂಡು ಸ್ಮಶಾನಕ್ಕೆ ಅವಕಾಶಮಾಡಿಕೊಡಲಾಯಿತು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲ್ಲೂಕು ಅಧ್ಯಕ್ಷರಾಗಿ ಅವರು ಸಂಘಟನೆಯನ್ನು ವಿಸ್ತರಿಸಲು ತುಂಬಾ ಶ್ರಮಿಸಿದ್ದರು. ಒಂದು ವರ್ಷದ ಹಿಂದೆ ನಿಧನರಾದ ಸಂಗಾತಿ ಬಾಳಪ್ಪ ಅವರನ್ನು ಸಂಘಟನೆಗೆ ಕರೆ ತಂದು ಬೆಳೆಸುವಲ್ಲಿ ಅವರು ಮುಖ್ಯ ಪಾತ್ರ ವಹಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಸಮಿತಿಯ ಸದಸ್ಯರಾಗಿದ್ದರು. ಇವರ ನಿಧನಕ್ಕೆ 'ಜನಶಕ್ತಿ' ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂಪಾದಕೀಯ

ರೈತರ ಒಪ್ಪಿಗೆ ಇಲ್ಲದ ಎಸ್‌ಇಜಡ್ ಬೇಡ

ರೈತರ ತೀವ್ರ ವಿರೋಧದ ನಡುವೆಯೇ ನಂದಗುಡಿ ವಿಶೇಷ ಆರ್ಥಿಕ ವಲಯಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿರುವುದು ಅತ್ಯಂತ ಆಕ್ಷೇಪಾರ್ಹ ಸಂಗತಿಯಾಗಿದೆ. ತಮಗೆ ಗೊತ್ತಿಲ್ಲದೇ ತಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ತೀರ್ಮಾನಗಳು ಆಗುತ್ತಿವೆ ಎಂಬ ವದಂತಿ ರೈತರನ್ನು ಸಹಜವಾಗಿಯೇ ಕಂಗೆಡಿಸಿದೆ. ರಾಜ್ಯ ಸರ್ಕಾರ ಈ ವಿಷಯದಲ್ಲಿ ಎಲ್ಲಾ ವಿವರಗಳೊಂದಿಗೆ ಹೊರ ಬರದಿರುವುದು ರೈತರ ಆತಂಕ ಹೆಚ್ಚಾಗಲು ಕಾರಣವಾಗಿದೆ. ಯೋಜನೆಗೆ ಅನುಮತಿ ನೀಡುವ ಮೊದಲು ಭೂಮಿಯನ್ನು ಕಳೆದುಕೊಳ್ಳಲಿರುವ ರೈತರ ಅಭಿಪ್ರಾಯಗಳನ್ನು ಕೇಳುವ ಕನಿಷ್ಠ ಸೌಜನ್ಯತೆಯನ್ನು ಕೇಂದ್ರ ಸರ್ಕಾರ ತೋರಿಸಬೇಕಾಗಿತ್ತು. ರಾಜ್ಯ ಸರ್ಕಾರವೂ ತನ್ನ ಜವಾಬ್ದಾರಿಯಿಂದ ನುಣುಚಿ ಕೊಳ್ಳುವಂತಿಲ್ಲ. ಯೋಜನೆಯ ಎಲ್ಲ ವಿವರಗಳನ್ನು ಜನರ ಮುಂದಿಡಬೇಕಾದದ್ದು ರಾಜ್ಯ ಸರ್ಕಾರದ ಜವಾಬ್ದಾರಿ. ಇಂತಹ ಗಂಭೀರ ವಿಷಯಗಳಲ್ಲಿ ರಾಜಕೀಯ ಮಾಡುತ್ತಾ ರೈತರ ಬದುಕಿನೊಂದಿಗೆ ಚೆಲ್ಲಾಟವಾಡುವುದು ಸಲ್ಲದು.

ರಾಜ್ಯದ ಅಭಿವೃದ್ಧಿಗೆ, ನಿರುದ್ಯೋಗದ ನಿವಾರಣೆಗೆ ಕೈಗಾರಿಕೆಗಳು ಬೇಕೇ ಬೇಕು. ಕೇವಲ ಕೃಷಿಯನ್ನೇ ಅವಲಂಬಿಸಿರುವ ಒಂದು ದೇಶ, ಒಂದು ಪ್ರದೇಶ ಹಿಂದುಳಿದ ಪ್ರದೇಶವಾಗುತ್ತದೆ. ಕೈಗಾರಿಕೆಗಳ ಸ್ಥಾಪನೆಯೊಂದಿಗೆ ಉದ್ಯೋಗದ ಅವಕಾಶಗಳು ಹೆಚ್ಚಾಗುತ್ತವೆ.

ಕೈಗಾರೀಕರಣ ಒಂದು ಸಹಜವಾದ ಬೆಳವಣಿಗೆ ಆಗಬೇಕು. ಕೃಷಿಯಲ್ಲಿ ಗರಿಷ್ಠ ಬೆಳವಣಿಗೆ ಸಾಧ್ಯವಾದಾಗ ಅದು ಸಹಜವಾಗಿ ಕೈಗಾರೀಕರಣಕ್ಕೆ ದಾರಿ ಮಾಡುತ್ತದೆ. ಪ್ರಗತಿಪರ ಭೂ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ತೀವ್ರ ಕೈಗಾರೀಕರಣದತ್ತ ಸಾಗಲು ಸಾಧ್ಯವಾಗುತ್ತದೆ. ಭೂ ಸುಧಾರಣೆಗಳಿಂದ ಗ್ರಾಮೀಣ ಜನತೆಯು ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗುವುದರೊಂದಿಗೆ ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯು ವಿಸ್ತರಣೆಯಾಗುತ್ತದೆ. ಇದು ಕೈಗಾರಿಕಾ ಬೆಳವಣಿಗೆಗೆ ಅನುಕೂಲ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ.

ಕರ್ನಾಟಕದಲ್ಲಿ ನೈಜ ಸುಧಾರಣೆಗಳನ್ನು ಜಾರಿಗೆ ತರಲೇ ಇಲ್ಲ. 1974 ರ ಭೂ ಸುಧಾರಣಾ ಕಾಯ್ದೆಯಿಂದಾಗಿ ವ್ಯಾಪಕವಾದ ಭೂ ವಿತರಣೆಯೇನೂ ಆಗಲೇ ಇಲ್ಲ. ಕಾಯ್ದೆ ಯಲ್ಲಿರುವ ಲೋಪದೋಷಗಳನ್ನು ಸರಿಪಡಿಸುವ ಬದಲು ಕಾಯ್ದೆಗೆ ಪ್ರತಿಗಾಮಿ ತಿದ್ದುಪಡಿಗಳನ್ನು ಮಾಡಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಯಾವುದೇ ಲಂಗು ಲಗಾಮು ಇಲ್ಲದೆ ದೊರಕಿಸಿಕೊಳ್ಳಲು ಸಾಧ್ಯವಾಯಿತು. ಇಂದು ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಇಲ್ಲಿಂದಲೇ ದಾರಿಯಾಯಿತು.


ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ಬೇಕೇಬೇಕು. ಸಾಧ್ಯವಾದಷ್ಟು ಮಟ್ಟಿಗೆ ಕೃಷಿ ಭೂಮಿಯನ್ನು ಕೈಗಾರಿಕೆಗಳಿಗೆ ಕೊಡಬಾರದು. ಕೃಷಿಗೆ ಯೋಗ್ಯವಲ್ಲದ ಬಂಜರು ಭೂಮಿಯನ್ನೇ ಉಪಯೋಗಿಸುವುದಾಗಬೇಕು. ನಂದಗುಡಿ ವಿಶೇಷ ಆರ್ಥಿಕ ವಲಯಕ್ಕಾಗಿ ಬಂಜರು ಭೂಮಿ ಲಭ್ಯವಿದೆ ಎಂಬ ಪ್ರಸ್ತಾವವಿದ್ದರೂ ಅದನ್ನು ಕಡೆಗಣಿಸಿರುವುದು ಪ್ರಶ್ನಾರ್ಹವಾಗಿದೆ.

ಕೃಷಿ ಭೂಮಿ ಸ್ವಾಧೀನಪಡಿಸುವುದು ಅನಿವಾರ್ಯವಾದಾಗಲೂ ಹಿಡುವಳಿದಾರರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಲೇ ಬೇಕು. ರೈತರು ತಮ್ಮ ಜೀವನಾಧಾರವನ್ನು ಶಾಶ್ವತವಾಗಿ ಕಳೆದುಕೊಳ್ಳುವಾಗ, ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಭೂಮಿಯನ್ನು ಕಿತ್ತುಕೊಳ್ಳುವುದು ಕ್ರೌರ್ಯದ ಪರಮಾವಧಿ ಅಷ್ಟೇ.

ಭೂಮಿ ಕಳೆದುಕೊಳ್ಳುವ ರೈತರಿಗೆ ಯೋಗ್ಯ ಪರಿಹಾರ ಸಿಗಬೇಕು ಎಂದಷ್ಟೇ ಹೇಳಿದರೆ ಸಾಲದು. ಮಾರುಕಟ್ಟೆ ದರಕ್ಕಿಂತಲೂ ಹೆಚ್ಚಿಗೆ ಕೊಡುತ್ತೇವೆ ಎನ್ನುವುದೂ ನ್ಯಾಯವಲ್ಲ. ಭೂಮಿ ಕಳೆದುಕೊಳ್ಳುವ ರೈತರಿಗೆ ಶಾಶ್ವತವಾಗಿ ಆದಾಯ ಬರುವ ರೀತಿಯಲ್ಲಿ ಭೂಮಿಯ ಹಸ್ತಾಂತರ ಆಗಬೇಕು. ಆ ಭೂಮಿಯನ್ನು ಬಳಕೆ ಮಾಡಿ ನಿರ್ಮಾಣವಾಗುವ ಕೈಗಾರಿಕೆಗಳಿಂದ ಬರುವ ಆದಾಯದಲ್ಲಿ ರೈತರಿಗೂ ಒಂದು ಪಾಲು ದೊರೆಯುವಂತಾಗಬೇಕು. ಕೇವಲ ಭೂಮಿ ಕಳೆದುಕೊಳ್ಳುವ ಕುಟುಂಬದವರಿಗೆ ಉದ್ಯೋಗ ನೀಡುವುದೂ ಸಾಲದು. ಅಲ್ಲಿ ಉತ್ಪತ್ತಿಯಾಗುವ ಸಂಪತ್ತಿನಲ್ಲಿ ರೈತರಿಗೂ ಪಾಲು ಸಿಗುವಂತಾಗಬೇಕು. ಇದಕ್ಕಾಗಿ ಭೂ ಸ್ವಾಧೀನ ಕಾಯ್ದೆಯಲ್ಲಿ ಅಗತ್ಯ ತಿದ್ದುಪಡಿಗಳಾಗಬೇಕು. ಅಲ್ಲಿಯವರೆಗೆ ಎಸ್‌ಇಜೆಡ್ ಪ್ರಸ್ತಾವಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡುವುದನ್ನು ನಿಲ್ಲಿಸಬೇಕು.

ನಂದಗುಡಿ ಪ್ರಸ್ತಾವದಲ್ಲಿ ಅಗತ್ಯಕ್ಕಿಂತ ಬಹಳ ಹೆಚ್ಚು ಭೂಮಿ ಸ್ವಾಧೀನ ಮಾಡಲಾಗುತ್ತಿದೆ ಎಂಬ ವದಂತಿ ಇದೆ. ರಿಯಲ್ ಎಸ್ಟೇಟ್ ಕುಳಗಳು ಹೊಂಚು ಹಾಕಿವೆ ಎಂದು ಕೇಳಿ ಬರುತ್ತಿದೆ. ರಾಜ್ಯ ಸರ್ಕಾರದ ಧೋರಣೆ ಪಾರದರ್ಶಕವಾಗಿಲ್ಲ. ಕಾಂಗ್ರೆಸ್ ಪಕ್ಷದ ಎಡಬಿಡಂಗಿತನವೂ ಬಯಲಾಗಿದೆ. ಜನತೆಯ ವಿಶಾಲ ಪ್ರತಿರೋಧದ ಮೂಲಕ ಬಾರೀ ದೊಡ್ಡ ಹಗರಣವನ್ನು ತಡೆಗಟ್ಟಬೇಕಾಗಿದೆ.

ಕೊಂಕಣಿ ಮಂಚ್‌ನ ಅರ್ಥಹೀನ ಹಳಹಳಿಕೆ



ಕರ್ನಾಟಕ-ಗೋವಾದ ಗಡಿಯಲ್ಲಿಗ ಗಡಿಬಿಡಿ! ಉತ್ತರ ಕನ್ನಡ ಜಿಲ್ಲೆಯ ಕೊಂಕಣಿ ಭಾಷಿಕ ಪ್ರದೇಶಗಳನ್ನು ಗೋವಾಕ್ಕೆ ಸೇರಿಸಬೇಕೆಂಬ ಬೇಡಿಕೆಯ ಮೂಲಕ ಜನರ ನಡುವೆ ಅಂತಹ ಪ್ರಚಾರ, ಮನೆ ಮನೆಗೂ ತೆರಳಿ 'ಜನಮತ'ದ ಗಣನೆಗೆ ಕೆಲವರು ಮುಂದಾಗಿದ್ದಾರೆ. ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದ್ದಾರೆ. ಎರಡು ರಾಜ್ಯಗಳ ಜನತೆಯ ನಡುವಿನ ಸೌಹಾರ್ದತೆಯನ್ನು ಕದಡುವ ಈ ವಿಷಯ ಒಂದು ಗಂಭೀರ ಬೆಳವಣಿಗೆ ಹೌದು.

ಕಾರವಾರ, ಜೋಯ್ಡಾ, ಹಳಿಯಾಳ ಈ ಮೂರು ತಾಲ್ಲೂಕಿನ 310 ಹಳ್ಳಿಗಳಲ್ಲಿ ಕೊಂಕಣಿ ಭಾಷೆಯನ್ನು ಆಡುವವರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಅವುಗಳನ್ನು ಗೋವಾಕ್ಕೆ ಸೇರಿಸಬೇಕು ಎಂಬುದು ಕೆಲವರ ಬೇಡಿಕೆ. ಈ ಬೇಡಿಕೆ ಭಾಷಾ ಆಧಾರದ ಮೇಲೆ ಇರುವುದರಿಂದ ಭಾವನಾತ್ಮಕ ಪ್ರಶ್ನೆಯೂ ಆಗಿದೆ. ಅದನ್ನು ಭಾವೋದ್ವೇಕಕ್ಕೆ ತಿರುಗಿಸಲು 'ಗಡಿ ವಿವಾದ' ಎತ್ತಿದವರ ಪ್ರಯತ್ನಗಳು ಹಲವು.

'ಗೋವಾ ಕೊಂಕಣಿ ಏಕೀಕರಣ ಮಂಚ್' ಇದರ ಮುಂಚೂಣಿಯಲ್ಲಿದೆ. ಆ ಪ್ರದೇಶದಲ್ಲಿ ಗುರುತಿಸಲ್ಪಟ್ಟ ರಾಜಕೀಯ ಪ್ರಮುಖರು ಮುಂದೆ ಕಾಣಿಸಿಕೊಳ್ಳುತ್ತಿಲ್ಲವಾದರೂ ಕಾರವಾರದ ಮುನ್ಸಿಪಾಲಿಟಿಯ ಮಾಜಿ ಕೌನ್ಸಿಲರ್ ಆಶಾ ಪಾಲನಕರ, ಅವರ ಪತಿ ಅಶೋಕ ಪಾಲನಕರ ಇದರಲ್ಲಿ ಸಕ್ರಿಯ ಮುಂದಾಳುಗಳು, ಅಶೋಕ್‌ರವರು ಬ್ಯಾಂಕ್‌ನ ಮಾಜಿ ನೌಕರರು. ಇಂತಹ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಹಿಂದೆ 'ಮಹಾರಾಷ್ಟ್ರ ಏಕೀಕರಣ ಸಮಿತಿ'ಯು ಒತ್ತಾಯಿಸುತ್ತು. ಅಲ್ಲಿ ಕೊಂಕಣಿ. ಮರಾಠಿಗಳು ಇದ್ದಾರೆ ಎಂಬುದು ಅವರ ವಾದವಾಗಿತ್ತು. ಆದರೆ ಈ ಪ್ರದೇಶದ ಹಲವು ಜನ ಮನೆಯಲ್ಲಿ ಕೊಂಕಣಿ ಆಡುತ್ತಾರಾದರೂ ಇಂದು ಕನ್ನಡ ಶಾಲೆಯಲ್ಲಿ ಕಲಿತವರು ಅಧಿಕವಾಗಿದ್ದಾರೆ.

ವಿವಾದ ಅಪ್ರಸ್ತುತ

ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲಿ ದೇಶದಲ್ಲಿಯೇ ಗಡಿ ಗುರುತಿಸುವ ಪ್ರಶ್ನೆಗೆ ಒಂದು ಹಂತದ ಇತ್ಯರ್ಥ ದೊರಕಿದ ಮೇಲೆ ಇರಬಹುದಾದ ಕೆಲವು ಸಮಸ್ಯೆಗಳನ್ನೇ ಹಿಡಿದು ಅಲ್ಲಲ್ಲಿ ಆಗೀಗ ಇಂತಹ ಗಡಿ ವಿವಾದ ಹುಟ್ಟು ಹಾಕಿ ಕೆದಕುವುದು ಸರಿಯಲ್ಲ. ಒಂದು ಬಿಕ್ಕಟ್ಟಿನ ಸನ್ನಿವೇಶದಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸಿ ಅದರ ಮರೆಯಲ್ಲಿ ರಕ್ಷಣೆ ಪಡೆಯಲು ಇಂತಹ ಪ್ರಶ್ನೆಗಳನ್ನು ಬಳಸಲು ಸರ್ಕಾರಗಳು, ಕೆಲವು ರಾಜಕೀಯ ಪಕ್ಷಗಳು ಮುಂದಾಗುವುದನ್ನು ಕಾಣುತ್ತೇವೆ. ಈಗಲೂ 'ಕೊಂಕಣಿ' ಪ್ರಶ್ನೆಯಲ್ಲಿ ಅಂತಹ ಯತ್ನಗಳನ್ನು ತಳ್ಳಿ ಹಾಕುವಂತಿಲ್ಲ.



ಗೋವಾಕ್ಕೆ ಸೇರಿಸಬೇಕೆಂಬ ಕೊಂಕಣಿ ಮಂಚ್‌ನ ವಾದ ತಾವು ಕೊಂಕಣಿ ಭಾಷಿಕರು, ಗೋವಾದಲ್ಲಿಯೂ ಕೊಂಕಣಿಯೇ ಪ್ರಧಾನವಾದ ಭಾಷೆ ಎಂಬುದು ಒಂದು ವಾದವಾದರೆ, ಕಾರವಾರ ಒಳಗೊಂಡು ಈ ಪ್ರದೇಶಗಳಿಂದ ದಿನಾಲೂ ಸುಮಾರು 400-500 ಜನರು ಉದ್ಯೋಗಕ್ಕಾಗಿ ಗೋವಾಕ್ಕೆ ಹೋಗಿ ಬರುತ್ತಾರೆ, ಆದ್ದರಿಂದ ಅನ್ನ ಕೊಡುವ ನಾಡಿಗೆ ಸೇರ್ಪಡೆಗೊಳ್ಳುತ್ತೇವೆ ಎಂಬುದು ಇನ್ನೊಂದು ವಾದ. ವಿಚಿತ್ರವೆಂದರೆ ಇಂತಹ ವಾದ ಮಂಡಿಸುವಾಗ ಅವರು ವಿವಿಧ ರಾಜ್ಯಗಳಲ್ಲಿ ವಿವಿಧ ಭಾಷಿಕರು, ಅದರಲ್ಲಿಯೂ ನೆರೆಹೊರೆ ರಾಜ್ಯಗಳ ಜನರು ವಾಸಿಸುವುದು, ಉದ್ಯೋಗಕ್ಕೆ ಹೋಗಿ ಬರುವುದು ತೀರಾ ಸಹಜವಾದುದು ಎಂಬುದನ್ನೇ ಮರೆಯುತ್ತಾರೆ. ಇಂದು ಹಾಗೆ ನೋಡಿದರೆ ಕೊಂಕಣಿ ಭಾಷಿಕರನ್ನು ಒಳಗೊಂಡು ಕಾರವಾರ-ಉತ್ತರ ಕನ್ನಡ ಜಿಲ್ಲೆಯ ಜನ ವಿಶಾಲ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ. ಕೇವಲ ಕೈಗಾರಿಕೆಗಳಲ್ಲದೇ ಬ್ಯಾಂಕಿಂಗ್, ಶೈಕ್ಷಣಿಕ ಕ್ಷೇತ್ರ, ಮಾಹಿತಿ ತಂತ್ರಜ್ಞಾನದಂತಹ ಆಧುನಿಕ ರಂಗಗಳಲ್ಲಿಯೂ ಅಂತಹವರು ಯಥೇಚ್ಛವಾಗಿದ್ದಾರೆ. ಉದ್ಯೋಗದ ಅವಕಾಶಗಳು ಹಾಗೂ ಅಭಿವೃದ್ಧಿ ದೃಷ್ಟಿಯಲ್ಲಿ ಗೋವಾಕ್ಕಿಂತ ಕರ್ನಾಟಕದಲ್ಲೇ ಅವಕಾಶಗಳು ಅಧಿಕವಾಗಿವೆ. ಮೇಲಾಗಿ ಗೋವಾ ರಾಜ್ಯವು ಪ್ರವಾಸೋದ್ಯಮವನ್ನೇ ಪ್ರಧಾನವಾಗಿ ಆಧರಿಸಿರುವುದರಿಂದ ಇಂಗ್ಲೀಷ್ ಭಾಷೆಯೇ ಅಲ್ಲಿ ಪ್ರಮುಖವಾಗಿ ಬಳಕೆಯಾಗುತ್ತಿದೆ. ಈ ಅಂಶಗಳನ್ನು ಅವರ‍್ಯಾಕೆ ಗಮನಿಸುವುದಿಲ್ಲ.

ಸರ್ಕಾರದ ಹೊಣೆ

ಇದೇ ಸಂದರ್ಭದಲ್ಲಿ ಒಂದು ರೀತಿಯ ಪರಕೀಯ ಭಾವನೆ ಅಲ್ಲಿನ ಜನರಿಗ್ಯಾಕೆ ಬಂದಿದೆ ಎಂಬುದನ್ನು ಪರಿಶೀಲಿಸಬೇಕು. ಭಾರತ ಅನುಸರಿಸುತ್ತಿರುವ ಬಂಡವಾಳಶಾಹಿ-ಭೂ ಮಾಲೀಕ ವರ್ಗದ ಅಭಿವೃದ್ಧಿ ಪಥದ ಪರಿಣಾಮ ನಿರುದ್ಯೋಗ, ಆರ್ಥಿಕ ಅನಭಿವೃದ್ಧಿ, ಭಾಷೆ -ಸಂಸ್ಕೃತಿಯನ್ನು ರಕ್ಷಿಸಲು ವೈಜ್ಞಾನಿಕವಾದ ಪ್ರಜಾಸತ್ತಾತ್ಮಕ ಕ್ರಮಗಳು ಇಲ್ಲದಿರುವುದೇ ಪ್ರಮುಖ ಕಾರಣಗಳಾಗಿವೆ. ಇದು ಇಡೀ ದೇಶದ ಎಲ್ಲಾ ರಾಜ್ಯಗಳು ಎದುರಿಸುತ್ತಿರುವ ಸಮಸ್ಯೆಗಳಾಗಿವೆ. ಅವುಗಳ ಇತ್ಯರ್ಥಕ್ಕೆ ಆಯಾ ರಾಜ್ಯಗಳಲ್ಲಿ ಯತ್ನಿಸುವಾಗಲೇ ದೇಶದ ಎಲ್ಲರೊಡನೆ ಕೈ ಜೋಡಿಸುವುದು ಅತ್ಯಗತ್ಯ.

ಪ್ರಜಾಸತ್ತಾತ್ಮಕ ಆಶಯಗಳ ಪರಿಗಣನೆ ಅಗತ್ಯ

ಹಾಗೆಯೇ ಉ.ಕನ್ನಡ ಜಿಲ್ಲೆಯ ಆ ಪ್ರದೇಶಗಳಲ್ಲಿ ಅಭಿವೃದ್ಧಿಯ ಪ್ರಶ್ನೆಗಳು ಇವೆ. ಜೋಯ್ಡಾದಂತಹ ತಾಲ್ಲೂಕು ಅತ್ಯಂತ ಹಿಂದುಳಿದಿದೆ. ಒಂದು ವೈದ್ಯಕೀಯ ಶುಶ್ರೂಷೆಗೂ ಬೆಟ್ಟ-ಕಣಿವೆಗಳನ್ನು ದಾಟಿ ಪ್ರಯಾಸ ಪಟ್ಟು ವೈದ್ಯಕೀಯ ಕೇಂದ್ರ ತಲುಪಬೇಕಾದ ಸ್ಥಿತಿ ಇದೆ. ಇಂತಹ ಪ್ರಶ್ನೆಗಳ ಬಗ್ಗೆ ಸರ್ಕಾರಗಳು ಗಮನಹರಿಸಬೇಕಿದೆ. ಹಾಗೆಯೇ ಕೊಂಕಣಿಯನ್ನು ಅಲ್ಲಿನ ಆಡಳಿತದ ಎರಡನೇಯ ಭಾಷೆಯನ್ನಾಗಿ ಅಳವಡಿಸಿಕೊಳ್ಳಬೇಕು ಎಂಬುದು ಪ್ರಜಾಸತ್ತಾತ್ಮಕವಾಗಿದೆ. ಇದು ಇತರೆ ಅಲ್ಪಸಂಖ್ಯಾತ ಭಾಷೆಗಳಿಗೂ ಅನ್ವಯಿಸುತ್ತದೆ. ಯಾಕೆಂದರೆ ಭಾಷೆಯಿರುವುದು ಜನತೆಯೊಂದಿಗೆ ಸಂವಾದಿಸಲು ಇಂತಹ ಸಮಸ್ಯೆಗಳನ್ನು ಬಗೆಹರಿಸಿದ್ದ ಸರ್ಕಾರ ಮುಂದಾಗಬೇಕು, ಸರ್ಕಾರದ ನಿರ್ಲಕ್ಷ್ಯವೂ ಇಂತಹ ಭಾಷಾ ಸಂಕುಚಿತ ಚಳುವಳಿಗೆ ಎಡೆ ಮಾಡಿಕೊಡುವಂತಹದ್ದು, ಆ ಮೂಲಕ ಇದು ಜನರ ನಡುವೆ ಒಡಕು ತಂದು ಒಗ್ಗಟ್ಟನ್ನು ದುರ್ಬಲಗೊಳಿಸಲು ಅವಕಾಶ ನೀಡುವುದು.

ಕನ್ನಡ ರಕ್ಷಣಾ ವೇದಿಕೆಯ ಪುಂಡಾಟಿಕೆ

ಇಂತಹ ಪ್ರಶ್ನೆಗಳು ಎದ್ದು ಬಂದಾಗ ಅತ್ಯಂತ ಸಹನೆ-ತಾಳ್ಮೆಯಿಂದ ಪರಿಹಾರ ಕಂಡುಕೊಳ್ಳುವುದು ಅಗತ್ಯ. ಕೊಂಕಣಿ-ಕನ್ನಡ ಭಾಷೆಗಳ ನಡುವೆ ಸ್ಫೋಟಕ ಸನ್ನಿವೇಶ ನಿರ್ಮಿಸಬಹುದಾದ ಪ್ರಶ್ನೆಯನ್ನು ಜಾಗರೂಕತೆಯಿಂದ ನಿರ್ವಹಿಸಬೇಕಾಗುತ್ತದೆ. ಆದರೆ ಕನ್ನಡ ರಕ್ಷಣೆ ಹೆಸರಿನಲ್ಲಿ 'ಕರ್ನಾಟಕ ರಕ್ಷಣಾ ವೇದಿಕೆ' ಯ ಪ್ರವೀಣ್ ಶೆಟ್ಟಿ ಬಣ

ಪುಟ 5 ಕ್ಕೆ



ಸಿ.ಯತಿರಾಜು

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ಕೇವಲ ಸಿಪಾಯಿ ದಂಗೆ ಎಂಬುದಷ್ಟಕ್ಕೆ ಸೀಮಿತಗೊಳಿಸುವುದು ಬ್ರಿಟಿಷರ ಆಕಾಂಕ್ಷೆಯಾಗಿತ್ತು. ಆದರೆ ಹಲವು ಬ್ರಿಟಿಷ್ ಇತಿಹಾಸಕಾರರೇ ಇದನ್ನು ಅಲ್ಲಗಳೆಯುತ್ತಾರೆ...

1857 ರ ಹೋರಾಟ ಸಿಪಾಯಿ ದಂಗೆಯೇ ?

"ಸಿಪಾಯಿದಂಗೆ" ಎನ್ನುವ ಪದವನ್ನು ಮೊಟ್ಟ ಮೊದಲು ಬಳಸಿದವರು ಸೆಕ್ರಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಅರ್ಲ್ ಸ್ಟ್ಯಾನ್ಲಿ. ಅವರು ಬ್ರಿಟಿಷ್ ಪಾರ್ಲಿಮೆಂಟಿಗೆ ತಮ್ಮ ವರದಿಯನ್ನು ಕಳುಹಿಸುವಾಗ ಸಿಪಾಯಿಗಳ ದಂಗೆ ಎಂಬ ಪದವನ್ನು ಬಳಸಿದರು. ಆನಂತರ ಈ ವಿಷಯವಾಗಿ ಬರೆದ ಬಹುಪಾಲು ಆಂಗ್ಲ ಬರಹಗಾರರಾದ ಚಾರ್ಲ್ಸ್ ಬಾಲ್, ಜಿ.ಡಬ್ಲ್ಯೂ. ಫಾರೆಸ್ಟ್, ಟಿ.ಆರ್. ಹೋಮ್ಸ್, ಜೆ.ಡಬ್ಲ್ಯೂ.ಕೇ, ಜಿ.ಬಿ. ಮಾಲ್‌ಸನ್, ಸಿ.ಟಿ. ಮೆಟ್‌ಕಾಫ್, ಅರ್ಲ್ ರಾಬರ್ಟ್ಸ್ ಇತರರು ಈ ಬಂಡಾಯವನ್ನು ವಿವರಿಸಲು ಇದೇ ಪದವನ್ನು ಬಳಸುತ್ತಾ ಬಂದು ಇತಿಹಾಸದ ಪುಟಗಳಲ್ಲಿ 1857ರ ಯುದ್ಧಗಳನ್ನು ಸಿಪಾಯಿದಂಗೆ ಎಂದೇ ಪ್ರಸಿದ್ಧವಾಗಿ ಕರೆಯಲಾಗಿದೆ.


1857 ರ ಸಿಪಾಯಿದಂಗೆ ಭಾರತದ ಮೊಟ್ಟ ಮೊದಲ ಸಿಪಾಯಿ ದಂಗೆಯೇನಾಗಿರಲಿಲ್ಲ. 1764ರಲ್ಲಿ ಬಂಗಾಳದಲ್ಲಿ, ವೆಲ್ಲೂರಿನಲ್ಲಿ 1806 ರಲ್ಲಿ, ಮತ್ತು 1824 ರಲ್ಲಿ ಬ್ಯಾರಕ್‌ಪುರ್‌ನಲ್ಲಿ ಬಂಡೆದಿದ್ದ ಸೈನಿಕರನ್ನು ಅತ್ಯಂತ ಕ್ರೂರವಾಗಿ ಹಾಗೂ ಬರ್ಬರವಾಗಿ ಹತ್ತಿಕ್ಕಿ ಬಂಡಾಯಗಳನ್ನು ಬಗ್ಗು ಬಡಿಯಲಾಗಿತ್ತು. 1857ರ ಜನವರಿಯಲ್ಲಿ ಸಿಪಾಯಿದಂಗೆ 'ಡಂಡಂ' ಸೈನಿಕ ನೆಲೆಯಲ್ಲಿ ಆರಂಭಗೊಂಡಿತು. ಬ್ಯಾರಕ್‌ಪುರ್‌ನಲ್ಲಿ ಮಂಗಳ ಪಾಂಡೇ ಎಂಬ ವೀರ ಯೋಧ ಸೈನ್ಯದ ಉನ್ನತ ಅಧಿಕಾರಿಗಳ ಮೇಲೆ ಗುಂಡಿನ ಧಾಳಿ ಮಾಡುವ ಮೂಲಕ ಮಾರ್ಚ್‌ನಲ್ಲಿ ಬಂಡಾಯದ ಮೊದಲ ಕಿಡಿಯನ್ನು ಸಿಡಿಸಿದ.

1857ರ ಏಪ್ರಿಲ್ 24 ರಂದು ಮೀರತ್‌ನಲ್ಲಿ 99 ಸೈನಿಕರು ಕೊಬ್ಬು ಸವರಿದ ಗುಂಡುಗಳನ್ನು ಬಳಸಲು ನಿರಾಕರಿಸಿದರು. 3ನೇ ದೇಶಿ ಅಶ್ವದಳದ 85 ಸೈನಿಕರನ್ನು ವಜಾಗೊಳಿಸಿ 10 ವರ್ಷಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಈ ಘಟನೆ ಸೈನಿಕ ಬಂಡಾಯಕ್ಕೆ ಒಂದು ಹೊಸ ತಿರುವನ್ನು ನೀಡಿತು. ಮೇ 9 ಮತ್ತು 10 ರಂದು ಬ್ರಿಟಿಷ್ ಅಧಿಕಾರಿಗಳು ಪೂರ್ಣ ಪ್ರಮಾಣದ ಬಂಡಾಯವನ್ನೆದುರಿಸಬೇಕಾಗಿ ಬಂತು. ಜೈಲು ಗೋಡೆಗಳನ್ನು ಕೆಡವಿ ಬಂಧನದಲ್ಲಿದ್ದ ಎಲ್ಲಾ ಸೈನಿಕ ಸಂಗಾತಿಗಳನ್ನು ಸ್ವತಂತ್ರಗೊಳಿಸಲಾಯಿತು. ಬಂಡೆದ್ದ ಸೈನಿಕರು ಬ್ರಿಟಿಷ್ ಸೈನ್ಯಾಧಿಕಾರಿಗಳನ್ನು ಕೊಲ್ಲುವ ಮೂಲಕ ಪೂರ್ಣ ಸ್ವರೂಪದಲ್ಲಿ 1857ರ ಸೈನಿಕ ಬಂಡಾಯ ಆರಂಭ ವಾಯಿತು.

ಹೀಗೆ ರೊಚ್ಚಿಗೆದ್ದ ಸೈನಿಕರು "ಚಲೋ ದಿಲ್ಲಿ" ಎಂಬ ಘೋಷಣೆಯೊಂದಿಗೆ ಮೇ 11 ರಂದು ದೆಹಲಿ ತಲುಪಿದರು. ಹೀಗೆ ಬಂಡಾಯವೆದ್ದು ಬಂದ ಸೈನಿಕರನ್ನು ದೆಹಲಿಯ ಪದಾತಿ ಸೈನಿಕರು ಸ್ವಾಗತಿಸಿದರು. ದೆಹಲಿಯನ್ನು ಸಂಪೂರ್ಣವಾಗಿ ಬಂಡೆದ್ದ ಸೈನಿಕರು ತಮ್ಮ ವಶಕ್ಕೆ ತೆಗೆದುಕೊಂಡರು.

ಬ್ರಿಟಿಷರಿಂದ ಮೂಲೆಗೆ ತಳ್ಳಲ್ಪಟ್ಟು, ನಿವೃತ್ತಿ ವೇತನ ಪಡೆದುಕೊಂಡು ಕೇವಲ ಸಾಂಪ್ರದಾಯಿಕ ಆಚರಣೆಗಳಿಗೆ ಮಾತ್ರ ನಾಮಕಾವಸ್ಥೆ ಅರಸನಾಗಿದ್ದ, ಮೊಘಲರ ಕಟ್ಟಕಡೆಯ ದೊರೆ. ಬಹಾದ್ದೂರ್ ಷಾ ಜಫರ್‌ನನ್ನು ಹಿಂದೂಸ್ಥಾನದ ಸಾಮ್ರಾಟನೆಂದು ಘೋಷಿಸಲಾಯಿತು. ಆರಂಭದಲ್ಲಿ ಈ ಹೊಣೆಯನ್ನು ಹೊರಲು ನಿರಾಕರಿಸಿದರೂ ನಂತರ ಸೈನಿಕರ ಬಂಧಿಯಾಗಿ ಅವರು ಈ ಸ್ಥಾನವನ್ನಲಂಕರಿಸಿದರು. ಖ್ಯಾತ ಇತಿಹಾಸಕಾರರಾದ ಬಿಪಿನ್ ಚಂದ್ರ ತಮ್ಮ "ಮಾಡ್ರನ್ ಇಂಡಿಯಾ" ಪುಸ್ತಕದಲ್ಲಿ "ಈ ಏಕೈಕ ಕಾರ್ಯದ ಮೂಲಕ ಸಿಪಾಯಿಗಳು ಸೈನಿಕ ಬಂಡಾಯ" ದ ಸ್ವರೂಪವನ್ನು "ಕ್ರಾಂತಿಕಾರಿ ಯದ್ಧ" ವಾಗಿ ರೂಪಾಂತರಿಸಿದರು ಎಂದು ಅಭಿಪ್ರಾಯ ಪಡುತ್ತಾರೆ.

ಸೈನಿಕರಿಂದ ಈ ಬಂಡಾಯ ಆರಂಭಗೊಂಡಿದ್ದರಿಂದ ಜನಪ್ರಿಯವಾಗಿ ಇದನ್ನು ಸೈನಿಕ ದಂಗೆ ಎಂದು ಕರೆಯುವುದು ಎಷ್ಟು ಸರಿ ಎಂಬುದು ಒಂದು ದೊಡ್ಡ ವಿವಾದವಾಗಿ ಇಂದಿಗೂ ಚರ್ಚೆಗೆ ಒಳಗಾಗಿದೆ. "ಸಿಪಾಯಿ ದಂಗೆ" ಎಂದು ಕರೆದು ಅದರ ಪ್ರಾಮುಖ್ಯತೆಯನ್ನು ಹಾಗೂ ಮಹತ್ವವನ್ನು ಕಡೆಗಣಿಸಲಾಗಿದೆ ಎಂದು ಅನೇಕ ಇತಿಹಾಸಕಾರರು ಅಭಿಪ್ರಾಯಪಟ್ಟರೂ 1857ರ ಹೋರಾಟದಲ್ಲಿ ಸೈನಿಕರು ಅತ್ಯಂತ ನಿರ್ಣಾಯಕ ಪಾತ್ರವಹಿಸಿದ್ದೇ ಅಲ್ಲದೆ ಅದರ ಮುಂಚೂಣಿ ನಾಯಕರಾಗಿ ನೇತೃತ್ವ ನೀಡಿರುವುದನ್ನು ನಿರಾಕರಿಸಲಾಗದು.



1858ರಲ್ಲಿ ಪಾರ್ಲಿಮೆಂಟ್‌ನಲ್ಲಿ ಮಂಡಿಸಲಾದ ವರದಿಯಲ್ಲಿ ಬಂಗಾಳ ಸೈನ್ಯದಲ್ಲಿದ್ದ 1,35,000 ಸೈನಿಕರ ಪೈಕಿ ಕೇವಲ 7000 ಜನ ಮಾತ್ರ ಬ್ರಿಟಿಷರಿಗೆ ನಿಷ್ಠರಾಗಿ ಉಳಿದರು. ಉಳಿದ ಸುಮಾರು 1,28,000 ಸೈನಿಕರು 1857ರ ಯುದ್ಧಗಳಲ್ಲಿ ಅತ್ಯಂತ ವೀರಾವೇಶದಿಂದ ಮುಂಚೂಣಿಯಲ್ಲಿ ನಿಂತು ಧೀರೋದಾತ್ತ ಹೋರಾಟ ನಡೆಸಿದರು. ಈ ಎಲ್ಲಾ ಯುದ್ಧಗಳ ಬೆನ್ನೆಲುಬಾಗಿ ಅವರು ಹೋರಾಟ ಮಾಡಿದರು. ಬಂಗಾಳ ಸೈನ್ಯದ ಬಹುಪಾಲು ಸೈನಿಕರು ಈ ಯುದ್ಧಗಳಲ್ಲಿ ಹೋರಾಡುತ್ತಾ ರಣರಂಗದಲ್ಲಿ ಜೀವ ತೆತ್ತು ಹುತಾತ್ಮರಾದರು. ಬ್ರಿಟಿಷರಿಂದ ಸೆರೆಹಿಡಿಯಲ್ಪಟ್ಟ ಅನೇಕ ಸೈನಿಕರನ್ನು ತುಪಾಕಿ ಬಾಯಿಗೆ ಕಟ್ಟಿ ಉಡಾಯಿಸಲಾಯಿತು. ಹಲವರನ್ನು ಸಾರ್ವಜನಿಕವಾಗಿ ಅವಮಾನಿಸಿ, ಕ್ರೂರವಾಗಿ ಹಿಂಸಿಸಿ ಬಹಿರಂಗವಾಗಿ ಗಲ್ಲಿಗೇರಿಸಲಾಯಿತು. ತಮ್ಮ ಸಂಗಾತಿಗಳಿಗೆ ಬಂದ ದುರ್ಗತಿ ತಮಗೂ ಬರುವುದು ಖಚಿತವಾಗಿದ್ದರೂ, ಎಂದಿಗೂ ಎದೆಗುಂದದ ಬಂಗಾಳ ಸೈನಿಕರು ತಪ್ಪಿಸಿಕೊಳ್ಳುವ ಇಲ್ಲವೆ ಶರಣಾಗುವ ಮನೋಭಾವವನ್ನು ಅವರು ಎಲ್ಲಿಯೂ ತೋರಿಸಲಿಲ್ಲ. ಬ್ರಿಟಿಷ್ ಆಳ್ವಿಕೆಯ ವಿರುದ್ಧ ಅವರು ತೋರಿದ ದೃಢತೆ, ಪ್ರತಿರೋಧ, ಅನನ್ಯವಾದದ್ದು. ಈ ಹೋರಾಟಗಳಲ್ಲಿ ಅಸಾಧಾರಣ ಸವಾಲುಗಳನ್ನೆದುರಿಸಿ, ಅಪಾರ ಕಷ್ಟ ಕಾರ್ಪಣ್ಯಗಳಿಗೆ ಹೆದರದೆ ತಮ್ಮ ಪ್ರಾಣಗಳನ್ನೇ ಪಣಕ್ಕಿಟ್ಟು ಹೋರಾಡಿ ರಾಷ್ಟ್ರೀಯ ಇತಿಹಾಸದ ಬಿತ್ತಿಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ 1857ರ ಯುದ್ಧ ಖಂಡಿತವಾಗಿಯೂ ಸಿಪಾಯಿಗಳ ನೇತೃತ್ವದಲ್ಲಿ ನಡೆದ ಸಾಮ್ರಾಜ್ಯಶಾಹಿ ವಿರೋಧಿಯುದ್ಧ. ಈ ಹೋರಾಟದಿಂದ ಸ್ಫೂರ್ತಿ ಪಡೆದು, ಪ್ರೇರಣಗೊಂಡು ಮತ್ತು ಕೆಲವು ಸಂದರ್ಭಗಳಲ್ಲಿ ಬೇರೆಬೇರೆ ಪ್ರದೇಶಗಳ ಸೈನಿಕರು ಮತ್ತು ಜನವಿಭಾಗಗಳು ತಮ್ಮದೇ ಆದ ಕಾರಣಗಳಿಗೆ ಯುದ್ಧರಂಗಕ್ಕೆ ಪ್ರವೇಶಿಸಲು ವೇದಿಕೆ ಸಿದ್ಧಪಡಿಸಿದ್ದು ಈ ಸೈನಿಕ ಬಂಡಾಯ ಎಂಬುದನ್ನು ಯಾರೂ ನಿರಾಕರಿಸಲಾಗದು.

ಪುಟ 7 ಕ್ಕೆ

ಶೂಟಿಂಗ್ ಅಲ್ಲ ಕಣ್ರಲಾ...

ಕನ್ನಡಿ

"ಲೇ ಬೋರ, ತಿಮ್ಮ ನಡಿರ್ಲ ಪಕ್ಕದ ಗೋರ್ನಳ್ಳಿಲಿ ಸಿನ್ಮಾ ಸೂಟಿಂಗ್ ನಡೀತೈತಂತೆ ಓಗನ" ಎಂದ ಸಿದ್ದ. 'ಔದಾ... ಯಾವ ಸಿನ್ಮಾ? ಬೋರ ಕೇಳಿದ. "ಈರೋ ಯಾರ್ಲ?" ತಿಮ್ಮ ಕೇಳಿದ. "ಅದ್ಯಾವ್ದೋ ಡ್ರಾಮ ವಾಸ್ತವ" ಅಂತ ಸಿನ್ಮಾ ಅಂತೆ. "ಈರೋ ಅದ್ಯಾರೋ 'ದೊರೆ' ಅಂತೆ" ಎಲ್ಲಾ ಮಾಹಿತಿ ಸಂಗ್ರಹಿಸಿದ ಹೆಮ್ಮೆಯಿಂದ ಸಿದ್ದ ಹೇಳಿದ. 'ಈರೋಯಿನ್ ಯಾರ್ಲ? ಜೊಲ್ಲುಸುರಿಸುತ್ತಾ ಬೋರ ಕೇಳಿದ'. "ಇಬ್ರು ಮೂರ್ ಜನ ಅವ್ರಂತೆ. ಆದ್ರೆ ಇಲ್ಲಿಗೆ ಬರಾಕುಲ್ವಂತೆ" ಸಿದ್ದ ಹೇಳಿದ.

'ಅಂಗಾರೆ ಅಲ್ಲಿಗೋಗಿ ಮಾಡೋದೇನೈತ್ಲ? ಓಗ್ಲಿ ವಿಲನ್ ಬತ್ತನೆ? ಫೈಟಿಂಗ್ ಸೀನ್ ಏನಾರ ಐತಾ? ತಿಮ್ಮ ಕೇಳಿದ. 'ನೋಡ್ರಪ್ಪ ನೀವು ಬಾರಿ ಸೋಮಾರಿಗಳು. ಎಲ್ಲಾ ಇಲ್ಲೇ ಕೇಳ್ಕುತೀದೀರ. ಈಗೇನು ಬತ್ತಿರೋ ಇಲ್ವೋ ಅಷ್ಟೇಳಿ' ಸಿದ್ದ ಹೊರಡಲು ಸಿದ್ದನಾದ.

"ಏನ್ರಪ ಎಲ್ಲ ಯಾವ ಕಡೆ ಹೊರಟ್ರಿ"? ಎಂದು ಅಲ್ಲಿಗೆ ಬಂದ ರಾಜ ಕೇಳಿದ. ಸಿದ್ದ ಎಲ್ಲ ವಿವರ ಹೇಳಿದ. "ಥತ್ ದಡ್ಡ ಬಡ್ಡಿ ಮಕ್ಳ. ಅದು ಸಿನ್ಮಾ ಶೂಟಿಂಗ್ ಅಲ್ಲ ಕಣ್ರಲಾ... ಮಂತ್ರಿ ಅಲ್ಲಿ ಮಲಕ್ಕೊಳೋಕೆ ಬರತ್ತಾಯಿದಾರೆ. ಅದನ್ನ ನೀವು ಶೂಟಿಂಗ್ ಅಂತ ತಿಳ್ಕಂಡಿದೀರಲ್ಲ..." ರಾಜ ಗದರಿದ. "ಅಂಗಾರೆ ಮತೆ 'ಡ್ರಾಮ ವಾಸ್ತವ' ಅಂದ್ರಲ್ಲ ಅದೇನು? ಸಿದ್ದ ಕೇಳಿದ. "ಡ್ರಾಮ ವಾಸ್ತವ ಅಲ್ವೋ ಸಿದ್ದ. ಅದು 'ಗ್ರಾಮ ವಾಸ್ತವ್ಯ' ಅಂತ ರಾಜ ಹೇಳಿದ.

"ಅಂಗಂದ್ರೇನು?" ಬೋರ ಕೇಳಿದ. "ಹಳ್ಳೀಲಿ ಮಲಗಿಕೊಳ್ಳೋದು ಅಂತ" ರಾಜ ಅವರಿಗೆ ಅರ್ಥ ಮಾಡಲೆತ್ನಿಸಿದ. "ಮತೆ, ದೊರೆ ಬತ್ತಾಯಿದಾರೆ ಅಂದ ಸಿದ್ದ" ತಿಮ್ಮ ಕೇಳಿದ. "ದೊರೆನೂ ಇಲ್ಲ ಪಾಳೆಗಾರ್ನೂ ಇಲ್ಲ. ಬರೋದು ಮುಖ್ಯಮಂತ್ರಿ" ಎಂದ ರಾಜ.

"ಅಂಗಾರೆ ಅಳ್ಳಿಲಿ ಮಕ್ಕೊಳೋ ಮಂತ್ರಿನ ಅವ್ರು?" ಬೋರ ಕೇಳಿದ. "ಹಂಗಲ್ಲ ಹಳ್ಳಿ ಜನಗಳ ಕಷ್ಟ ಸುಖ ತಿಳ್ಕೊಳೋಕೆ ಬರ್ತಾರಂತೆ" ಎಂದ ರಾಜ. 'ಅಂಗಾರೆ ನಮ್ಮಳ್ಳಿಗೂ ಕರ್ಕನ. ನಮ್ಮ ತೊಂದ್ರೆ ತಾಪತ್ರೆಗಳೂ ತೀರ್ತವೇನೋ' ಎಂದ ಬೋರ. 'ಆ ಕೆಲ್ಸ ಮಾತ್ರ ಮಾಡ್ಬೇಡಿ. ನಿಮ್ಮ ತೊಂದ್ರೆ ತಾಪತ್ರಯಗಳು ಇನ್ನೂ ಜಾಸ್ತಿ ಆಗ್ತದೆ' ಎಂದ ರಾಜ. "ಅಂದೆಂಗೆ"? ಕೇಳಿದರು ಮೂವರು. ಅದೆಲ್ಲ ಒಂದು ದಿನ ಸಿನಿಮಾ ಶೂಟಿಂಗ್ ಮಾಡ್ದಂಗೆ. 'ಆಮೇಲೆ ಏನೂ ಉಳ್ಯಾಕಿಲ್ಲ ಎಲ್ಲ ಕಿತ್ಕೊಂಡೋಗ್ತಾರೆ' ಎಂದ ರಾಜ. "ಆದ್ರೂ ಸೂಟಿಂಗ್ ನೋಡ್‌ದಂಗಾಯ್ತದೆ ನಮ್ಮಳ್ಳಿಗೂ ಕರ್ಕನ" ತಿಮ್ಮ ಕೇಳಿದ ಆಸೆಯಿಂದ.

"ಅವ್ರು ಹಾಗೆಲ್ಲ ಸುಮ್‌ಸುಮ್ನೆ ಬರೋದಿಲ್ಲ. ಬರೋದಿಕ್ಕೆ ನಿಮ್ಮ ಹಳ್ಳೀಲಿ ಏನಾದ್ರೂ ವಿಶೇಷ ಇರ್ಬೇಕು" ಎಂದ ರಾಜ. 'ಅಂಗಾರೆ ಗೋರ್ನಳ್ಳಿಲಿ ಅಂಥ ಇಸೇಸ ಏನೈತೆ?' ಸಿದ್ದ ಲಾ ಪಾಯಿಂಟ್ ಹಾಕಿದ.

"ಅವ್ರು ಒಂಥರಾ ಚಾಲೆಂಜ್ ಮನುಷ್ಯ. ಯಾರಾದ್ರೂ ಇಂಥೋರ್ ಮನೆಗೋಗ್ಲಿ ನೋಡಣ ಅಂದ್ರೆ, ಸಾಕು ಅಂಥೋರ್ ಮನೆಗೋಗಿ ಮನಿಕ್ಕುಬಿಡ್ತರೆ. ಮೇಲ್ಜಾತಿ ಕೆಳ ಜಾತಿ ಬೇರೆ ಬೇರೆ ಧರ್ಮ. ಎಲ್ಲಾ ಥರ ಕಾಯ್ಲೆ ಕಸಾಲೆ ಇರೋರ್ ಮನೇಗೆಲ್ಲ ಹೋಗಿ ಮಲಿಕ್ಕೊಂಡ್ ಬಂದಿದ್ದಾರೆ' ಎಂದ ರಾಜ.

"ಸರಿ ಕನಪ್ಪ, ಗೋರ್ನಳ್ಳಿ ಇಸೇಸ ಏನು ಅಂತ? ಸಿದ್ದ ಕೇಳಿದ. "ಅದ್ಯಾರೋ. ಎಂಥೆಂತೋರ ಮನೇಲಿ ಮಕ್ಕೋತೀರಲ್ಲ ಹುಚ್ ನಾಯಿ ಕಚ್ದೋರ ಮನೇಲಿ ಯಾಕೆ ಮನಿಕ್ಕೊಂಡಿಲ್ಲ? ಅಂತ ಚಾಲೆಂಜ್ ಹಾಕುದ್ರಂತೆ ಅದಕ್ಕೆ ಗೋರ್ನಳ್ಳಿಲಿ ಹತ್ತು ಜನಕ್ಕೆ ಹುಚ್‌ನಾಯಿ ಕಚ್ಚಿತ್ತಲ್ಲ. ಅದಕ್ಕೆ ಅಲ್ಲಿಗೆ ಬರ್ತಾಯಿದ್ದಾರಂತೆ ರಾಜ ಕೇಳಿದ.

"ಅಂಗಾರೆ ನಮ್ಮ ತೋಂದ್ರೆ ತಾಪತ್ರೆಗಳು ಏನೂ ಬಗೆ ಹರ್ಯಂಗಿಲ್ಲ ಅನ್ನು?" ಎಂದ ಬೋರ, "ಯಾರೋ ಬಂದು ಒಂದ್ ದಿನ ಮಲಿಕ್ಕೊಂಡೋದ ತಕ್ಷಣ ಬಗೆ ಹರ್ಯೋ ತಾಪತ್ರಯಗಳೇನ್ರಲಾ ನಿಮ್ದು? ನಡೀರಿ ನಡೀರಿ ಸುಮ್ನೆ ಕೆಲ್ಸ ನೋಡೋಗ್ರಿ" ಎಂದ ರಾಜ.

■ ವಿ. ಶ್ರೀನಿವಾಸ


ಆದಿವಾಸಿಗಳ ರಕ್ಷಣೆಗೆಂದು ಸಶಸ್ತ್ರ ತರಬೇತಿ ನಡೆಸಿ ದಳಗಳನ್ನು ರೂಪಿಸಿದ್ದು, ಅದನ್ನು ಸದೆಬಡಿಯಲು ಪೊಲೀಸರು ಕಾರ್ಯಾಚರಣೆಗೆ ಇಳಿದಿದ್ದು ಹಲವಾರು ಜೀವಗಳನ್ನು ಬಲಿತೆಗೆದುಕೊಂಡಿದೆ. ಕಾಡಿನೊಳಗಿನ ಕಿಚ್ಚು ನಾಡಿನ ಯುವ ಚೇತನಗಳನ್ನು ದಹಿಸುತ್ತಿದೆ. ಇದು ಹೀಗೆ ಉರಿಯಬೇಕೆ?

ಮಲೆನಾಡಿನಲ್ಲಿ ನಕ್ಸಲರು

ನಾಡು ಸುಡುವ ಕಾಡು ಕಿಚ್ಚು

ಪಶ್ಚಿಮ ಘಟ್ಟದ ಹಸಿರು ಕಾನನ ಕಣಿವೆಗಳ ಡುವೆ ಮತ್ತೊಮ್ಮೆ ಗುಂಡಿನ ಮೊರೆತ ಕೇಳಿದೆ. ಲೈ 10 ರಂದು ಬೆಳಿಗ್ಗೆ ನಡೆದ ಾರ್ಯಾಚರಣೆಯಲ್ಲಿ ಇಬ್ಬರು ನಕ್ಸಲೀಯರು ಳಗೊಂಡು ಸಕ್ರಿಯ ಬೆಂಗಲಿಗರೂ ಸೇರಿದಂತೆ ಟ್ಟು 5 ಜನ ಪೊಲೀಸರ ಗುಂಡಿಗೆ ಹತ್ಯೆಯಾಗಿದ್ದಾರೆ. ಇದು ತಲ್ಲಣಕಾರಿ ಘಟನೆ.

ಈ ಘಟನೆ ಆಸುಪಾಸಿನಲ್ಲಿ ಮಾವೋವಾದಿ ನಕ್ಸಲೀಯರು ಸರ್ಕಾರಿ ಬಸ್ ಒಂದಕ್ಕೆ ಬೆಂಕಿಹಚ್ಚಿ ಕರ್ನಾಟಕ ರಾಜ್ಯ ಮಾವೋವಾದಿ ಕಾರ್ಯದರ್ಶಿ ರಾಜುಮೌಳಿಯನ್ನು ಪೊಲೀಸರು ಹತ್ಯೆಗೈದದ್ದಕ್ಕೆ ಪ್ರತಿಕಾರ ತೋರಿದ್ದರು. ಇದರ ಸುಮಾರಿನಲ್ಲೇ ಶೃಂಗೇರಿ ತಾಲ್ಲೂಕು, ಹುಲ್ಲುಗಾರುಬೈಲು ಗ್ರಾಮದ ಕೇಶವ ಹೆಗಡೆ ಯವರ ಮನೆಗೆ ನುಗ್ಗಿ 55 ಸಾವಿರ ರೂಪಾಯಿ ಹಣ ಮತ್ತು ಬಂದೂಕು ತೋಟಾವನ್ನು ನಕ್ಸಲೀಯರು ಅಪಹರಿಸಿದ್ದರು. ಪೊಲೀಸ್ ಮಾಹಿತಿದಾರನೆಂದು ವೆಂಕಟೇಶ್‌ರನ್ನು ಗುಂಡಿಕ್ಕಿ ಕೊಂದಿದ್ದರು.



ನಕ್ಸಲರ ಧ್ವಂಸ ಕಾರ್ಯ - ಬಸ್ಸಿಗೆ ಬೆಂಕಿ

ಮಾವೋವಾದಿ ನಕ್ಸಲೀಯರು ಮತ್ತು ಪೊಲೀಸರ ನಡುವೆ ಘರ್ಷಣೆಗಳು ಹೆಚ್ಚುತ್ತಿವೆ. ಇಲ್ಲಿಯವರೆಗೆ 9 ನಕ್ಸಲೀಯರು ಹತ್ಯೆಗೀಡಾಗಿದ್ದರೆ, 7 ಪೋಲೀಸರು, 6 ಜನ ನಾಗರೀಕರು ಬಲಿಯಾಗಿದ್ದಾರೆ. ದೇಶದ ಹಲವು ಭಾಗಗಳಲ್ಲಿ ಈಗ ನಡೆದಿರುವ ಮಾವೋವಾದಿ ಧಾಳಿಗಳು ಹತ್ಯೆಗಳನ್ನು ಗಮನಿಸಿದಾಗ ರಾಜ್ಯದಲ್ಲಿಯೂ ಉಂಟಾಗಬಹುದಾದ ಅಂತಹ ವಾತಾವರಣದ ಬಗ್ಗೆ ಜನತೆಗೆ ಆತಂಕ ಹೆಚ್ಚುತ್ತಿದೆ.

ಮೊನ್ನೆ ಮೆಣಸಿನಹಾಡ್ಯದ ಸಮೀಪದ ಮೈಗೂರು ಗ್ರಾಮದ ಒಡೆಯರ ಮಠದ ಮನೆಯಲ್ಲಿ ಜರುಗಿದ ಧಾಳಿಯಲ್ಲಿ ರಾಮೇಗೌಡ್ಲುರವರ ಮನೆಯಲ್ಲಿ ಸತ್ತವರಲ್ಲಿ ಗೌತಮ್ ಅಲಿಯಾಸ್ 'ಸಿಂಧನೂರು ತಾಲ್ಲೂಕಿನ ತುರುವಿಹಾಳೀನ ಅಧ್ಯಾಪಕನಾಗಿದ್ದ ಚನ್ನಪ್ಪ ಮತ್ತು ಮೈಗೂರು ಗ್ರಾಮದ ಬುಡಕಟ್ಟು ಜನಾಂಗಕ್ಕೆ ಸೇರಿದ ಪರಮೇಶ್ ಎಂಬುವರು ನಕ್ಸಲೀಯರೆಂದು, ಉಳಿದವರು ಅಲ್ಲವೆಂಬ ಮಾತುಗಳು ಕೇಳುತ್ತಿವೆ. ಅದೊಂದು ಹುಸಿ ಎನ್‌ಕೌಂಟರ್ ಎಂಬ ಆರೋಪಗಳು ಮತ್ತು ಎನ್‌ಕೌಂಟರ್‌ನ್ನು ಸಮರ್ಥಿಸುವ ಸರ್ಕಾರದ ಹೇಳಿಕೆಗಳು ಇವೆ. ಆದರೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಯೋಜನೆ ವಿರೋಧಿಸಿ ಆ ಬುಡಕಟ್ಟು, ಗಿರಿಜನರ ಚಳುವಳಿ ಆರಂಭಗೊಂಡ ಬೆನ್ನಲ್ಲೇ ಮಾವೋವಾದಿ ನಕ್ಸಲೀಯರು ಅದರ ಮರೆಯಲ್ಲಿ ಸಶಸ್ತ್ರ ತರಬೇತಿ ಆರಂಭಿಸಿದ್ದರು. ನಂತರ ಕಾರ್ಯಾಚರಣೆಗಳು ನಡೆದವು.

ಇದರಲ್ಲಿ ರಾಜ್ಯದ ಇತರೆ ಭಾಗಗಳಿಂದ ಆರಿಸಲ್ಪಟ್ಟ ಯುವಜನರಲ್ಲದೇ, ಆ ಪ್ರದೇಶದ ಹಲವಾರು ಜನರು ಇದರಲ್ಲಿದ್ದಾರೆ. ಅಲ್ಲದೆ ನಕ್ಸಲೀಯರ ಚಟುವಟಿಕೆಗಳಿಗೆ, ಬೆಂಬಲ, ಆಹಾರ ಇತ್ಯಾದಿ ಸರಕು ಸರಬರಾಜಾಗುತ್ತದೆ.

ಸರ್ಕಾರದ ನೀತಿಯ ವಿರುದ್ಧ, ಬದುಕಿನ ಹಕ್ಕುಗಳ ಸಂರಕ್ಷಣೆಗಾಗಿ ಒಂದು ವಿಶಾಲವಾದ ಪ್ರಜಾಸತ್ತಾತ್ಮಕ ಜನ ಚಳುವಳಿಯಾಗಿ ಆದಿವಾಸಿಗಳ ಹೋರಾಟವನ್ನು ನಡೆಸದೇ ಎಡ ದುಸ್ಸಾಹಸವಾದಿ ಹಾದಿ ಹಿಡಿದಿದ್ದರಿಂದ ಅತ್ಯಂತ ಪ್ರತಿಭಾನ್ವಿತ, ಕ್ರಿಯಾಶೀಲ ಯುವಜನರು ಅನವಶ್ಯಕವಾಗಿ ಹತ್ಯೆ ಯಾಗುವ ಸನ್ನಿವೇಶವನ್ನು ಮಾವೋವಾದಿ ನಕ್ಸಲೀಯರು ಸೃಷ್ಟಿಸಿದ್ದಾರೆ. ಈ ರಕ್ತಸಿಕ್ತ ವಿನಾಶದ ಹಾದಿಯನ್ನು ಪುನರ್ ಅವಲೋಕಿಸಿ ಯುವಕ, ಯುವತಿಯರು ಬುದ್ಧಿಜೀವಿ, ಪ್ರಗತಿಪರರು ಮಾವೋವಾದಿಗಳಿಂದ ಹೊರಬರಬೇಕಿದೆ, ಜನತೆಯ ಪ್ರಜಾಸತ್ತಾತ್ಮಕ ಚಳುವಳಿ ಕಟ್ಟಬೇಕಿದೆ.

ಪಶ್ಚಿಮ ಘಟ್ಟದಲ್ಲಿ ಆದಿವಾಸಿ ಗಿರಿಜನರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳ ಇತ್ಯರ್ಥಕ್ಕೆ ಸರ್ಕಾರ ಇನ್ನಾದರೂ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಅವರನ್ನು ಒಕ್ಕಲೆಬ್ಬಿಸಬಾರದು, ಮಾತ್ರವಲ್ಲ ಭೂಮಿಯ ಹಕ್ಕನ್ನು ಕೊಡಬೇಕು ಮತ್ತು ಇತರೆ ನಾಗರೀಕ ಸೌಲಭ್ಯಗಳು, ಪ್ರದೇಶದ ಅಭಿವೃದ್ಧಿ, ಕಾಡಿನ ಉತ್ಪನ್ನಗಳ ಮೇಲಿನ ಸಹಜ ಹಕ್ಕು ಕೊಡಬೇಕು.

ಆ ಜನತೆಯಲ್ಲಿ ಆತ್ಮವಿಶ್ವಾಸ ಬಲಿಯುವಂತಾಗಬೇಕು. ಕೇವಲ ಪೊಲೀಸ್ ಕಾರ್ಯಾಚರಣೆ ಸಮಸ್ಯೆಯನ್ನು ಕೊನೆಗೊಳಿಸುವುದಿಲ್ಲ.

ಇದು ಸ್ಥಿತಿ

ನಕ್ಸಲರು ಪೊಲೀಸರ ನಡುವಿನ ಜಟಾಪಟಿಯಲ್ಲಿ ಸಿಕ್ಕಿ-ಈ ಹಳ್ಳಿಗರ ಬದುಕು ನಲುಗಿಹೋಗಿದೆ. ಅತ್ತ ನಕ್ಸಲರ ಉಪಟಳ; ಇತ್ತ ಪೊಲೀಸರ ಕಾಟದಿಂದ ಬೇಸತ್ತಿರುವ ಜನರು ಎಲ್ಲಾ ಕಿರುಕುಳದಿಂದ ಬಿಡುಗಡೆ ಹೊಂದಲು ಚಡಪಡಿಸುತ್ತಿದ್ದಾರೆ.

★

'ಪೊಲೀಸ್ರು ಮತ್ತು ನಕ್ಸಲೀಯರ ಮಧ್ಯೆ ನಮ್ಗೆ ಬಾಳಾ ಹೆದ್ರಿಕೆ ಆಗಿದೆ. ನಕ್ಸಲೀಯರು ಬಂದ್ರೆ ಬರ್ಬೇಡಿ ಅನ್ನಕ್ಕಾಗಲ್ಲ. ತಪಾಸಣೆಗೆ ಬರೋ ಪೊಲೀಸ್ರನ್ನೂ ತಡೆಯಕ್ಕಾಗಲ್ಲ. ಇಂತ ಒತ್ತಡದಲ್ಲಿ ಜೀವ್ನ ಮಾಡ್ತಿದ್ದೀವಿ' ಎಂದು ಮೃತ ಕಾವೇರಮ್ಮನ ಸೋದರ ಸಂಬಂಧಿ ಸೀತಮ್ಮ ಗೋಳು ತೋಡಿಕೊಂಡರು.



ಕೊಂಕಣಿ ಮಂಚ್‌ನ ಹುರುಳಿಲ್ಲದ ಬೇಡಿಕೆ

ಪುಟ 3 ರಿಂದ

ಹಾಗೂ ನಾರಾಯಣಗೌಡರ ಬಣ ಕಾರವಾರಕ್ಕೆ ಹೋಗಿ ಪುಂಡಾಟಿಕೆ ನಡೆಸುತ್ತಿದೆ. ಪ್ರವೀಣಶೆಟ್ಟಿ ಬಣ ತಮ್ಮ 'ಕನ್ನಡಾಭಿಮಾನ'ದ ಉಗ್ರತೆ ತೋರಿಸಲು ಕೊಂಕಣಿ ಮಂಚ್‌ನ ಅಶೋಕ ಪಾಲನಕರರವರ ಮೇಲೆ ದಾಳಿ ಮಾಡಿ ಮೊಟ್ಟೆಯೊಡೆದು ಮಸಿ ಬಳಿದದ್ದು ತೀವ್ರ ಖಂಡನೀಯ. ಕನ್ನಡ ಕರ್ನಾಟಕ ಅದರ ಅಭಿವೃದ್ಧಿ ಭಾಷೆ -ಸಂಸ್ಕೃತಿಯ ರಕ್ಷಣೆ ಎಂದರೇನೆಂದು ಗಂಧ ಗಾಳಿಯೂ ಇಲ್ಲದ, ಚಿಂತನೆಗಳೇ ಇಲ್ಲದೇ ಕನ್ನಡ ರಕ್ಷಣೆಯೆಂದರೆ ಮಸಿ ಬಳೆಯುವ, ಮೊಟ್ಟೆ ಹೊಡೆಯುವುದಷ್ಟೇ ಎಂದು ಭಾವಿಸಿರುವ ಇವರ ಪುಂಡಾಟಿಕೆಗಳನ್ನು ಮಟ್ಟ ಹಾಕಬೇಕು. ವಿಷಯಾಧಾರಿತವಾಗಿ ಜನತೆಯನ್ನು ಜಾಗೃತಗೊಳಿಸಿ ಪ್ರತ್ಯೇಕತೆಯ ಶಕ್ತಿಗಳಿಂದ ಜನ ಹೊರಬರುವಂತೆ ಮಾಡಬೇಕಿರುವಾಗ ಅದನ್ನು ಬಿಟ್ಟು ಕರ್ನಾಟಕ ರಕ್ಷಣಾ ವೇದಿಕೆಯ ಕೃತ್ಯಗಳು ಮತ್ತೇ ಆ ಜನರಲ್ಲಿ ತೀವ್ರವಾದ ಪರಕೀಯ ಭಾವನೆ ಹೆಚ್ಚಿಸಿ ಪ್ರತ್ಯೇಕತೆಯ ಶಕ್ತಿಗಳೊಂದಿಗೆ ಗಟ್ಟಿಗೊಳ್ಳುವ ಅಪಾಯ ತಂದೊಡ್ಡುತ್ತದೆ. ಇದು ಕನ್ನಡ-ಕರ್ನಾಟಕವನ್ನು ದುರ್ಬಲಗೊಳಿಸುವ ಸಂಗತಿಯಾಗಿದೆ. ಆದರೆ ಸರ್ಕಾರ ಸಮಸ್ಯೆಗೆ ಪರಿಹಾರ ತೋರದೆ 'ಕರ್ನಾಟಕ ರಕ್ಷಣಾ ವೇದಿಕೆ' ಯಂತಹ ಕೃತ್ಯಗಳ ಬಗ್ಗೆ ಮೌನವಾಗಿದ್ದು ಬೆಂಬಲಿಸುತ್ತಿದೆಯೇ ಎಂಬ ಅನುಮಾನ ಬರುತ್ತದೆ. ವಿವಾದ ಉಲ್ಬಣಗೊಂಡರೆ ವಿಧಾನಸಭೆಯಲ್ಲಿ ಹಾಗೂ ಹೊರಗೆ ರೈತರ ಆತ್ಮಹತ್ಯೆ, ಹಸಿವಿನ ಸಾವು ಇತ್ಯಾದಿಗಳನ್ನು ಮರೆಯಾಗಿಸಲು ಸಾಧ್ಯವಾಗಬಹುದು ಎಂಬ ಲೆಕ್ಕಾಚಾರವೂ ಇರಬಹುದಲ್ಲವೇ?

ಬಿಜೆಪಿಯ ಎಡಬಿಡಂಗಿನತನ

ಈ ಪ್ರಶ್ನೆಗೆ ಸಂಬಧಿಸಿದಂತೆ ಗೋವಾದ ಮುಖ್ಯಮಂತ್ರಿಗಳು ವಿಷಯ ತಮಗೇನೂ ತಿಳಿದಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಈಗ ಕರ್ನಾಟಕ ಸರ್ಕಾರ ದೃಢ ನಿಲುವು-ಕ್ರಮ ಏನೆಂದು ಹೇಳಬೇಕಷ್ಟೇ. ಉ.ಕನ್ನಡದಲ್ಲಿ ವಿವಿಧ ಪಕ್ಷಗಳು ಬಹಿರಂಗವಾಗಿ ಪ್ರತ್ಯೇಕವಾದಿಗಳನ್ನು ಬೆಂಬಲಿಸಿಲ್ಲ. ಮುಖ್ಯವಾಗಿ ಬಿಜೆಪಿಯ ಶಾಸಕ ಗಂಗಾಧರ ಭಟ್ ಕೊಂಕಣಿ ಮಂಚ್‌ನ ಚಟುವಟಿಕೆಗಳ ಹಿಂದೆ ಬಿಜೆಪಿ ಇದೆಯೆಂಬುದನ್ನು ನಿರಾಕರಿಸಿದ್ದರೂ, ಕೆಳ ಹಂತದ ಬಿಜೆಪಿ ಕಾರ್ಯಕರ್ತರು ಇದರೊಂದಿಗೆ ಇದ್ದಾರೆ. ಇದರ ಬಗ್ಗೆ ಬಿಜೆಪಿ ಸ್ಪಷ್ಟನೆ ನೀಡಬೇಕು. ಬಿಜೆಪಿಯದ್ದು ಬೆಳಗಾವಿ ವಿಷಯದಲ್ಲಿದ್ದಂತೆ ಇಲ್ಲಿಯೂ ಎಡಬಿಡಂಗಿ ಆಟ. ರಾಷ್ಟ್ರೀಯ ಪಕ್ಷ ಎಂಬುದು ಬೊಗಳೆ ಆಗಿದೆ ಅಷ್ಟೇ. ಅಲ್ಲದೇ ಜನ ವಿಭಜನೆಯ ಸಿದ್ಧಾಂತವನ್ನು ಅಂಗೀಕರಿಸಿರುವ ಬಿಜೆಪಿಯದ್ದು ಸಂದರ್ಭ ಸಾಧಕತನದ ನಿಲುವಾಗಿದೆ..

ಒಗ್ಗಟ್ಟು-ಸಮಗ್ರತೆ ಕಾಯುವುದರತ್ತ

ಈ ಒಟ್ಟು ಸಂದರ್ಭದಲ್ಲಿ ಗೋವಾಕ್ಕೆ ಕೊಂಕಣಿ ಭಾಷಿಕ ಪ್ರದೇಶಗಳು ಸೇರಬೇಕೆಂಬುದು ಅಪ್ರಸ್ತುತ, ಮತ್ತು ಜನರ ಒಗ್ಗಟ್ಟಿಗೆ ಧಕ್ಕೆ ತರುವಂತಹದ್ದು, ಅದೇ ಸಂದರ್ಭದಲ್ಲಿ ಆ ಪ್ರದೇಶದ ಅಭಿವೃದ್ಧಿ, ಕೊಂಕಣಿ ಭಾಷೆಯನ್ನು ಆ ಜಿಲ್ಲಾ ಆಡಳಿತ ಭಾಷೆಯನ್ನಾಗಿಸಲು ಸರ್ಕಾರ ಕ್ರಮವಹಿಸಬೇಕು. ಹಾಗೆಯೇ 'ಕರ್ನಾಟಕ ರಕ್ಷಣಾ ವೇದಿಕೆ' ಯಂತಹ ಛಿದ್ರಕಾರಿ ಚಟುವಟಿಕೆಗಳನ್ನು ಮಟ್ಟಹಾಕಿ ಪ್ರಜಾಸತ್ತಾತ್ಮಕ ವಾತಾವರಣ ಕಾಪಾಡಬೇಕು. ಕೊಂಕಣಿ ಮಂಚ್‌ನ ಯತ್ನಗಳನ್ನು ಜನತೆ ತಿರಸ್ಕರಿಸುವಂತಾಗಬೇಕು.

ಜನಶಕ್ತಿ ಸಂಚಿಕೆಯ ಬಿಡುಗಡೆ ಕಾರ್ಯಕ್ರಮಗಳು

ಆತ್ಮೀಯರೇ ,

ಜನಶಕ್ತಿ ಜನಜನಿತವಾಗಬೇಕು ಎಂಬ ಉದ್ದೇಶದಿಂದ ಈ ವಾರದ ಕೊನೆಯಲ್ಲಿ ಸಂಚಿಕೆಯ ಎರಡು ಕಾರ್ಯಕ್ರಮಗಳನ್ನು ಪತ್ರಿಕೆಯ ಗೆಳೆಯರು ಇಟ್ಟುಕೊಂಡಿದ್ದಾರೆ. ಒಂದು ಗುಲಬರ್ಗಾ ನಗರದಲ್ಲಿ , ಇನ್ನೊಂದು ಬಳ್ಳಾರಿಯಲ್ಲಿ .

ಗುಲಬರ್ಗಾದಲ್ಲಿ

ಜುಲೈ 21 ರಂದು ಸಂಜೆ 4 ಗಂಟೆಗೆ 'ಗುಲಬರ್ಗಾದ ಕನ್ನಡ ಭವನದಲ್ಲಿ .ಖ್ಯಾತ ಪತ್ರಕರ್ತರಾದ ಪಿ.ಸಾಯಿನಾಥ್‌ರಿಂದ ಪತ್ರಿಕೆಯ ಸಂಚಿಕೆ ಬಿಡುಗಡೆ. ಮುಖ್ಯ ಅತಿಥಿಗಳು. ಮಾಜಿ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರಾದ ಧರಂಸಿಂಗ್ ರವರು ಹಾಗೂ ಲೇಖಕರಾದ ಡಾ : ಕಾಶಿನಾಥ ಅಂಬಲಗಿ ಅಧ್ಯಕ್ಷತೆ : ಮಾರುತಿ ಮಾನ್ಪಡೆ ವಹಿಸುವರು.

ಬಳ್ಳಾರಿಯಲ್ಲಿ

ಜುಲೈ 22 , ಗಾಂಧಿಭವನದಲ್ಲಿ ,ಬೆಳಿಗ್ಗೆ 10.30 ಕ್ಕೆ ,ಕನ್ನಡ ವಿಶ್ವ ವಿದ್ಯಾಲಯ ಹಂಪಿ, ಕುಲಸಚಿವರಾದ ಡಾ : ಕೆ.ವಿ.ನಾರಾಯಣರವರಿಂದ ಸಂಚಿಕೆ ಬಿಡುಗಡೆ. ಸಮಾರಂಭದಲ್ಲಿ ಇತರೆ ಪ್ರಮುಖರು ಭಾಗವಹಿಸುವರು.

ತಾವು, ತಮ್ಮ ಆತ್ಮೀಯ ಒಡನಾಡಿಗಳು ಖಂಡಿತ ಬರುತ್ತೀರಲ್ಲ. ಅಲ್ಲಿ ನೀವೆಲ್ಲರೂ ಇರಬೇಕೆಂಬುದು ನಮ್ಮ ಆಶಯ

- ಸಂ

ಎಪಿಎಂಸಿ ಮಾರುಕಟ್ಟೆಯ ಕಥೆ
ಹಗಲು ದರೋಡೆ ನೋಡಬೇಕೆಂದಿದ್ದರೆ ಇಲ್ಲಿ ಬನ್ನಿ...

ಕೋಲಾರ

ಹಗಲು ದರೋಡೆ ಮಾಡುವುದು ಹೇಗೆಂದು ನೋಡಬೇಕೆಂದಿದ್ದರೆ ಕೋಲಾರದ ಎಪಿಎಂಸಿ ಮಾರುಕಟ್ಟೆಗೆ ಒಮ್ಮೆ ಭೇಟಿ ನೀಡಿ. ಇಲ್ಲಿನ ವಹಿವಾಟು ವೈಖರಿ ನೋಡಿದರೆ ಗೊತ್ತಾಗುತ್ತದೆ ಹಗಲು ದರೋಡೆ ಎಂದರೆ ಹೇಗಿರುತ್ತದೆ ಎಂದು. ದಲ್ಲಾಳಿಗಳು ಮತ್ತು ರೈತರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದಿರುವ ಪುಡಾರಿಗಳದೇ ರಾಜ್ಯಭಾರವಾಗಿದೆ. ರೈತರ ಜೀವ ಹಿಂಡುವಲ್ಲಿ ಏಕಸ್ವಾಮ್ಯ ಸಾಧಿಸಿದ್ದಾರೆ. ರೈತರ ಪರವಾಗಿ ಎಷ್ಟೇ ಕಾನೂನು ಇದ್ದರೂ ದಲ್ಲಾಳಿಗಳು ಮತ್ತು ರಾಜಕೀಯ ಚೇಲಾಗಳಿಂದ ರೈತರನ್ನು ಮುಕ್ತಗೊಳಿಸಲು ಸಾಧ್ಯವಾಗದಷ್ಟು ಅಧೋಗತಿಗಿಳಿದಿದೆ ವ್ಯವಸ್ಥೆ. ಅಂದರೆ ಅರ್ಥಾತ್ ಹಗಲು ದರೋಡೆಯಲ್ಲಿ ತೊಡಗಿದ್ದಾರೆ.

ಕೋಲಾರದ ಎಪಿಎಂಸಿ ಮಾರುಕಟ್ಟೆ ಇಡೀ ದೇಶದಲ್ಲೇ ಬಹು ಪ್ರಖ್ಯಾತವಾಗಿದೆ. ಟಮೊಟಾ ವಹಿವಾಟಿನಲ್ಲಿ ಮಹಾರಾಷ್ಟ್ರದ ನಾಸಿಕ್ ನಂತರ ಎರಡನೇ ಸ್ಥಾನದಲ್ಲಿದೆ. ಇಲ್ಲಿ ಸರ್ಕಾರ ಕಾನೂನಿನ ವ್ಯವಸ್ಥೆಯಿಲ್ಲ. ದಲ್ಲಾಳಿಗಳದೇ ಕಾನೂನು, ವ್ಯವಸ್ಥೆಯಾಗಿದೆ. ಅಧಿಕಾರಿಗಳು, ಢೋಂಗಿ ಜನಪ್ರತಿನಿಧಿ ಗಳೊಂದಿಗೆ ಸಂಚು ರೂಪಿಸಿ ಇಡೀ ಮಾರುಕಟ್ಟೆಯನ್ನೇ ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿದ್ದಾರೆ.

ಇಡೀ ಆಡಳಿತ ವರ್ಗ ದಲ್ಲಾಳಿಗಳ ಅಣತೆಯಂತೆ ಕುಣಿಯುತ್ತದೆ. ಅಧಿಕಾರಿಗಳು ಮತ್ತು ಕಾನೂನು ಹಲ್ಲಿಲ್ಲದ ಹಾವುಗಳಂತಾಗಿದ್ದಾರೆ.

ಅಕ್ರಮ ವಹಿವಾಟು

ಕೋಲಾರದ ಎಪಿಎಂಸಿಯಲ್ಲಿ ಪ್ರತಿದಿನ ಕೋಟ್ಯಾಂತರ ರೂ ವಹಿವಾಟು ನಡೆಯುತ್ತದೆ. ನಡೆಯುವ ವಹಿವಾಟಿನಲ್ಲಿ ಶೇಕಡ 90ರಷ್ಟು ವಹಿವಾಟನ್ನು ಅಕ್ರಮವಾಗಿ ನಡೆಸುತ್ತಾರೆ. ಕೋಟ್ಯಾಂತರ ರೂ.ಗಳನ್ನು ಲಪಟಾಯಿಸುತ್ತಾರೆ. ಇದರಲ್ಲಿ ಅಧಿಕಾರಿಗಳು ಜನಪ್ರತಿನಿಧಿಗಳು ಸೇರಿದಂತೆ ಸಂಬಂಧಪಟ್ಟವರಿಗೆಲ್ಲ ನಿಶ್ಚಿತವಾಗಿ ಕಮೀಷನ್ ಸೇರುತ್ತದೆ ಎಂಬುದು ಜನಜನಿತವಾಗಿದೆ. ಸರ್ಕಾರಕ್ಕೆ ಅಧಿಕೃತವಾಗಿ ಅತ್ಯಂತ ಕಡಿಮೆ ಎಂದರೆ ಶೇಕಡ 1ರಷ್ಟು ಮಾತ್ರ ಕಮೀಷನ್ ಪಾವತಿಸುತ್ತಾರೆ. ಇಷ್ಟೆಲ್ಲಾ ಅಕ್ರಮ ವಹಿವಾಟು ನಡೆಸಿದರೂ 2005-06ನೆ ಸಾಲಿನಲ್ಲಿ ಸುಮಾರು 50ಲಕ್ಷ ರೂ. ಸರ್ಕಾರಿ ಶುಲ್ಕ ಸಂಗ್ರಹವಾಗಿದೆ ಎಂದರೆ ಅದರ ಅಗಾಧತೆಯನ್ನು ಅರಿಯಬಹುದು. ಬಹುಷ ಅಧಿಕಾರಿಗಳು ಪ್ರಮಾಣಿಕವಾಗಿ ಲೆಕ್ಕ ತೆಗೆದುಕೊಂಡಲ್ಲಿ ಸುಮಾರು 2-3ಕೋಟಿ ರೂ. ಕಮೀಷನ್ ಸಂಗ್ರಹವಾಗಲಿದೆ.

ವರ್ತಕರೊಂದಿಗೆ ಬಂಡವಾಳಶಾಹಿ ರೈತರು ಸಹ ದಲ್ಲಾಳಿಗಳಾಗಿ ಪರಿವರ್ತನೆಯಾಗಿದ್ದು, ರೈತರ ಶೋಷಣೆಯಲ್ಲಿ ಎಗ್ಗಿಲ್ಲದೆ ಪಾಲ್ಗೊಂಡಿದ್ದಾರೆ. ರೈತ ಮುಖಂಡರೆಂದು ಹೇಳಿಕೊಂಡು ತಿರುಗುವ ಬಹುತೇಕ ರಾಜಕಾರಣಿಗಳು ಇಲ್ಲಿ ಕಮೀಷನ್ ಮಂಡಿಗಳನ್ನು ಹೊಂದಿದ್ದು ನಿರಂತರವಾಗಿ ರೈತರನ್ನು ವಂಚಿಸುತ್ತಿದ್ದಾರೆ.

ರೈತರ ಮೇಲೆ ಮಂಡಿಗಳಲ್ಲಿ ಶೇಕಡ 8ರಷ್ಟು ಕಮೀಷನ್ ವಿಧಿಸಲಿದ್ದು ರೈತರಿಂದ ವಾರ್ಷಿಕ ಸುಮಾರು 25-35 ಕೋಟಿ ರೂ.ನಷ್ಟು ಹಣವನ್ನು ದಲ್ಲಾಳಿಗಳು ಲೂಟಿ ಮಾಡುತ್ತಾರೆ. ಇದಕ್ಕೆ ಯಾವುದೇ ಅಧಿಕೃತ ಲೆಕ್ಕಾಚಾರವಿಲ್ಲ. ಬಂಡವಾಳಶಾಹಿ ರೈತರು ಮತ್ತು ವರ್ತಕರು ರೈತರು ಮತ್ತು ಸರ್ಕಾರಕ್ಕೂ ಭಾರಿ ವಂಚನೆಯಲ್ಲಿ ತೊಡಗಿದ್ದಾರೆ.

ರೈತರು ಇಲ್ಲಿಗೆ ಸರಬರಾಜು ಮಾಡುವ ತರಕಾರಿಗಳಿಗೆ ದಲ್ಲಾಳಿಗಳು ಅಧಿಕೃತ ರಸೀದಿಯನ್ನು ಸಹ ನೀಡುವುದಿಲ್ಲ. ಇದು ಕಾನೂನು ಬಾಹಿರ ಎಂದು ಗೊತ್ತಿದ್ದರೂ ಅಧಿಕಾರಿಗಳು ಕಣ್ಣು ಕಾಣದಂತೆ ಸುಮ್ಮನಿದ್ದಾರೆ. ವರ್ತಕರು ಹಾಕಿದ್ದೇ ಪಟ್ಟಿ ನೀಡಿದ್ದೇ ದರ. ಅಸಹಾಯಕನಾದ ರೈತ ಅದನ್ನೇ ಪಡೆದು ತನ್ನ ಹಣೆ ಬರಹ ಎಂದು ಶಪಿಸುತ್ತಾ ಮನೆಗೆ ಹಿಂತಿರುಗುವಂತಾಗಿದೆ. ಮೂಲತಃ ಅಧಿಕೃತವಾದ ರಸೀತಿ ನೀಡುವ ಪದ್ಧತಿಯೇ ಇಲ್ಲ. ಕೇವಲ ಒಂದು ಸಣ್ಣ ಕಾಗದದಲ್ಲಿ ಬರೆದುಕೊಡುತ್ತಾರೆ. ಎಷ್ಟು ಖರೀದಿಸಿದ್ದಾರೆ ಎಷ್ಟು ಮಾರಾಟ ಮಾಡಿದ್ದಾರೆ ಎಂಬುದು ಸರ್ಕಾರದ ಬಳಿಯೂ ಲೆಕ್ಕ ಇಲ್ಲ. ಅಂದ ಮೇಲೆ ವಹಿವಾಟಿನ ರೀತಿ ಗೊತ್ತಾಗುತ್ತದೆ. ರೈತರಿಂದ ಯಾವುದೇ ಕಮೀಷನ್ ಪಡೆಯಬಾರದೆಂಬ ಕಾನೂನು ಇದ್ದರೂ ರಾಜಾರೋಷವಾಗಿ ಶೇಕಡ 8ರಷ್ಟು ಕಮೀಷನ್ ಪೀಕುತ್ತಾರೆ.

ಅವರೇ ಕೂಗುವವರು ಅವರೇ ಖರೀದಿಸುವವರು

ಹರಾಜು ಪ್ರಕ್ರಿಯೆ ಎಂಬುದೇ ಇಲ್ಲ. ಅದು ಇದ್ದರೂ ಹರಾಜು ಕೂಗುವವರು ವರ್ತಕರೆ. ಖರೀದಿಸುವವರೂ ವರ್ತಕರೆ. ಅವರು ಕೂಗಿದ್ದೆ ದರ. ಆ ದರಕ್ಕೆ ಗಿಟ್ಟುವುದಿಲ್ಲ ಎಂದು ರೈತರು ಗೋಳಾಡಿದರೂ ಲೆಕ್ಕಕ್ಕೇ ಇಲ್ಲ. ರೈತ ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳಬೇಕು.

ವರ್ತಕರಿಗೆ ಇಷ್ಟ ಬಂದ ದರಕ್ಕೆ ಬೇರೆ ಮಾರುಕಟ್ಟೆಗೆ ಉತ್ಪನ್ನಗಳನ್ನು ಸಾಗಿಸಿ ಅಪಾರ ಪ್ರಮಾಣದ ಲಾಭ ಪಡೆಯುತ್ತಾರೆ. ಉತ್ಪನ್ನಗಳನ್ನು ಮಾರಾಟ ಮಾಡಿದ ಒಂದು ದಿನವೂ ದಲ್ಲಾಳಿಗಳು ಸರಿಯಾಗಿ ಹಣ ಪಾವತಿಸುವುದಿಲ್ಲ. ವಾರಗಟ್ಟಲೆ, ತಿಂಗಳಾನುಗಟ್ಟಲೆ ಅಲೆದಾಡಬೇಕಾಗುತ್ತದೆ. ಬೆಳಿಗ್ಗೆ, ಸಂಜೆ ಹೀಗೆ ಹೇಳಿಕಳಿಸುತ್ತಾ ಸತಾಯಿಸುತ್ತಾರೆ. ಹೆಚ್ಚಾಗಿ ಮಾತನಾಡಿದರೆ ಅಂದಿನ ಖರ್ಚಿಗೆ ಬೇಕಾದಷ್ಟು ಹಣ ಬಿಸಾಕಿ ಕೈ ಎತ್ತುತ್ತಾರೆ. ಈ ಕುರಿತು ಸರ್ಕಾರ ಕಾನೂನಿನ ನಿಯಂತ್ರಣ ಎಂಬುದೇ ಇಲ್ಲ. ಹೇಳಿದರೂ ಕಿವಿಗೆ ಹಾಕಿಕೊಳ್ಳುವವರಿಲ್ಲದಂತಾಗಿದೆ.

ಇಲ್ಲಿ ವರ್ತಕರು ನಡೆಸುತ್ತಿರುವ ಮತ್ತೊಂದು ಸಂಚೆಂದರೆ, ರೈತರ ಪರವಾಗಿ ಹೋರಾಟ ಮಾಡುವವರ ವಿರುದ್ಧ ವರ್ತಕರೆ ತಮ್ಮದೇ ಆದ ಗುಂಪನ್ನು ರಚಿಸಿದ್ದಾರೆ. ಯಾವುದೇ ರೈತ ನ್ಯಾಯಯುತವಾಗಿ ಪ್ರತಿಭಟಿಸಿದಾಗ ಈ ಗುಂಪು ವರ್ತಕರ ಪರವಾಗಿ ನಿಲ್ಲುತ್ತದೆ. ಮತ್ತೊಂದು ಅಪಾಯಕಾರಿ ವಿಷಯವೆಂದರೆ ಎಪಿಎಂಸಿ ಮಾರುಕಟ್ಟೆಗೂ ಕೋಮುವಾದ ವೈರಸ್‌ನಂತೆ ಹಬ್ಬುತ್ತಿರುವುದು.

ಕೋಮುವಾದಿ ವೈರಸ್

ಎಪಿಎಂಸಿ ಮಾರುಕಟ್ಟೆಯಲ್ಲಿ ಎಲ್ಲ ಜನಾಂಗದ ಮಂಡಿಗಳಿವೆ. ಕೆಲವು ಮೂಲಭೂತವಾದಿಗಳ ವಕ್ರನೋಟ ಇತ್ತ ಹರಿದಿದ್ದು ಹಿಂದೂ ವರ್ತಕರು ಮತ್ತು ಮುಸ್ಲಿಂ ವರ್ತಕರೆಂದು ವಿಭಜಿಸುವ ಸಂಚು ರೂಪಿಸಿದ್ದಾರೆ. ಹಿಂದೂ ರೈತರೆಲ್ಲ ಹಿಂದೂ ವರ್ತಕರ ಮಂಡಿಗಳಲ್ಲೇ ವಹಿವಾಟು ನಡೆಸಬೇಕೆಂಬ ವಿಷ ಬೀಜ ಬಿತ್ತುತ್ತಿದ್ದಾರೆ. ಇದನ್ನೇ ಹೇಳುವುದು 'ಹಿಂದೂ ಏಕತೆಯ ಮಂತ್ರ ಸುಲಿಗೆಕೋರರ ಕುತಂತ್ರ' ಎಂದು.

ಮಾರುಕಟ್ಟೆಯನ್ನು ಉತ್ತಮ ಪಡಿಸಿ ರೈತರಿಗೆ ಅನುಕೂಲ ಕಲ್ಪಿಸುವ ಅಪಾರ ಅವಕಾಶಗಳಿದ್ದರೂ ರಾಜಕಾರಣಿಗಳಲ್ಲಿನ ಸಂಕಲ್ಪ ಶಕ್ತಿಯ ಕೊರತೆಯಿಂದಾಗಿ ರೈತರು ಸುಲಿಗೆಗೆ ಒಳಗಾಗುತ್ತಿದ್ದಾರೆ. ಜನಪ್ರತಿನಿಧಿಗಳು ಈ ಕಡೆ ತಲೆ ಹಾಕುವುದಿಲ್ಲ. ಬಹುತೇಕ ದಲ್ಲಾಳಿಗಳು ಇವರ ಬಂಟರೇ ಆಗಿರುವುದರಿಂದ ರಾಜಕಾರಣಿಗಳಿಗೆ ಇದೊಂದು ಸಂಪನ್ಮೂಲ ಕೇಂದ್ರವಾಗಿದೆ ಎನ್ನುತ್ತಾರೆ ಪ್ರಾಂತ ರೈತ ಸಂಘದ ಮುಖಂಡರಾದ ಹೋಳೂರು ಶಂಕರ್.

ರೈತರು ಸರಬರಾಜು ಮಾಡುವ ಉತ್ಪನ್ನಗಳಿಗೆ ಅಧಿಕೃತ ರಸೀತಿ ನೀಡಬೇಕೆಂದು ಅವರು ಒತ್ತಾಯಿಸುತ್ತಾರೆ. ಈ ರಸೀತಿಯನ್ನು ಕಚೇರಿಯಲ್ಲಿ ನೊಂದಾಯಿಸಿದ ನಂತರ ಹಣಪಾವತಿ ಯಾಗುವ ವ್ಯವಸ್ಥೆ ಮಾಡಬೇಕೆಂಬುದು ಅವರ ಒತ್ತಾಯ.

ರೈತರ ಉತ್ಪನ್ನಗಳನ್ನು ಸರ್ಕಾರಿ ಅಧಿಕಾರಿಗಳೇ ಹರಾಜು ಹಾಕಬೇಕು. ಹರಾಜು ಪ್ರಕ್ರಿಯೆಯಲ್ಲಿ ರೈತರಿಗೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಬೇಕೆಂದು ಶಂಕರ್ ಆಗ್ರಹಿಸಿದ್ದಾರೆ.

ಎಪಿಎಂಸಿ ಮಾರುಕಟ್ಟೆಯಲ್ಲಿ 'ಜಾಕ್‌ಪಾಟ್' ವ್ಯವಸ್ಥೆ ಇದ್ದು ನೂರು ಬಾಕ್ಸ್ ಟಮೋಟಾ ಸರಬರಾಜು ಮಾಡಿದರೆ ಅದರಲ್ಲಿ ಸುಮಾರು 10-15 ಬಾಕ್ಸ್‌ಗಳನ್ನು ಜಾಕ್‌ಪಾಟ್ ಅಡಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಒಂದೊಮ್ಮೆ ಟಮೋಟಾ ದರ ಹೆಚ್ಚಾಗಿದ್ದಾಗ ಸುಮಾರು 4-5ರೂ. ರೈತನಿಗೆ ನಷ್ಟವಾಗಲಿದೆ. ಎಪಿಎಂಸಿ ಎಂಬ ನರಕದಿಂದ ರೈತರಿಗೆ ಎಂದು ಮುಕ್ತಿ ಸಿಗುವುದೊ ಕಾದು ನೋಡಬೇಕು.

ಅಪ್ಪು

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

ಇವರು ಯಾರು ಬಲ್ಲಿರೇನು?

ಇಲ್ಲಿ ನಮ್ಮ ನಾಡಿನ ಪ್ರಸಿದ್ಧ ರಾಜಕೀಯ ಧುರೀಣರ 'ಪ್ರತಿಭಾನ್ವಿತ' ಮಕ್ಕಳ ಬಗೆಗೆ ಕೆಲವು ಮಾಹಿತಿ ನೀಡಲಾಗಿದೆ. ನಿಮ್ಮ ಸಾಮಾನ್ಯ ಜ್ಞಾನವನ್ನು ಅಳೆಯುವ ಸರಳ ಪ್ರಶ್ನಾವಳಿ ಇದು. ಉತ್ತರಿಸಲು ಯತ್ನಿಸಿ.

ಪ್ರತಿಭೆ 1 : ಇವರೊಬ್ಬ ಯುವ ರಾಜಕಾರಣಿ. ಯುವಕರಾದರೂ ಜಪ, ತಪ, ಧ್ಯಾನ ವ್ರತಗಳಲ್ಲಿ ತುಂಬಾ ಆಸಕ್ತಿ. ರಾಜ್ಯದಲ್ಲಿ 2004ರಲ್ಲಿ ರಚನೆಯಾದ ಮಂತ್ರಿ ಮಂಡಲದಲ್ಲಿ ಸಚಿವ ಖಾತೆ ಸಿಗದೆ ಹೋದಾಗ, 15 ದಿನಗಳ ಮೌನ ವ್ರತ ಆಚರಿಸಿದ್ದರು. ಆದರೂ ಮಂತ್ರಿ ಪದವಿ ಸಿಗಲಿಲ್ಲ. ಈಗ ಮಾತಾಡುತ್ತಿದ್ದಾರೆ. ಆದರೆ ಕಡಿಮೆ.ಇವರು ಯಾರು?

ಸುಳಿವು-1 ಇವರ ತಂದೆ ರಾಜ್ಯ ಮುಖ್ಯಮಂತ್ರಿಗಳಾಗಿದ್ದರು

ಸುಳಿವು - 2 ಇವರ ತಂದೆ ಒಮ್ಮೆ ಕಾಂಗ್ರೆಸ್ ಸೀಮೆ ಎಣ್ಣೆ, ಬಿಜೆಪಿ ಬೆಂಕಿ ಕಡ್ಡಿ ಎಂದಿದ್ದರು ಮತ್ತು ಮರುದಿನವೇ ಬಿಜೆಪಿ ಜೊತೆ ಕೈ ಜೋಡಿಸಿದ್ದರು.

ಸುಳಿವು - 3 ಇವರ ತಂದೆ ಮದಿರೆ ಮತ್ತು ಮಾನಿನಿಯರು ನನ್ನ ದೌರ್ಬಲ್ಯ ಎಂದಿದ್ದರು.

ಪ್ರತಿಭೆ 2 : ದುಬಾರಿಯಾದ ವಿದೇಶಿ, ಕಾರು, ಮೋಟಾರು ಬೈಕುಗಳನ್ನು ಓಡಿಸುವುದೆಂದರೆ ಇವರಿಗೆ ಪಂಚ ಪ್ರಾಣ, ಸುಮಾರು 37 ಲಕ್ಷದ ಒಂದು ಮೋಟಾರು ಬೈಕ್ ಇವರ ಒಡೆತನಕ್ಕೆ ಸೇರಿದೆ. ನಡುರಾತ್ರಿ ಕ್ಷಮಿಸಿ ಬೆಳಗಿನ ಜಾವ ಸ್ಟಾರ್ ಹೋಟೇಲ್‌ಗಳಿಗೆ ಹೋಗಿ ಊಟ ಕೇಳುವುದು ಇವರ ಮತ್ತೊಂದು ನೆಚ್ಚಿನ ಹವ್ಯಾಸ. ಇವರು ಯಾರು?

ಸುಳಿವು - 1 ಇವರ ತಂದೆಗೆ ಆಗದ ಪತ್ರಕರ್ತರು ಅವರು ತಮ್ಮ ಕುಟುಂಬದ ಬೇರೆ ಬೇರೆ ಸದಸ್ಯರ ಹೆಸರಿನಲ್ಲಿ ಕೋಟಿ ಕೋಟಿ ಆಸ್ತಿ ಪಾಸ್ತಿ ಖರೀದಿಸಿದ್ದಾರೆಂದು, ಇತ್ತೀಚಿಗೆ ಹೊಟ್ಟೆ ಉರಿಯ ವರದಿ ಪ್ರಕಟಿಸಿದ್ದಾರೆ.

ಸುಳಿವು - 2 ದೊಡ್ಡ ಅಧಿಕಾರ ಸ್ಥಾನದಲ್ಲಿರುವ ಇವರ ತಂದೆಯವರು ಜನರ ಸಮಸ್ಯೆಗಳ ಪರಿಹಾರ ಕಾರ್ಯದಲ್ಲಿ ಮುಳುಗಿ ಲೋಕಾಯುಕ್ತರಿಗೆ ಸಮಯಕ್ಕೆ ಸರಿಯಾಗಿ ತಮ್ಮ ಆಸ್ತಿ ವಿವರ ಪೂರೈಸುವುದರಲ್ಲಿ ವಿಫಲವಾದರು.

ಸುಳಿವು-3 ಇವರ ತಂದೆ ರಾಜ್ಯದಲ್ಲಿ ಅಧಿಕಾರಕ್ಕೇರಿದಾಗ ಇವರ ತಾತ ತುಂಬಾ ನೊಂದುಕೊಂಡು ಅವರ ಬಾಯಿಂದ ಮಾತೆ ಹೊರಡಲಿಲ್ಲ. ಗುಂಡುಕಲ್ಲಿನಂತಿದ್ದ ಇವರ ಆರೋಗ್ಯ ಆಗ 15-20 ದಿನ ಕೆಟ್ಟು ಹೋಗಿತ್ತು. ಅವರು ಯಾರ ಕೈಗೂ ಸಿಗಲಿಲ್ಲ. ಆರೋಗ್ಯ ಕ್ರಮೇಣ ಸುಧಾರಿಸಿತು. ಅದೇ ರೀತಿ ಮತ್ತೊಮ್ಮೆ ಅವರ ಕೆಡುವ ಸಾಧ್ಯತೆ ಇದೆ ಎಂದು ರಾಜ್ಯದ ರಾಜಕೀಯ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

ಪ್ರತಿಭೆ 3 : ಇವರು ತಮ್ಮ ತಂದೆಯವರ ಕ್ಷೇತ್ರದ ಅಭಿವೃದ್ಧಿಗೆ ಇವರು ಟೊಂಕಕಟ್ಟಿ ದುಡಿಯುತ್ತಿದ್ದಾರೆ. ಭ್ರಷ್ಟಾಚಾರ. ಅವ್ಯವಹಾರ ಎಂದರೆ ತಂದೆಯಂತೆಯೇ ಇವರು ಕಿಡಿ ಕಿಡಿಯಾಗುತ್ತಾರೆ. ಮೊನ್ನೆ ತಂದೆಯವರ ಕ್ಷೇತ್ರದಲ್ಲಿನ ಕಾಮಗಾರಿಗಳಲ್ಲಿ ಭ್ರಷ್ಟಾಚಾರ, ಕಳಪೆ ಕೆಲಸ ನಡೆದಿದೆ ಎಂದು ಕಾಮಗಾರಿ ಪರಿಶೀಲಿಸಲು ಬಂದ ಮಹಿಳೆಯರಿಗೆ ಚೆನ್ನಾಗಿಯೇ ತದುಕಿದ್ದಾರೆ. ಆ ಮಹಿಳೆಯರೊಂದಿಗೆ ತಮ್ಮ ತಂದೆಯವರಿಗೆ ಪ್ರಿಯವಾದ 'ಸಂಸ್ಕೃತ'ದಲ್ಲೇ ಜೋರು ಜೋರಾಗಿ ಮಾತನಾಡಿದರೆಂದು ವರದಿಯಾಗಿದೆ. ಇವರು ಯಾರು?

ಸುಳಿವು-1: ಬೆಂಗಳೂರಿನ ಡಾಲರ್ಸ್ ಕಾಲೋನಿ ಸಮೀಪದ ಇವರ ತಂದೆ ಮನೆಯ ಹತ್ತಿರದಲ್ಲಿ ಮನೆ ಮಾಡಬಾರದೆಂದು ಇವರ ಪಕ್ಷದ ಯುವ ಶಾಸಕಿಯೊಬ್ಬರಿಗೆ ತಾಕೀತು ಮಾಡಲಾಗಿದೆ.

ಸುಳಿವು-2: ಇವರ 'ವೃದ್ಧ' ತಾಯಿ 1 1/2 ಅಡಿಯಷ್ಟೆ ಅಗಲವಿರುವ ನೀರಿನ ತೊಟ್ಟಿಯ ಬಾಯಿಯೊಳಗೆ ಹೇಗೋ 'ಆಕಸ್ಮಾತ್' ಜಾರಿ ಬಿದ್ದು ಇತ್ತೀಚಿಗೆ ಹಿಂದೆ ತೀರಿಕೊಂಡರು.

ಸುಳಿವು-3 : ಕುರ್ಚಿಗೆ ರೆಕ್ಕೆ ಬಂದು ಕೈಗೆ ಸಿಗದೆ ಹಾರಿ ಹೋದಂತೆ, ಕುರ್ಚಿಯೇ ಇವರ ಮೇಲೆರಗಿ ಬಿದ್ದಂತೆ, ಕುರ್ಚಿಯ ಕಾಲು ಮುರಿದು ಕೆಳಗೆ ಜಾರಿ ಬಿದ್ದಂತೆ, ರಾತ್ರಿ ಇಡೀ ಬರಿ ಇಂಥದ್ದೇ ಕೆಟ್ಟ ಕನಸುಗಳೇ ಬೀಳುತ್ತಿವೆ ಎಂದು ಇತ್ತೀಚಿಗೆ ಇವರ ತಂದೆ ವೈದ್ಯರ ಬಳಿ ಹೋಗಿದ್ದರೆಂದು ರಾಜ್ಯದಲ್ಲೆಲ್ಲಾ ಸುದ್ದಿ ಹರಡಿದೆ.

ಅಕಾಡೆಮಿಗಳ ಅವಾಂತರ

ಎಲ್ಲಾ ಪ್ರಶಸ್ತಿಗಳು ಹೀಗೆ ಮಾನ - ಮೌಲ್ಯ ಕಳೆದುಕೊಳ್ಳಬೇಕೆ?

ರ್ನಾಟಕದ ಕೆಲವು ಅಕಾಡೆಮಿಗಳ ವರ್ತನೆಗಳು ಶ್ಚರ್ಯವನ್ನುಂಟು ಮಾಡುತ್ತಿವೆ. ತೀರಾ ಹಳಸಲು ರ್ಯಕ್ರಮವನ್ನೇ ಮಾಡುತ್ತಾ, ಚಾರಕ್ಕೊಂದು ಕಾರ್ಯಕ್ರಮ ಎನ್ನುವಂತಾಗಿದೆ. ಣ ಬಿಡುಗಡೆ ಆಗುತ್ತದೆ, ಮತ್ತು ಹಣ ಲಿಯಾಗುತ್ತದೆ. ಅಕಾಡೆಮಿ- ಅಕಾಡೆಮಿಗಳ ತುವೆ ಸಂಬಂಧಗಳೇ ಇಲ್ಲ. ಎತ್ತುಏರಿಗೆ ಕೋಣ ರೆಗೆ ಎನ್ನುವ ರೀತಿಯಲ್ಲಿ ಇವರ ರ್ತನೆಗಳಿವೆ. ಬದ್ಧತೆಯಾಗಲಿ, ಶಿಸ್ತಾಗಲಿ ಲ್ಲಿರಬೇಕಾಗಿತ್ತು ಎಂದು ಆಲೋಚಿಸುವುದೇ ಊರ್ಖತನ ಎನ್ನುವ ಸ್ಥಿತಿ ರ್ಮಾಣವಾಗಿದೆ.

ಪ್ರಶಸ್ತಿ ಕೊಡುವುದೇ ಪ್ರಮುಖ ವ್ಯವಹಾರವೇ?

ಇತ್ತೀಚೆಗೆ ನಾಟಕ ಅಕಾಡೆಮಿಯ ಶಸ್ತಿಯ ಪಟ್ಟಿ ಇದಕ್ಕೊಂದು ಜೀವಂತ ದಾಹರಣೆ. ಸುಮಾರು ನೂರು ಜನರಿಗೆ ಶಸ್ತಿ ವಿತರಣೆ, ಕರ್ನಾಟಕದಲ್ಲಿ ಸಮರ್ಥ ಾವಿದರ ಕೊರತೆ ಇದೆ ಎಂದಲ್ಲ. ಆದರೂ ರ್ಷಕ್ಕೆ ನೂರು ಇನ್ನೂರು ಜನರಿಗೆ ಪ್ರಶಸ್ತಿ ತರಿಸುತ್ತಾ ಹೋದರೆ ಆ ಪ್ರಶಸ್ತಿ ತನ್ನ ಮೌಲ್ಯವನ್ನೇ ಕಳೆದುಕೊಂಡು ಬಿಡಬಹುದು. ನ್ನು ಮುಂದೆ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ ನ್ನುವುದು ಒಂದು ಪುಳಕದ ಸಂಗತಿ ಯಾಗಲಿ, ಮ್ಮೆಯ ಸಂಗತಿ ಯಾಗಲಿ ಆಗಿರಲು ಸಾಧ್ಯವಾಗ ರಬಹುದು. ಪ್ರಶಸ್ತಿ ಕೊಡುವುದೇ ಈ ಕಾಡೆಮಿಗಳ ಒಂದು ಪ್ರಮುಖ ವ್ಯವಹಾರ ವಾಗಿ ಟ್ಟರೆ ಹೀಗೆಲ್ಲಾ ಆಗುವ ಸಾಧ್ಯತೆ ಇದೆ.

ಈ ವರ್ಷದ ಪ್ರಶಸ್ತಿ ವಿತರಣೆಯಲ್ಲಿ ಇನ್ನೊಂದು ಮಾಷೆಯೂ ಇದೆ. ಮರದ ಮೇಲೆ ನಾಟಕ ಮಾಡಿದ್ದಕ್ಕಾಗಿ ಪ್ರಶಸ್ತಿ!, ಸಮುದ್ರದಲ್ಲಿ ನಾಟಕ ಮಾಡಿದ್ದಕ್ಕಾಗಿ ಪ್ರಶಸ್ತಿ!... ಹೇಗಿದೆ ಪ್ರಶಸ್ತಿಯ ಮಾನದಂಡ? ಬೀದಿಯ ಮೇಲೆ ನಾಟಕ, ಸ್ಲಂನಲ್ಲಿ ನಾಟಕ, ಶಾಲಾ ಕಾಲೇಜಿನಲ್ಲಿ ನಾಟಕ.... ಎಂದರೆ ಅವಕ್ಕೊಂದು ರಾಜಕೀಯ ಬದ್ಧತೆಯೋ, ಶೈಕ್ಷಣಿಕ ಬದ್ಧತೆಯೋ ಇರುವುದರಿಂದ ಅದಕ್ಕೊಂದು ಮಾನ್ಯತೆಯೂ, ಮಹತ್ವವೂ ಇರುತ್ತದೆ. ಆದರೆ ಮರದ ಮೇಲೆ, ಕೆರೆಯ ಒಳಗೆ, ದೂರವಾಣಿ, ವಿದ್ಯುತ್ ತಂತಿಯ ಮೇಲೆ... ಹೀಗೆ ಮುಂದುವರಿದು ಇಂತಹ ಪ್ರಶಸ್ತಿಗಾಗಿಯೇ ಹೊಸ ಪ್ರಯೋಗದ ಹೆಸರಿನಲ್ಲಿ ಕಸರತ್ತುಗಳು ಹೆಚ್ಚಾಗಬಹುದು. ಇದು ಆರೋಗ್ಯಕರ ಬೆಳವಣಿಗೆಯಂತೂ ಅಲ್ಲ.

ಇಂತಹ ಜನರ ಗೌರವಕ್ಕೆ ಚ್ಯುತಿ ಬರುವಂತಾಗಬಾರದಲ್ಲವೇ?



ಹಿಂದೆ ನಾಗೇಶ ಅವರು ಅಕಾಡೆಮಿ ಅಧ್ಯಕ್ಷರಾಗಿರುವಾಗ ಬೆಂಗಳೂರು ಬಿಟ್ಟು ಹೊರ ಜಿಲ್ಲೆ, ತಾಲ್ಲೂಕುಗಳಲ್ಲಿ ಕಾರ್ಯಕ್ರಮ ನಡೆದವು. ಈಗ ಮತ್ತೆ ಅವರು ಬೆಂಗಳೂರಿನ ಗುತ್ತಿಗೆಯಂತಿವೆ. ಹಾಗೆಯೇ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಯಕ್ಷಗಾನ ಹೊರಹೋಗಿ ಪ್ರತ್ಯೇಕ ಅಕಾಡೆಮಿಯಾಗಿ ರೂಪುಗೊಳ್ಳುತ್ತಿವೆ. ಯಕ್ಷಗಾನ ಜಾನಪದವಲ್ಲ ಎಂದು ಹಲವು ವರ್ಷಗಳಿಂದ ವಾದ ಮಂಡಿಸುತ್ತಾ ಬಂದ ಹಿರಿಯ ಯಕ್ಷಗಾನ ಕಲಾವಿದ, ಚಿಂತಕ ಶ್ರೀ ಕೆರೆಮನೆ ಶಂಭು ಹೆಗಡೆಯವರು ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ಮಾಡಿರುವ ಸಾಧನೆ ಏನು ಎಂದು ಕೇಳಿದರೆ ಹೊಸ ಅಕಾಡೆಮಿ ರಚಿಸಲು ಯಶಸ್ವಿಯಾಗಿದ್ದು.

ಸದಾ ಮಠ ಮಾನ್ಯತೆಯೊಂದಿಗೆ ಗುರುತಿಸಿಕೊಳ್ಳುತ್ತಿದ್ದ, ಬಿಜೆಪಿಯನ್ನು ಒಳಗೊಂಡಂತೆ ಹಿಂದೂ ಕೋಮುವಾದಿ ಸಂಘಟನೆಯೊಂದಿಗೆ ಗೆಳೆತನದಲ್ಲಿರುವ ಶಂಭು ಹೆಗಡೆಯವರಿಗೆ ಬಿಜೆಪಿ-ಜೆಡಿ(ಎಸ್) ಮೈತ್ರಿ ಸರ್ಕಾರ ಕೊಟ್ಟ ಕೊಡುಗೆ ಇದಾಗಿರಬಹುದು! ಇತ್ತೀಚಿಗೆ ರಾಜ್ಯದಲ್ಲಿ ನಡೆದ ಹಲವು ಹಿಂದೂ ಸಮಾಜೋತ್ಸವದಲ್ಲಿ ಪ್ರಮುಖ ಭಾಷಣಕಾರರಾಗಿ ಭಾಗವಹಿಸಿದ್ದ ಶಂಭು ಹೆಗಡೆಯವರಿಗೆ ಬಿಜೆಪಿ ಸರ್ಕಾರ ಕೊಟ್ಟ ಕೊಡುಗೆ ಇದಲ್ಲದೆ ಬೇರೆನೂ ಅಲ್ಲ.

ಯಕ್ಷಗಾನ ಅಕಾಡೆಮಿಯ ವ್ಯಾಪ್ತಿಗೆ ಇನ್ನು ಮುಂದೆ ಸಣ್ಣಾಟ, ದೊಡ್ಡಾಟ, ಪಾರಿಜಾತಗಳನ್ನೂ ಒಳಗೊಳಿಸುತ್ತಾರೆಯೇ? ಅಥವಾ ಅವಕ್ಕೆಲ್ಲಾ ಒಂದೊಂದು ಅಕಾಡೆಮಿಯೇ? ಪ್ರತಿವರ್ಷ ಯಕ್ಷಗಾನ ರಂಗದ 3-4 ಜನರಿಗೆ ಪ್ರಶಸ್ತಿ ಬರುತ್ತಿತ್ತು. ಮುಂದೆ 15-20 ಜನಕ್ಕೆ ಹಿಗ್ಗಿಸುವುದಷ್ಟೇ ಸೀಮಿತ ಆಗಬಹುದೇ? ಯಕ್ಷಗಾನ ರಂಗದ ಬೆಳವಣಿಗೆಗೆ ಅಕಾಡೆಮಿ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನುವ ಚರ್ಚೆ ಹೆಚ್ಚು ಗಂಭೀರವಾಗಿ ನಡೆಯಬೇಕಾಗಿದೆ. ಕರ್ನಾಟಕ ಸರ್ಕಾರಕ್ಕೆ ಒಂದು ಸಾಂಸ್ಕೃತಿಕ ನೀತಿ ಇಲ್ಲದಿರುವಾಗ ಅಕಾಡೆಮಿ ಇರಬೇಕು ಎಂದು ಆಶಿಸುವುದು ತಪ್ಪಾಗಬಹುದಲ್ಲವೇ? ಅದು ಬಿಟ್ಟು ಇದರ ಕೇಂದ್ರ ಸ್ಥಳ ಉಡುಪಿಯಲ್ಲಿ ಆಗಬೇಕು, ಮಂಗಳೂರಿನಲ್ಲಿ ನಡೆಯಬೇಕು, ಉತ್ತರ ಕನ್ನಡದಲ್ಲಿರಬೇಕು ಎಂದು ಬೇಡಿಕೆ ಮುಂದಿಡುವಲ್ಲಿ, ಅದಕ್ಕಾಗಿ ವಶೀಲಿ ಹಚ್ಚುವಲ್ಲಿ ತಲ್ಲೀನರಾಗಿದ್ದು ಮಾತ್ರ ವಿಷಾದನೀಯ.

■ ನಿಸರ್ಗ

1857 ರ ಹೋರಾಟ ಸಿಪಾಯಿ ದಂಗೆಯೇ?

ಪುಟ 4 ರಿಂದ

ಭಾರತದ ಬ್ರಿಟಿಷ್ ಆಡಳಿತಗಾರರು, ಸೈನಿಕ ಅಧಿಕಾರಿಗಳು ಈ ಯುದ್ಧವನ್ನು "ಸೈನಿಕ ದಂಗೆ" ಎಂದು ಕರೆದು ಅದರ ಪ್ರಾಮುಖ್ಯತೆಯನ್ನು ಅವಗಣನೆಗೆ ಗುರಿಪಡಿಸಲು ಮಾಡಿದ ಪ್ರಯತ್ನಗಳನ್ನು ನಂತರದ ಕಾಲಘಟ್ಟಗಳಲ್ಲಿ ಇದರ ಬಗ್ಗೆ ಬರೆದ ಇಂಗ್ಲೀಷ್ ಇತಿಹಾಸಕಾರರೇ ಇದನ್ನು ಕೇವಲ ಒಂದು ಸೈನಿಕ ದಂಗೆಯೆಂದು ವಿವರಿಸುವುದು ಸರಿಯಲ್ಲವೆಂದು ಹೇಳಿರುವ ಹಲವಾರು ಉದಾಹರಣೆಗಳಿವೆ. 1857ರ ಪ್ರಕ್ಷೋಭೆಗಳಲ್ಲಿ ಕಾರ್ಯ ನಿರ್ವಹಿಸಿದ ಇಲ್ಲವೇ ಅವುಗಳನ್ನು ಕಣ್ಣಾರೆ ಕಂಡ ಅನೇಕ ಬ್ರಿಟಿಷ್ ಅಧಿಕಾರಿಗಳು ಇದನ್ನು ಕೇವಲ 'ಸಿಪಾಯಿ ದಂಗೆ' ಎಂದು ಕರೆಯಲು ಅತ್ಯಂತ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಕರ್ನಲ್ ಜಿ.ಬಿ., ಮ್ಯಾಲ್ಸನ್, ಸರ್ ಜಾನ್ ವಿಲಿಯಂಕೇ, ಚಾರ್ಲ್ಸ್ ಬಾಲ್ ರೆ. ಅಲೆಕ್ಸಾಂಡರ್ ಢಫ್ ಮುತ್ತಿತರ ಇತಿಹಾಸಕಾರರು ಸೈನಿಕ ಬಂಡಾಯಕ್ಕಿದ್ದ ಜನಸಮೂಹದ ಬೆಂಬಲವನ್ನು ನಂತರ ಅನಿವಾರ್ಯವಾಗಿ ಅತ್ಯಂತ ಸ್ಪಷ್ಟವಾಗಿ ಗುರ್ತಿಸಿದ್ದಾರೆ. ಇತಿಹಾಸಕಾರ ಜೆ.ಡಬ್ಲ್ಯೂ.ಕೇ ಗಂಗಾತಟದಿಂದ ಹಿಡಿದು ಯಮುನಾ ನದಿವರೆಗೆ ಬ್ರಿಟಿಷ್ ವಿರೋಧಿಯಾಗಿರದ ಯಾವೊಬ್ಬ ಹಿಂದೂ ಅಥವಾ ಮುಸಲ್ಮಾನ ಇರಲಿಲ್ಲ' ಎಂದು ಹೇಳಿ ಈ ಹೋರಾಟದ ವಿಶಾಲ ವ್ಯಾಪ್ತಿಯನ್ನು ಮಾನ್ಯ ಮಾಡುತ್ತಾರೆ. ಮ್ಯಾಲ್ಸನ್ ಪ್ರಕಾರ ಔದ್ (ಅಯೋಧ್ಯಾ), ರೋಹಿಲ್ ಖಂಡ್ ಬುಂದೇಲ್ ಖಂಡ್, ಸಾಗರ್ ಮತ್ತು ನರ್ಮದಾ ಪ್ರದೇಶಗಳ ಬಹುಪಾಲು ಜನ ಬ್ರಿಟಿಷರ ವಿರುದ್ಧ ಇದ್ದರು ಎಂದು ಒಪ್ಪಿಕೊಳ್ಳುತ್ತಾರೆ.

ಟೋರಿ ನಾಯಕರಾಗಿದ್ದ ಕನ್ಸರ್ವೆಟಿವ್ ಪಕ್ಷದ ನಾಯಕರಾಗಿದ್ದ ಡಿಸ್ರೇಲಿ 27.07.1857ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈ ಬಂಡಾಯದ ಬಗ್ಗೆ ಮಾತನಾಡುತ್ತಾ ಇದು ಕೇವಲ ಸಿಪಾಯಿ ದಂಗೆ ಎಂಬ ಅಭಿಪ್ರಾಯವನ್ನು ಅತ್ಯಂತ ಸ್ಪಷ್ಟವಾಗಿ ನಿರಾಕರಿಸಿ ಇದನ್ನು ರಾಷ್ಟ್ರೀಯ ಬಂಡಾಯ ಎಂದು ಕರೆದು ಸಿಪಾಯಿಗಳು ಈ ಬಂಡಾಯದ ಕಾರ್ಯನಿರ್ವಾಹಕ ಸಾಧನವಷ್ಟೇ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಬ್ರಿಟಿಷ್ ಇತಿಹಾಸಕಾರರು ಇದನ್ನು "ಸಿಪಾಯಿದಂಗೆ" ಎಂದು ಕರೆದರು ಎಂಬ ಕಾರಣಕ್ಕೆ ಅದನ್ನು ಒಪ್ಪಲಾರದ ಅನೇಕ ದೇಶೀಯ ಇತಿಹಾಸಕಾರರು 1857ರ ಘಟನಾವಳಿಗಳನ್ನು ಯಾವ ರೀತಿ ನಿರೂಪಿಸಬೇಕು, ವಿವರಿಸಬೇಕೆಂಬ ಬಗ್ಗೆ ಗೊಂದಲಕ್ಕೆ ಬೀಳುವುದನ್ನು ಕಾಣುತ್ತೇವೆ. ನಿರಾಕರಣೆಯ ನೆಲೆಯಲ್ಲಿ ನಿಂತು ಮಾತನಾಡುವಾಗ ಸೈನಿಕರ ಪಾತ್ರ ಅವಗಣನೆಗೆ ಗುರಿಯಾಗುವ ಅಪಾಯವಿದೆ. ಈ ಯುದ್ಧದಲ್ಲಿ ಪಾಲ್ಗೊಂಡ ಸೈನಿಕರು ಅಥವಾ ನಾಗರೀಕರು ಸರ್ಕಾರದ ವಿರುದ್ಧ ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಡಿದ್ದು ಪರಕೀಯರ ಆಳ್ವಿಕೆಯನ್ನು ಕಿತ್ತೆಸೆದು ದೇಶಕ್ಕೆ ಸ್ವಾತಂತ್ರ ಗಳಿಸಿಕೊಡುವ ಹೋರಾಟವಾಗಿರದೆ ಅದೊಂದು ಸ್ವ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ 'ಸ್ವಾರ್ಥ ಪರ ಹೋರಾಟವಾಗಿ' ತ್ತೆಂದು ಅನೇಕ ಭಾರತೀಯ ಇತಿಹಾಸಕಾರರು ಅಭಿಪ್ರಾಯ ಪಟ್ಟು ಅದನ್ನು ಸ್ವಾತಂತ್ರ ಹೋರಾಟವೆಂದು ಪರಿಗಣಿಸಲು ಸ್ಪಷ್ಟವಾಗಿ ನಿರಾಕರಿಸುತ್ತಾರೆ. ಈ ಅಭಿಪ್ರಾಯದ ಮುಖ್ಯ ಪ್ರತಿಪಾದಕರು ಡಾ: ಆರ್.ಸಿ. ಮಜುಂದಾರ್. ಅವರ ಪುಸ್ತಕದ "Sepoy Muliny and the Revolt of 1857" ಎಂಬ ಶೀರ್ಷಿಕೆ ಅವರ ಗೊಂದಲಗಳನ್ನು ಧ್ವನಿಸುತ್ತದೆ. ಮೌಲಾನಾ ಆಜಾದ್‌ರ ಮುನ್ನುಡಿಯನ್ನು ಹೊಂದಿರುವ ಡಾ ಸೇನ್ ರ "Eighiteen Fifty Seven" ಪುಸ್ತಕದಲ್ಲಿ "ಔದ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇದೊಂದು ಜನತಾ ಬಂಡಾಯವಾಗಿತ್ತು. ಉಳಿದ ಪ್ರದೇಶಗಳಲ್ಲಿ ಇದೊಂದು ಕೇವಲ ಸೈನಿಕ ದಂಗೆಯಾಗಿತ್ತೆಂದು" ಅಭಿಪ್ರಾಯಪಡುತ್ತಾರೆ. ಆದರೆ ಡಾ: ಎಸ್.ಬಿ.ಚೌಧರಿಯವರ ಅಭಿಪ್ರಾಯದಲ್ಲಿ ಇದೊಂದು ಜನತಾ ಬಂಡಾಯ.

ಮಹಿಳಾ ವಿ.ವಿ. ಎಬಿವಿಪಿ ದಾಂಧಲೆ

ಕರ್ನಾಟಕದಲ್ಲಿ ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸುವ ನಿರ್ಣಯ ಕೈಗೊಳ್ಳುವ ಮೂಲಕ ಹಿಂದಿನ ಎಸ್.ಎಂ.ಕೃಷ್ಣ ಸರ್ಕಾರ ಮಹಿಳೆಯರಿಗಾಗಿ ಏನನ್ನೋ ಮಾಡಿದ ಬಿಂಕದಲ್ಲಿ ಬೀಗಿದ್ದರು. ಖಂಡಿತ ಅದೊಂದು ಮನಸ್ಸಿನಲ್ಲದ ಮಾರ್ಗವಾಗಿದ್ದರಿಂದ ಹೆಸರಿಗೊಂದು ಮಹಿಳಾ ವಿ.ವಿ.ಯಾಯಿತೇ ವಿನಃ ಮಹಿಳಾ ಲೋಕದ ಅಭಿವೃದ್ಧಿಗಾಗಿ ಹೊಸ ಯೋಜನೆಗಳು ರೂಪುಗೊಂಡು ಅನೇಕ ಜ್ಞಾನ ಶಾಖೆಗಳ ತಾಣವೇನಾಗಲಿಲ್ಲ. ಅವೇ ಹಿಂದಿನಿಂದ ನಡೆದು ಬಂದ ವಿಷಯಗಳು. ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯ ಮೇರು ಹಂತದ ಈ ಸಂದರ್ಭದಲ್ಲಿ ಯಾವ ಹೊಸ ಕೋರ್ಸುಗಳನ್ನು ಪರಿಚಯಿಸದ ಮಹಿಳಾ ವಿಶ್ವ ವಿದ್ಯಾಲಯವು ಕ್ರಮೇಣ ಬರ ಬರುತ್ತಾ ವಿವಾದಗಳ ಹುತ್ತದಲ್ಲಿ ನರಳತೊಡಗಿತು. ಭ್ರಷ್ಟಾಚಾರದ ಕರಿ ನೆರಳು ವಿ.ವಿ. ಬೆಳವಣಿಗೆಗೆ ದೊಡ್ಡ ಅಡ್ಡಿಯೇ ಆಯಿತು. ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆಗಳು ಶುರುವಾದವು. ಸರ್ಕಾರ ಆಯೋಗವೊಂದು ರಚಿಸಿ ತನಿಖೆಗೆ ಆದೇಶಿಸಿದೆ. ತನಿಖಾ ವರದಿ ಬರುವ ಮುನ್ನವೇ ಈಗ ಮತ್ತೆ ಮಹಿಳಾ ವಿ.ವಿ. ಸುದ್ದಿಯಲ್ಲಿ ಬಂದಿದೆ.

ಆದರೆ ಇದೇ ಜುಲೈ 12 ರಂದು ನಡೆದ ಘಟನೆ ಮಾತ್ರ ಪ್ರಜಾಪ್ರಭುತ್ವ ಮೌಲ್ಯಗಳ ಅರಿವಿದ್ದವರಿಗೆ ಖಂಡಿತ ಆಘಾತಕರ ಸಂಗತಿ ಆಗಿದೆ. ಸಿಂಡಿಕೇಟ್ ಸಭೆ ರದ್ದುಗೊಳಿಸಲು ಆಗ್ರಹಿಸಿ ಎ.ಬಿ.ವಿ.ಪಿ.ಯು ವಿ.ವಿ.ಮುಂದೆ ಪ್ರತಿಭಟನೆ ಶುರುಮಾಡಿದೆ. ಸಭೆ ಮುಂದುವರೆದಾಗ ಎಬಿವಿಪಿ ರಾಜ್ಯ ಮುಖಂಡರೇ ನೇತೃತ್ವ ವಹಿಸಿದ್ದು ಪ್ರತಿಭಟನಾಕಾರರ ಗುಂಪು ಅಕ್ಷರಶಃ ಗೂಂಡಾಗಿರಿಗಿಳಿದಿದೆ ಎಂಬುದು ಎಲ್ಲ ಮಾಧ್ಯಮಗಳಲ್ಲಿ ಜಗಜ್ಜಾಹಿರಗೊಂಡಿದೆ. ಭ್ರಷ್ಟಾಚಾರದ ವಿರುದ್ಧ ದನಿ ಎತ್ತುವ ನಿಜವಾದ ಮನಸ್ಸು ಎಬಿವಿಪಿ ಗಿದ್ದರೆ ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಹೋರಾಟ ನಡೆಸಬಹುದಿತ್ತು. ಆದರೆ ಮೂಲಭೂತವಾಗಿ ಎಬಿವಿಪಿ ಯು ಅಲ್ಪಸಂಖ್ಯಾತ ವಿರೋಧಿ ಮತ್ತು ಮಹಿಳಾ ವಿರೋಧಿ ಅಜೆಂಡಾ ಹೊಂದಿ ರುವುದರಿಂದ ಸಹಜಾಗಿಯೇ ಅದು ತನ್ನ ಫ್ಯಾಶಿಸ್ಟ್ ಪ್ರವೃತ್ತಿ ಸಾಬೀತುಗೊಳಿಸಿದೆ. ಕಡತಗಳನ್ನು ಹರಿಯುವ ಮೂಲಕ, ಅವಾಚ್ಯ ಶಬ್ದಗಳಿಂದ ನಿಂದಿಸುವ ಮೂಲಕ ಕಟ್ಟಡ ಪೀಠೋಪಕರಣಗಳಿಗೆ ಹಾನಿ ಮಾಡುವ ಮೂಲಕ ತಾನೊಂದು ಫ್ಯಾಶಿಸ್ಟ್ ಗೂಂಡಾ ಸಂಸ್ಕೃತಿಯುಳ್ಳ ಸಂಘಟನೆ ಎಂಬುದನ್ನು ರುಜುಗೊಳಿಸಿದೆ.

ಕರ್ನಾಟಕದಲ್ಲಿ ಹಿಂಬಾಗಿಲಿನಿಂದ ಕುರ್ಚಿ ಹಿಡಿದ ಬಿಜೆಪಿ ಮತ್ತು ಜೆಡಿ(ಎಸ್) ಮೈತ್ರಿ ಸರ್ಕಾರಗಳು ಅಧಿಕಾರಕ್ಕೆ ಬಂದಾಗಿಂದ ಸಂಘ ಪರಿವಾರಗಳು ತಮ್ಮ ಹಿಡನ್ ಅಜೆಂಡಾವನ್ನು ರಾಜಾರೋಷವಾಗಿ ಜಾರಿ ಮಾಡತೊಡಗಿರು ವುದು ಅಪಾಯ ಕಾರಿಯಲ್ಲದೆ ಮತ್ತೇನು...? ನಾಡಿನ ಪ್ರಜ್ಞಾವಂತರೆಲ್ಲ ಎಬಿವಿಪಿಯ ಗೂಂಡಾ ಪ್ರವೃತ್ತಿಯನ್ನು ಖಂಡಿಸಿದ್ದಾರೆ. ಇದೇ ಸಂದರ್ಭದಲ್ಲಿ ವಿ.ವಿ. ಯಲ್ಲಿ ನಡೆದಿದೆಯೆನ್ನಲಾದ ಭ್ರಷ್ಟಾಚಾರ ವಿರುದ್ಧವೂ ತನಿಖೆ ನಡೆಯಬೇಕಾದ ಜರೂರಿಯೂ ಅಲ್ಲಗಳೆಯಲಾಗದು.

ಭಯೋತ್ಪಾದಕ ಬೀಜಗಳು ಮೊಳಕೆಯೊಡೆಯುತ್ತಿವೆ

ಇತ್ತೀಚೆಗೆ ಲಂಡನ್ ಮತ್ತು ಗ್ಲಾಸ್ಗೋದಲ್ಲಿ ನಡೆದ ಭಯೋತ್ಪಾದಕ ಧಾಳಿಗಳಲ್ಲಿ ಬೆಂಗಳೂರು ಮೂಲದ ಇಂಜಿನಿಯರ್, ಡಾಕ್ಟರುಗಳ ಪಾತ್ರವಿದೆಯೆಂಬ ಸುದ್ದಿ ನಮ್ಮೆಲ್ಲರಿಗೂ ಆಘಾತವುಂಟು ಮಾಡಿದೆ. ಅಧ್ಯಕ್ಷ ಬುಶ್ ಪ್ರಧಾನ ಮಂತ್ರಿ ಮನಮೋಹನ ಸಿಂಗ್‌ರನ್ನು ತನ್ನ ಹೆಂಡತಿಗೆ ಪರಿಚಯಿಸುತ್ತಾ 'ಇವರು ಸುಮಾರು 20ಕೋಟಿ ಮುಸ್ಲಿಮರಿರುವ ದೇಶದ ಪ್ರಧಾನ ಮಂತ್ರಿಗಳು, ಅವರಲ್ಲಿ ಒಬ್ಬರೂ ಅಲ್ ಖೈದಾದ ಜತೆಗಿಲ್ಲ' ಎಂದರಂತೆ. ಇದೆಷ್ಟು ನಿಜವೋ ಗೊತ್ತಿಲ್ಲ. ಆದರೆ ನಮ್ಮ ಪ್ರಧಾನಿಗಳು ಎರಡು ವರ್ಷಗಳ ಹಿಂದೆ ಸಿಎನ್‌ಎನ್ ಜತೆ ಸಂದರ್ಶನದಲ್ಲಿ ಯಾವ ಭಾರತೀಯನೂ ಅಲ್ ಖೈದಾ ಸೇರಿಲ್ಲ, ಏಕೆಂದರೆ ಭಾರತ 'ಒಂದು ಕಾರ್ಯನಿರತ ಪ್ರಜಾಪ್ರಭುತ್ವ' ಎಂದಿದ್ದರು.

ಭಾರತ ಸುರಕ್ಷಿತವೇ?

ಆದರೆ ಭಾರತ ಭಯೋತ್ಪಾದಕ ಧಾಳಿಗಳಿಂದ ಸುರಕ್ಷಿತವಾಗಿದೆ, ಇಲ್ಲಿ ಭಯೋತ್ಪಾದಕರನ್ನು ಪೋಷಿಸುವ ವಾತಾವರಣವಿಲ್ಲ ಎನ್ನಲು ಸಾಧ್ಯವೇ? ಸ್ಥಳೀಯ ಭಯೋತ್ಪಾದನೆಯ ಕೆಟ್ಟ ಅನುಭವಗಳಂತೂ ನಮಗೂ ಸಾಕಷ್ಟು ಆಗಿದೆ. ಇದರಲ್ಲಿ ಸಾವಿರಾರು ಜನ ಪ್ರಾಣ ಕಳಕೊಂಡಿದ್ದಾರೆ, ಅಭದ್ರತೆಯ ವಾತಾವರಣ ಇನ್ನೂ ಇದೆ. ಬಹುಶ: ನಮ್ಮ ಸಾಮಾಜಿಕ ವೈವಿಧ್ಯತೆಯಂತೆ ಭಯೋತ್ಪಾದಕ ಗುಂಪುಗಳಲ್ಲಿಯೂ ಬಹಳಷ್ಟು ವೈವಿಧ್ಯತೆ ಇದೆ. ಅವನ್ನು ವರ್ಗೀಕರಿಸುವುದೂ ಕಷ್ಟ.

ಭಾರತದಲ್ಲಿ ಅಲ್ ಖೈದಾದ ಸದಸ್ಯರಿದ್ದಾರೋ ಇಲ್ಲವೋ, ಇಂಗ್ಲೆಂಡ್‌ನಲ್ಲಿ ಸಂಭವಿಸಿದ ಧಾಳಿಗಳಲ್ಲಿ ಭಾರತೀಯರೂ ಇದ್ದಾರೆ ಎಂಬ ಸುದ್ದಿ ನಾವು ಮುಂಬೈಯಲ್ಲಿ 187 ಅಮಾಯಕರನ್ನು ಬಲಿ ತೆಗೆದುಕೊಂಡ 7/11 ರೈಲು ಸ್ಫೋಟಗಳನ್ನು ನೆನಪಿಸಿಕೊಳ್ಳುವ ಸಮಯದಲ್ಲೇ ಬಂದಿದೆ. ಇದುವರೆಗೂ ಈ ಹೀನ ಕೃತ್ಯವೆಸಗಿದವರು ಯಾರು ಎಂಬ ಬಗ್ಗೆ ಸ್ಪಷ್ಟ ಪುರಾವೆ ಸಿಕ್ಕಿಲ್ಲ.

ಭಯೋತ್ಪಾದೆಯ ಇತಿಹಾಸ

ಈ ದೇಶದ ರಾಷ್ಟ್ರಪಿತ ಒಬ್ಬ ಹಿಂದೂ ಭಯೋತ್ಪಾದಕನ ಗುಂಡಿಗೆ ಬಲಿಯಾದುದನ್ನು ಕಂಡಿದ್ದೇವೆ. ಒಬ್ಬ ಪ್ರಧಾನಿಯನ್ನು ಸಿಖ್ ಉಗ್ರಗಾಮಿಗಳು ಕೊಂದರು, ಇನ್ನೊಬ್ಬರನ್ನು(ಆಕೆಯ ಮಗ) ಎಲ್‌ಟಿಟಿಇಯವರು ಹತ್ಯೆಗೈದರು. ನೂರಾರು ಜನ ಪ್ರಾಣ ಕಳಕೊಂಡಿದ್ದಾರೆ, ಸಾವಿರಾರು ಜನ ಜಮ್ಮು-ಕಾಶ್ಮೀರದಲ್ಲಿ ಅಭದ್ರತೆಯ ಕರಿನೆರಳಲ್ಲಿ ಜೀವನ ಸಾಗಿಸಬೇಕಾಗಿದೆ. ಈಶಾನ್ಯ ಭಾರತದಲ್ಲಿ ಉಲ್ಫಾ ಮತ್ತಿತರ ಉಗ್ರಗಾಮಿ ಸಂಘಟನೆಗಳ ತಾಂಡವ; ಇನ್ನು ದೇಶಾದ್ಯಂತ ಕೋಮು ಗಲಭೆಗಳಂತೂ ದೊಡ್ಡ ಸಂಖ್ಯೆಯಲ್ಲಿ ಅಮಾಯಕ ಜೀವಗಳ ಬಲಿ ತೆಗೆದುಕೊಳ್ಳುತ್ತಲೇ ಇವೆ. ಗುಜರಾತ್ ಹತ್ಯಾಕಾಂಡ ಇದಕ್ಕೊಂದು ಜ್ವಲಂತ ಉದಾಹರಣೆ. ಈ ಹಿಂದಿನ ಸಂಸತ್ತು, ಕೆಂಪುಕೋಟೆ, ಅಕ್ಷರಧಾಮ ದೇವಸ್ಥಾನ, ರಘುನಾಥ ಮಂದಿರ(ಎರಡು ಬಾರಿ) ಇತ್ಯಾದಿ ಭಯೋತ್ಪಾದಕ ಧಾಳಿಗಳಲ್ಲದೆ ಈ ವರ್ಷವೇ ಸಮಜೌತಾ ಎಕ್ಸ್‌ಪ್ರೆಸ್, ಹೈದರಾಬಾದಿನ ಮಕ್ಕಾ ಮಸೀದಿ, ಗೋರಖ್‌ಪುರ ಇತ್ಯಾದಿಗಳಲ್ಲಿ ಭಯೋತ್ಪಾದಕ ಧಾಳಿಗಳನ್ನು ಕಂಡಿದ್ದೇವೆ. ಈಗಷ್ಟೆ ಛತ್ತೀಸ್‌ಗಡದಲ್ಲಿ ಮಾವೋವಾದಿಗಳು 24 ಭದ್ರತಾ ಸಿಬ್ಬಂದಿಯನ್ನು ಕೊಂದು ಹಾಕಿದ ಸುದ್ದಿ ಬಂದಿದೆ.

ಇವನ್ನೆಲ್ಲ ಇಲ್ಲಿ ನೆನಪಿಸಿಕೊಳ್ಳಲು ಕಾರಣ, ಭಾರತ ವಿವಿಧ ಭಯೋತ್ಪಾದಕ ಗುಂಪುಗಳ ನೆಲೆವೀಡಾಗಿದೆ ಎಂಬ ಸಂಗತಿಯ ಮೇಲೆ ಒತ್ತು ನೀಡುವುದು. ಆದ್ದರಿಂದ ಅಲ್ ಖೈದಾದ ಸದಸ್ಯರು ಇಲ್ಲಿಲ್ಲ ಎಂದೇನೂ ಸಮಾಧಾನ ಪಡಬೇಕಾಗಿಲ್ಲ. ಬಹುಶಃ ಈಗ ಇಂಗ್ಲೆಂಡಿನಲ್ಲಿನ ಭಯೋತ್ಪಾದಕ ಕೃತ್ಯಗಳ ನಂತರ ಇಂತಹ ಸಮಾಧಾನಕ್ಕೆ ಅವಕಾಶವಿಲ್ಲ.

ಖಂಡಿತವಾಗಿಯೂ ಇಂತಹ ಭಯೋತ್ಪಾದಕ ಕೃತ್ಯಗಳನ್ನು ಬಲವಾಗಿ ಖಂಡಿಸಬೇಕು, ಅದನ್ನು ಎಸಗಿದವರನ್ನು ಶಿಕ್ಷಿಸಬೇಕು. ಆದರೆ ಅದಕ್ಕೂ ಮುಖ್ಯವಾಗಿ ಇಂತಹ ಭಯೋತ್ಪಾದನೆಗಳನ್ನು ಎದುರಿಸಲು, ಅವು ಯಶಸ್ವಿಯಾಗದಂತೆ ತಡೆಯಲು ಸರಿಯಾದ ಕ್ರಮಗಳನ್ನು ರೂಪಿಸಬೇಕು. ವೈಯಕ್ತಿಕ ಭಯೋತ್ಪಾದನೆ ಮತ್ತು ಪ್ರಭುತ್ವದ ಭಯೋತ್ಪಾದನೆ ಪರಸ್ಪರ ಪೋಷಿಸಿಕೊಳ್ಳುತ್ತವೆ ಎಂಬುದನ್ನು ಬಹಳ ದಿನಗಳಿಂದ ನಾವು ಕಾಣುತ್ತಿದ್ದೇವೆ. ವೈಯಕ್ತಿಕ ಭಯೋತ್ಪಾದನೆಯನ್ನು ಪ್ರಭುತ್ವದ ಭಯೋತ್ಪಾದನೆಯನ್ನು ಹೆಚ್ಚಿಸುವ ಮೂಲಕ ಎದುರಿಸಲು ಪ್ರಯತ್ನಿಸಿದರೆ ಅದು ತದ್ವಿರುದ್ಧ ಪರಿಣಾಮ ಬೀರುವುದೇ ಹೆಚ್ಚು. ಅದರಿಂದ ಭಯೋತ್ಪಾದನೆಯನ್ನು ಜೀವಂತವಿಟ್ಟಂತಾಗುತ್ತದೆ. ಇದನ್ನು ಈಗಿನ ವಿಶ್ವ ಬೆಳವಣಿಗೆಗಳೇ ತೋರಿಸಿ ಕೊಡುತ್ತಿವೆ. ಲಂಡನ್ನಿನ 'ಇಕನಾಮಿಸ್ಟ್' ಪತ್ರಿಕೆ ಕೂಡಾ ಅಮೆರಿಕನ್ ಸಾಮ್ರಾಜ್ಯಶಾಹಿಯ 'ಭಯೋತ್ಪಾದನೆಯ ವಿರುದ್ಧದ ಸಮರ' ಜಗತ್ತಿನಲ್ಲಿ ಭಯೋತ್ಪಾದನೆಯ ಗುರಿಗಳ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಿತಷ್ಟೆ, ಆಮೂಲಕ ಇನ್ನಷ್ಟು ಸಾವು-ನೋವುಗಳಿಗೆ ಕಾರಣವಾಯಿತು ಎಂಬುದನ್ನು ಈಗ ಒಪ್ಪಿಕೊಳ್ಳಲಾರಂಭಿಸಿದೆ. 'ಭಯೋತ್ಪಾದನೆಯ ವಿರುದ್ಧ ಸಮರ 2001ರಲ್ಲಿ ಅಲ್ ಖೈದ ಮತ್ತು ಅದರ ತಾಲಿಬನ್ ಪ್ರಾಯೋಜಕರ ವಿರುದ್ಧ ಮಿಲಿಟರಿ ಕ್ರಮಗಳನ್ನು ಎರಡು ವರ್ಷಗಳ ನಂತರ ತನ್ನ ಹಳೆಯ ಶತ್ರು ಸದ್ದಾಂ ಹುಸೇನ್ ಮೇಲೆ ಸಮರದೊಂದಿಗೆ ಬೆರೆಸಿತು. ಸಪ್ಟಂಬರ್ 11ಕ್ಕೂ ಆತನಿಗೂ ಖಂಡಿತ ಏನೂ ಸಂಬಂಧವಿರಲಿಲ್ಲ. ಅಲ್ ಖೈದಕ್ಕೆ ಇರಾಕಿನ ಬಗ್ಗೆ ಆಕರ್ಷಣೆ ಮೂಡಿದ್ದು ಇರಾಕನ್ನು ಅತಿಕ್ರಮಿಸಿದ್ದರಿಂದಲೇ ಹೊರತು, ಇರಾಕಿನ ಅತಿಕ್ರಮಣಕ್ಕೆ ಅದು ಕಾರಣವಲ್ಲ' ಎಂದು ಅದೀಗ ಹೇಳುತ್ತಿದೆ.

ಭಯೋತ್ಪಾದನೆ ಒಂದು ನಿರ್ದಿಷ್ಟ ಧರ್ಮದ ಅಥವಾ ನಂಬಿಕೆಯ ವಿಶೇಷ ಲಕ್ಷಣ ಎಂಬ ದುರುದ್ದೇಶಪೂರಿತ ಪ್ರಚಾರ ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ಮತ್ತಷ್ಟು ಕಷ್ಟಕರಗೊಳಿಸಿದೆ. ಭಯೋತ್ಪಾದನೆ ಎಂಬ ಅಪರಾಧಕ್ಕೆ ಧರ್ಮವಿಲ್ಲ, ದೇಶವಿಲ್ಲ. ಸಾಮ್ರಾಜ್ಯಶಾಹಿಯ ಸೈದ್ಧಾಂತಿಕ ಗುರಿಗಳು ಹಾಗೂ ಜಗತ್ತಿನ ಮೇಲೆಲ್ಲಾ ತನ್ನ ಯಜಮಾನಿಕೆ ಹೇರುವ ಅದರ ಹವಣಿಕೆ ಅದರ 'ಭಯೋತ್ಪಾದನೆಯ ವಿರುದ್ಧ ಸಮರ'ದ ಸ್ವರೂಪವನ್ನು ನಿರ್ಧರಿಸುವುದರಿಂದ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಬ್ರಿಟನ್ ನಂತಹ ಅದರ ಮಿತ್ರರು ಭಯೋತ್ಪಾದನೆಯ ಪಿಡುಗು ಇನ್ನಷ್ಟು ಹೆಚ್ಚಿರುವ ಒಂದು ವಿಶ್ವವನ್ನು ಸೃಷ್ಟಿಸಿದಂತಾಗಿದೆ.

ಲಂಡನ್, ಗ್ಲಾಸ್ಗೋ ಧಾಳಿಗಳ ಬಗ್ಗೆ ಪ್ರಕಟವಾಗುತ್ತಿರುವ ಸಂಗತಿಗಳನ್ನು ಕೇಳಿ ಹಲವರಿಗೆ ಆಘಾತವಾಗುತ್ತಿದೆ. ಬೆಂಗಳೂರಿನ ಬ್ರಾಂಡ್ ಕೀರ್ತಿಗೆ ಕಳಂಕ ಬಂದಿದೆ ಎಂದು ಕೆಲವರ ಅಳಲು. ಜೀವನದಲ್ಲಿ ಮೇಲ್ಮಟ್ಟಕ್ಕೆ ಏರಬಹುದಾದ ಸಕಲ ಅವಕಾಶಗಳಿರುವ ಭಾರತದ ಮೇಲ್ಮಧ್ಯಮ ವರ್ಗದವರು, ಪರಿಣಿತ ತಂತ್ರಜ್ಞರು, ಭಯೋತ್ಪಾದಕರಾಗುವುದು ಸಾಧ್ಯವೇ ಎಂದು ಇನ್ನು ಕೆಲವರಿಗೆ ಆಶ್ಚರ್ಯ. ಜೀವ ಉಳಿಸುವವರು ಜೀವ ತೆಗೆಯುತ್ತಾರೆಯೇ ಎಂಬ ಪ್ರಶ್ನೆ ಕೆಲವರಿಗೆ. ಹೀಗೆ ನಾನಾ ರೀತಿಯಲ್ಲಿ ಈ ಅಪನಂಬಿಕೆ ವ್ಯಕ್ತಗೊಳ್ಳುತ್ತಿದೆ.

ಆದರೆ 1993 ರಿಂದ 2005ರ ನಡುವೆ ನಡೆದ ಐದು ಪ್ರಧಾನ ಭಯೋತ್ಪಾದಕ ಧಾಳಿಗಳ ಯೋಜನೆ ರೂಪಿಸಿದವರೆಲ್ಲಾ ವಿಶ್ವವಿದ್ಯಾಲಯಗಳ ಪದವೀಧರರು ಹಾಗೂ ಅವರಲ್ಲಿ ಯಾರೂ ಮದರಸಾಗಳಲ್ಲಿ ಪಾಠ ಕೇಳಿದವರಲ್ಲ ಎಂದು ಅಧ್ಯಯನಗಳಿಂದ ತಿಳಿದು ಬರುತ್ತದೆ. ಆದ್ದರಿಂದ ಭಯೋತ್ಪಾದಕರು ಹಿಂದುಳಿದ ಪ್ರದೇಶಗಳಿಂದ ಅಥವಾ ಕೊಳೆಗೇರಿಗಳಿಂದಲೇ ಬರುತ್ತಾರೆ ಎಂಬುದು ಸರಿಯಲ್ಲ. ಅದು ವರ್ಗಪಕ್ಷಪಾತದಿಂದ ಕೂಡಿದ ಒಂದು ಅಭಿಪ್ರಾಯವಷ್ಟೆ. ವಾಸ್ತವವಾಗಿ ಆಧುನಿಕ ವಿಶ್ವವಿದ್ಯಾನಿಲಯಗಳಿಗೂ ಭಯೋತ್ಪಾದನೆಗೂ ಮದರಸಾಗಳಿಗಿಂತ ಹೆಚ್ಚಿನ ಸಂಬಂಧವಿರುವಂತೆ ಕಾಣುತ್ತದೆ.

ಇನ್ನು ತಾಂತ್ರಿಕ ಪರಿಣಿತರು ಭಯೋತ್ಪಾದನೆಗೆ ಇಳಿಯುವ ಬಗ್ಗೆ ಎಂದೂ ಆಶ್ಚರ್ಯಪಡಬೇಕಾಗಿಲ್ಲ. ಗಿಲೋಟಿನ್ ಅಥವಾ ಶಿರಸ್ಛೇದಕ ಯಂತ್ರವನ್ನು ರೂಪಿಸಿದಾತ ಒಬ್ಬ ಡಾಕ್ಟರು, ಒಬ್ಬ ಉನ್ನತ ಪರಿಣಿತಿಯ ಸರ್ಜನ್. ವಾಸ್ತವವಾಗಿ ಅವನ ಹೆಸರನ್ನೆ ಆ ಯಂತ್ರಕ್ಕಿಡಲಾಗಿದೆ. ಭಯ ಎಂಬುದು ಒಂದು ಮಾನಸಿಕ ಅವಸ್ಥೆ. ಭಯೋತ್ಪಾದನೆ ಎಂಬುದು ಅಂತಹ ಮಾನಸಿಕ ಅವಸ್ಥೆಯನ್ನು ಸೃಷ್ಟಿಸುವ ತಂತ್ರಗಳು. ಈ ತಂತ್ರಗಳು ಹೆಚ್ಚು ಮುಂದುವರೆದಿದ್ದಷ್ಟು ಮಾನಸಿಕ ಅವಸ್ಥೆಯ ಮೇಲೆ ಅದರ ಪ್ರಭಾವ ಹೆಚ್ಚುತ್ತದೆ. ಆದ್ದರಿಂದ ಉನ್ನತ ಶಿಕ್ಷಣ ಪಡೆದರೆ ಭಯೋತ್ಪಾದನೆಯೊಡನೆ ನಂಟು ಬೆಳೆಯದು ಎಂಬುದು ಹಾಸ್ಯಾಸ್ಪದ.

ಭಯೋತ್ಪಾದನೆಯ ನಿರ್ಮೂಲನೆ ಹೇಗೆ?

ಹಾಗಿದ್ದರೆ ನಾವು ಭಯೋತ್ಪಾದನೆಯನ್ನು ಎದುರಿಸುವುದು ಮತ್ತು ಅಂತಿಮವಾಗಿ ಅದನ್ನು ನಿರ್ಮೂಲ ಮಾಡುವುದು ಹೇಗೆ? ನಿಜ, ಭಯೋತ್ಪಾದನೆಯ ವಿರುದ್ಧ ಎಚ್ಚರದಿಂದ ಇರಲೇಬೇಕು, ಅದು ಮರುಕಳಿಸದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು, ಬೇಹುಗಾರಿಕೆಯನ್ನು ಬಲಪಡಿಸಬೇಕು. ಆದರೆ ಇನ್ನೂ ಮುಖ್ಯ ಸಂಗತಿಯೆಂದರೆ ಕಳೆದ ವಾರ ಭಾರತದ ಪ್ರಧಾನ ಮಂತ್ರಿಗಳು ಹೇಳಿದಂತೆ 'ಭಯೋತ್ಪಾದನೆ ಬೇರು ಬಿಡುವಂತ ವಾತಾವರಣವನ್ನು ಸೃಷ್ಟಿಸದಿರುವುದು'.

ಹೌದು, ಈಗ ಇದನ್ನು ಮಾಡಬೇಕಾಗಿದೆ. ನಿಜವಾದ ದಮನವನ್ನು ಮತ್ತು ಅದರೊಂದಿಗೆ ಬರುವ ಅನ್ಯಾಯದ ಭಾವನೆಯನ್ನು ಅಳಿಸಿ ಹಾಕಿದ

ಪುಟ 11 ಕ್ಕೆ

> ನಾವು ಭಯೋತ್ಪಾದನೆಯನ್ನು ಎದುರಿಸುವುದು ಮತ್ತು ಅಂತಿಮವಾಗಿ ಅದನ್ನು ನಿರ್ಮೂಲ ಮಾಡುವುದು ಹೇಗೆ? ನಿಜ, ಭಯೋತ್ಪಾದನೆಯ ವಿರುದ್ಧ ಎಚ್ಚರದಿಂದ ಇರಲೇಬೇಕು, ಅದು ಮರುಕಳಿಸದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು, ಬೇಹುಗಾರಿಕೆಯನ್ನು ಬಲಪಡಿಸಬೇಕು. ಆದರೆ ಇನ್ನೂ ಮುಖ್ಯ ಸಂಗತಿಯೆಂದರೆ ಕಳೆದ ವಾರ ಭಾರತದ ಪ್ರಧಾನ ಮಂತ್ರಿಗಳು ಹೇಳಿದಂತೆ 'ಭಯೋತ್ಪಾದನೆ ಬೇರು ಬಿಡುವಂತಹ ವಾತಾವರಣವನ್ನು ಸೃಷ್ಟಿಸದಿರುವುದು'.





ಉಲ್ಫಾ ಉಗ್ರರ ಹಿಂಸಾಚಾರಕ್ಕೆ ಬಲಿಯಾದವರು

ಲಂಡನ್‌ನಲ್ಲಿ ವಿಮಾನ ನಿಲ್ದಾಣಕ್ಕೆ ನುಗ್ಗಲು ಯತ್ನಿಸಿದ ಭಯೋತ್ಪಾದಕರ ವಾಹನ



ಜನಶಕ್ತಿ ಕನ್ನಡ ವಾರಪತ್ರಿಕೆ

ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬುಡಕಟ್ಟು ಜನರ ಹಾಡಿಯಲ್ಲಿ ಹಸಿವಿನ ಸಾವು ಸಂಭವಿಸಿದೆ. ಇಂತಹ ಪ್ರಕರಣದಿಂದ ಆಳುವವರು ಏನನ್ನೂ ಕಲಿಯುವುದಿಲ್ಲ ಎಂಬುದಕ್ಕೆ ಸಾಕ್ಷಿಯೂ ಇಲ್ಲೇ ಇದೆ.

ಹಸಿವೆಂಬ ಹದ್ದು ಮರಿಹಕ್ಕಿಯೊಂದ ಹೊತ್ತೊಯ್ದಿತೋ !



ಸತ್ತ ಬಾಲಕಿಯ ಸಹೋದರ ಆಸ್ಪತ್ರೆಯಲ್ಲಿ

ಹೆಚ್.ಎ. ಅಕ್ಬರ್ ಪಾಷಾ, ಹೆಗ್ಗಡದೇವನಕೋಟೆ
ಆರ್.ರಾಮಕೃಷ್ಣ

ಆದಿವಾಸಿಗಳು, ಬುಡಕಟ್ಟು ಜನರು ಎಂದರೆ, ಅವರ ಬದುಕನ್ನು ಬರೀ ಸಿನಿಮಾಗಳಲ್ಲಿ ನೋಡುವವರ ಕಲ್ಪನೆಯೇ. ಅವರು ಬಣ್ಣ-ಬಣ್ಣದ ಚಿತ್ರ ವಿಚಿತ್ರವಾದ ಉಡುಪುಗಳನ್ನು ಧರಿಸುತ್ತಾರೆ. ಅವರು ಸಿನಿಮಾ ನಾಯಕ, ನಾಯಕಿಯರನ್ನು ಅಪಹರಿಸಿ ಅವರ ಸುತ್ತ ವಿಚಿತ್ರವಾಗಿ ಕುಣಿದು ಕಾಡುತ್ತಾರೆ. ಚಿತ್ರ ವಿಚಿತ್ರ ಭಾಷೆಯನ್ನು ಮಾತನಾಡುವ ಜನರು ಈ ಸಿನಿಮಾಗಳಲ್ಲಿ ತಿಂದುಂಡು ದಷ್ಟಪುಷ್ಟವಾಗಿದ್ದು ತಮ್ಮದೇ ಆದ ಸುಂದರ ಲೋಕದ ಸುವಿಹಾರಿಗಳಾಗಿರುತ್ತಾರೆ.

ಬದುಕು ಭೀಕರ

ಬುಡಕಟ್ಟು ಜನರ ಬದುಕಿನಲ್ಲಿ ಸೌಂದರ್ಯ ಸೊಬಗು ಇಲ್ಲವೆಂಬಲ್ಲ. ಆದರೆ ಅದು ಈ ಸಿನಿಮಾಗಳಲ್ಲಿನ ಚಿತ್ರದಂತಿದೆಯೇ. ಅದಕ್ಕೆ ಹತ್ತಿರವಾದರೂ ಇದೆಯೇ? ಈ ಬಗೆಯ ಸಿನಿಮಾಗಳಲ್ಲಿ ಬುಡಕಟ್ಟು ಜನರ ಬದುಕಿನ ವಾಸ್ತವ ಸುಳಿವಾದರೂ ಇದೆಯೇ?

ಇರಲಿ ಬುಡಕಟ್ಟು ಜನರ, ಬದುಕಿನ ಬವಣೆಗಳೇನು? ಅದರಲ್ಲೂ ಇವತ್ತಿನ ಸಂದರ್ಭದಲ್ಲಿ ಅವರು ಎದುರಿಸಬೇಕಾಗಿ ಬಂದಿರುವ ತಲ್ಲಣಗಳೇನು ಸಿನಿಮಾ ದೃಶ್ಯಾವಳಿಗಳಂತೆ ರಮ್ಯವಾಗಿಲ್ಲ. ಬಹಳ ಭೀಕರವಾಗಿವೆ.

ತಮ್ಮ ಮನೆಯ ಬಳಿ 14 ವರ್ಷದ ತನ್ನ ಕುಟುಂಬದ ಸದಸ್ಯೆ ಸುಜಾತಳನ್ನು ಕಳೆದು ಕೊಂಡು ಕಂಗೆಟ್ಟು ನಿಂತಿರುವ ಈ ಕುಟುಂಬವನ್ನು ನೋಡಿ. ಅವರ ಮುಖಗಳನ್ನು ದಿಟ್ಟಿಸಿ ನೋಡಿ. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಹಿರೇಹಳ್ಳಿ 'ಎ' ಕಾಲೋನಿಯ ಗಿರಿಜನ ಹಾಡಿಯಲ್ಲಿ ವಾಸವಿರುವ ಕುಟುಂಬವಿದು.

ರಕ್ತ ಹೀನತೆ, ಪೌಷ್ಟಿಕಾಂಶದ ಕೊರತೆ, ಕಣ್ಣಿಗೆ ರಾಚುತ್ತಿಲ್ಲವೆ? ಹಸಿವಿನ ಭೂತ ಇವರ ಮುಖಗಳಲ್ಲಿ, ಕಣ್ಣುಗಳಲ್ಲಿ ಕುಣಿಯುತ್ತಿರುವುದು ನಿಮಗೆ ಕಾಣುತ್ತದೆಯೇ? ಇವರ ಹೆಗಲನ್ನೇರಿ ಕುಳಿತಿರುವ ಬಡತನದ ಭೂತ ಕಾಣುತ್ತದೆಯೇ? ನಮಗೆ ನಿಮಗೆ ಅದು ಕಾಣಬಹುದು. ಆದರೆ ಬಡತನ ನಿರ್ಮೂಲನೆ, ಬುಡಕಟ್ಟು ಜನರ ಅಭಿವೃದ್ಧಿ, ನಿರುದ್ಯೋಗ ನಿವಾರಣೆ, ಅಭಿವೃದ್ಧಿ, ತಲಾದಾಯ. ರಾಷ್ಟ್ರೀಯ ಆದಾಯ.. ಅಂತ್ಯೋದಯ, ಸರ್ವೋದಯ... ಹೀಗೆ ಪುಂಖಾನುಪುಂಖವಾಗಿ ದೊಡ್ಡ ದೊಡ್ಡ



ಕಂಗೆಟ್ಟು ನಿಂತಿರುವ ಸುಜಾತ ಕುಟುಂಬ

ಪದಗುಚ್ಛಗಳನ್ನೇ ಉಚ್ಛರಿಸುವ ಆಳುವ ಜನರು ಮತ್ತು ಅಧಿಕಾರ ವರ್ಗಕ್ಕೆ ಇದೇನೂ ಕಾಣುವುದಿಲ್ಲ.

ಗಿರಿಜನರ ಬದುಕು ಕಿತ್ತುಕೊಂಡರು

ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ತಾರಕ ಎಂಬ ಜಲಾಶಯ ನಿರ್ಮಾಣ ಮಾಡಿದಾಗ ಕಾಡಿನ ಈ ಗಿರಿಜನರ ಬದುಕಿನ ಮೇಲೆ ಬರೆ ಬಿತ್ತು. ಅವರು ಬದುಕಿನ ನೆಲೆ ಕಳೆದುಕೊಂಡರು. ಸರ್ಕಾರ ಈ ನಿರಾಶ್ರಿತ ಕುಟುಂಬಗಳಿಗೆ ಸಾಗುವಳಿ ಜಮೀನು, ಭೂಮಿ ಅಥವಾ ಮತ್ತೇನು ಜೀವನಾಧಾರ ನೀಡಲಿಲ್ಲ. ಸರ್ಕಾರದಿಂದ ವಾಸಕ್ಕೆ ಮನೆಗಳೇನೋ ಸಿಕ್ಕಿತು. ಆದರೆ, ಸಾಕಷ್ಟು ಮನೆಗಳು ಇರಲಿಲ್ಲವಾದ್ದರಿಂದ ಒಂದೇ ಮನೆಯಲ್ಲಿ ಎರಡು ಮೂರು ಕುಟುಂಬಗಳು ವಾಸ ಮಾಡಬೇಕಾಗಿ ಬಂತು. ಭೂಮಿಯಿಲ್ಲದ ಈ ಕುಟುಂಬಗಳು ಅಕ್ಕಪಕ್ಕ ದೊರೆಯುವ ಕಡಿಮೆ ದಿನಗೂಲಿಯ ಮೇಲೆ ಬದುಕು ಸಾಗಿಸಬೇಕಾಯಿತು. ವರ್ಷದ ಎಲ್ಲಾ ದಿನಗಳು ಕೆಲಸ ದೊರೆಯುವ ಭರವಸೆಯಿಲ್ಲ. ಆದ್ದರಿಂದ ವರ್ಷದ ಕೆಲವು ತಿಂಗಳು ಪಕ್ಕದ ಕೊಡಗಿಗೆ ಅಥವಾ ಬೇರೆಲ್ಲಾದರೂ ಕೂಲಿ ಹುಡುಕಿಕೊಂಡು ವಲಸೆ ಹೋಗುತ್ತಾರೆ.

ಪಡಿತರ ಕಾರ್ಡು ಇಲ್ಲ!

ಕಿತ್ತು ತಿನ್ನುವ ಬಡತನದಿಂದ ನರಳುತ್ತಿರುವ ಈ ಗಿರಿಜನರಿಗೆ ಪಡಿತರ ಚೀಟಿಯಿಂದ ದೊರೆಯುವ ರೇಷನ್ ಒಂದು ಪ್ರಮುಖ ಆಧಾರ. ಆದರೆ ಹಾಡಿನ 20 ಕ್ಕೂ ಕುಟುಂಬಗಳಿಗೆ ಪಡಿತರ ಚೀಟಿಯೇ ದೊರೆತಿಲ್ಲ. ಸಕಾರದ ಅವೈಜ್ಞಾನಿಕ ನಿಯಮ ಹೇಗಿದೆಯೆಂದರೆ ಒಂದೇ ಸೂರಿನಡಿ 2-3 ಕುಟುಂಬಗಳು ವಾಸವಿದ್ದರೂ ಒಂದು ಮನೆಗೆ ಒಂದೇ ಪಡಿತರ ಚೀಟಿ!!

ಆ ಮನೆಯಲ್ಲಿ 3 ಕುಟುಂಬಗಳು ವಾಸ ಇವೆ. ಇಲ್ಲಿ ಬಾಡಿದ ಮುಖ ಹೊತ್ತು ನಿಂತಿರುವ ಸಣ್ಣ ಕಾಳಯ್ಯ ಬಿನ್ ಸಣ್ಣಯ್ಯ ಅವರು ಕುಟುಂಬವೂ ಅದರಲ್ಲಿ ಒಂದು.

ಏನಾಯ್ತು ಅವತ್ತು ?

ಈ ಕುಟುಂಬದ ಹಿರಿಯರು ಅವತ್ತು ಕೂಲಿಗೆ ಹೋಗಿದ್ದರು. ಮನೆಯಲ್ಲಿ ತಿನ್ನಲು ಏನಿಲ್ಲ. ಕಲ್ಲು ತಿಂದು ಕರಗಿಸುವೆನೆನ್ನುವ ವಯಸ್ಸಿನ ಮಕ್ಕಳ ಹೊಟ್ಟೆ- ಮನೆಯಲ್ಲಿ ಕಾಳಿಲ್ಲ ಎಂದರೆ ಸುಮ್ಮನಿರುವುದೇ? 14 ವರ್ಷದ ಸುಜಾತ ಇಬ್ಬರು ತಮ್ಮಂದಿರು ಒಬ್ಬಳು ತಂಗಿಯೊಂದಿಗೆ ಹೋಗಿ ಪಕ್ಕದ ಹೊಲದಲ್ಲಿ (ಕ್ರಿಮಿನಾಶಕ ಔಷಧಿ ಸಿಂಪಡಿಸಿದ ಎಂಥದ್ದೋ) ಸೊಪ್ಪನ್ನು ಕಿತ್ತು ತಂದು ಬೇಯಿಸಿ ತಿಂದರು. ತಿಂದವರಿಗೆಲ್ಲಾ ವಾಂತಿ ಬೇಧಿ ಆಯಿತು. ಸುಸ್ತಾದರು. ನಾಲ್ಕೂ ಜನರನ್ನು ಆಸ್ಪತ್ರೆಗೆ ಸೇರಿಸಲಾಯಿತಾದರೂ ಹಸಿವಿನಿಂದ ಮೊದಲೇ ನಿತ್ರಾಣಳಾಗಿದ್ದ ಸುಜಾತಳ ಪ್ರಾಣ ಪಕ್ಷಿ ಹಾರಿ ಹೋಯಿತು.

ಇದನ್ನು ತಪ್ಪಿಸಬಹುದಿತ್ತು

ಮೈಸೂರಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯಂಥದ್ದೊಂದು ಯೋಜನೆ ಜಾರಿಯಾಗಿ ಮನೆಯಲ್ಲಿ ನಾಲ್ಕು ಕಾಳು ಕಡಿಯಂಥದ್ದೇನಾದರೂ ಇದ್ದಿದ್ದರೆ ಇಂತಹ ಪ್ರಸಂಗ ತಪ್ಪುತ್ತಿತ್ತಲ್ಲವೇ?
ಅಂತ್ಯೋದಯದಂತಹ ಒಂದು ರೇಷನ್ ಕಾರ್ಡು ಕೊಟ್ಟು ಅದರಲ್ಲಿ ಅರ್ಹರಿಗೆ ಅಗತ್ಯಕ್ಕೆ ತಕ್ಕಂತೆ ರೇಷನ್ ಕೊಟ್ಟಿದ್ದರೆ ಇಂತಹ ದುರಂತ ತಪ್ಪಿಸಬಹುದಿತ್ತಲ್ಲವೇ?

ಹೌದು ತಪ್ಪಿಸಬಹುದಿತ್ತು. ಆದರೆ ಯಕಶ್ಚಿತ್ ಗಿರಿಜನ ಹಾಡಿಯ ಹೆಣ್ಣು ಜೀವವೊಂದಕ್ಕೆ ಎಷ್ಟು ಬೆಲೆ? ದೇಶಾದ್ಯಂತ ಕಾಳಯ್ಯನಂತಹ ಗಿರಿಜನ ಕುಟುಂಬಗಳು ದಲಿತ, ಬಡ ಕುಟುಂಬಗಳು ಎಷ್ಟೋ ಲಕ್ಷಗಳ ಸಂಖ್ಯೆಯಲ್ಲಿ ಕಾತರಿಸುತ್ತಾ ಕಾದಿದ್ದರೂ ಅದು ಅವರಿಗೆ ಲೆಕ್ಕಕ್ಕಿಲ್ಲ. ಆದರೆ ಚುನಾವಣಾ ಕಾಲ ಸೇರಿದಂತೆ ಸದಾ ಕಾಲ ತಮ್ಮನ್ನು ಕಾಯುವ ದೊಡ್ಡ ಜನಗಳು, ವಿದೇಶಿ ಕಂಪನಿಗಳು ಏನಾದರೂ ಪಿಸುಗುಟ್ಟಿದರೂ, ಗೊಣಗಿದರೂ ಅದನ್ನು ಪ್ರಸಾದವೆಂದೂ ಪರಿಗಣಿಸಿ ಅವರು ಕಾಲಲ್ಲಿ ತೋರಿದ್ದನ್ನೂ ತಲೆಯ ಮೇಲೆ ಹೊತ್ತು ಜಾರಿ ಮಾಡಲು ತುಡಿಯುತ್ತಿರುತ್ತಾರೆ. ಅದಕ್ಕೆ ಸಾಕ್ಷಿ ಬೇಕಾದರೆ ನೋಡಿ ಇಲ್ಲೆ ಇದೆ.

ಇನ್ನೆಷ್ಟು ಹಸಿವಿನ ಸಾವುಗಳು ಸಂಭವಿಸಬೇಕು?

ಇಗೋ ಹಸಿವಿನ ಸಾವೆಂಬೋ ಕೂಗು ಮಾರಿ ಜೋರಾಗಿ ಕೂಗುತ್ತಿದ್ದಾಳೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಪಡಿತರ ವ್ಯವಸ್ಥೆಗಾಗಿ ನೀಡುತ್ತಿದ್ದ ಗೋಧಿಯಲ್ಲಿ ಶೇ.80 ರಷ್ಟು ಗೋಧಿ ಕಡಿತ ಮಾಡಿದೆ. ಅಕ್ಕಿಯಲ್ಲಿ ಕಡಿತವಾಗುವ ಎಲ್ಲ ಸಾಧ್ಯತೆಗಳೂ ಇವೆ. ಏಕೆಂದರೆ ಸುಗ್ಗಿಯ ಸಮಯದಲ್ಲಿ ಬೆಲೆ ಕುಸಿತದಿಂದ ರೈತರನ್ನು ಪಾರು ಮಾಡಲು ಬೆಂಬಲ ಬೆಲೆ ನೀಡಿ ರೈತರಿಂದ ಆಹಾರ ಧಾನ್ಯ ಖರೀದಿಸುವುದು ಮತ್ತು ಆ ಆಹಾರ ಧಾನ್ಯವನ್ನು ಸಾರ್ವಜನಿಕರಿಗೆ ಪಡಿತರ ವ್ಯವಸ್ಥೆಯ ಮಾಲಕ ಹಂಚಿ ದೇಶದ ಜನಕ್ಕೆ ಸ್ವಲ್ಪವಾದರೂ ಆಹಾರ ಭದ್ರತೆ ಒದಗಿಸುವುದು - ಇಲ್ಲಿಯವರೆಗೆ ಸ್ವಲ್ಪವಾದರೂ ಈ ಕೆಲಸವನ್ನು ಸರ್ಕಾರ ಮಾಡುತ್ತಿತ್ತು. ಈಗ ಸರ್ಕಾರ ಆ ಜವಾಬ್ದಾರಿಯನ್ನು ಬಹುತೇಕ ದೊಡ್ಡ ಕಂಪನಿಗಳೂ, ಬಹುರಾಷ್ಟ್ರೀಯ ಕಂಪನಿಗಳಿಗೆ ಬಿಟ್ಟು ತಾನು ಕೈತೊಳೆದುಕೊಂಡಿದೆ. ಹೀಗಾಗಿ ರಾಜ್ಯಕ್ಕೆ 2006-07 ರಲ್ಲಿ 1.39 ಲಕ್ಷ ಟನ್ ಗೋಧಿ ನೀಡಿದ್ದ ಕೇಂದ್ರ ಸರ್ಕಾರ ಈ ವರ್ಷದಲ್ಲಿ 27 ಸಾವಿರ ಟನ್ ಮಾತ್ರ ನೀಡಲಿದೆ. ಬಡತನ ರೇಖೆಗಿಂತ ಮೇಲಿನ ಎ.ಪಿ.ಎಲ್.ವರೆಗೆ ಮಾತ್ರ ಕಡಿತ ಎಂದು ಸರ್ಕಾರ ಹೇಳುತ್ತದೆ. ಇಂತಹ ಕಡಿತದ ಭಾರ ಕೇವಲ ಎಪಿಎಲ್ ನವರಿಗೆ ಮಾತ್ರ ಬೀಳುವುದಿಲ್ಲ. ಬಡವರ ಮೇಲೂ ಬೀಳುತ್ತದೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ.

ಕಳೆದ ವರ್ಷ ಕೇಂದ್ರ ಸರ್ಕಾರ 2006-07 ರಲ್ಲಿ 207 ಲಕ್ಷ ಟನ್ ಅಕ್ಕಿಯನ್ನು ಸುಗ್ಗಿಯ ಸಮಯದಲ್ಲಿ ರೈತರಿಗೆ ಬೆಂಬಲ ಬೆಲೆ ನೀಡಿ ಖರೀದಿಸಿದ್ದರೆ, ಈ ವರ್ಷ. ಅದು ಈಗಾಗಲೇ 206 ಲಕ್ಷ ಟನ್‌ಗೆ ಕುಸಿದಿದೆ. ಉಳಿದಂತೆ ಬಹುರಾಷ್ಟ್ರೀಯ ಕಂಪನಿಗಳಿಗೆ ಈ ಅವಕಾಶ ಬಾಚಿಕೊಳ್ಳಲು ಅವಕಾಶ ನೀಡಿದೆ. ಅಂದರೆ ಅಕ್ಕಿ ವಿಚಾರದಲ್ಲಿ ರಾಜ್ಯದ ದೇಶದ ಜನಕ್ಕೆ ಆಘಾತಗಳು ಕಾದಿದೆ ಎನ್ನುವುದು ಖಚಿತವಾಗಿದೆ.

ನಮ್ಮ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 6 ರಿಂದ 35 ವಯಸ್ಸಿನ ಶೇ.82.7 ಮಕ್ಕಳು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. 3 ವರ್ಷ ದಾಟದ ರಾಜ್ಯದ ಮಕ್ಕಳಲ್ಲಿ ಶೇ.41.1 ರಷ್ಟು ಮಕ್ಕಳು ತಮ್ಮ ವಯಸ್ಸಿಗೆ ಇರಬೇಕಾದ ತೂಕಕ್ಕಿಂತ ಕಡಿಮೆ ತೂಕ ಹೊಂದಿದ್ದಾರೆ. ರಾಜ್ಯದಲ್ಲಿ ಇನ್ನೂ 12.7 ಲಕ್ಷ ಕುಟುಂಬಗಳು ಬಿಪಿಎಲ್ ಕಾರ್ಡಿಗೆ ಅರ್ಜಿ ಹಾಕಿಕೊಂಡು ಕಾದಿವೆ. ಸರ್ಕಾರಗಳಿಗೆ ಅವನ್ನು ಕೊಡಲು ಮನಸ್ಸಿಲ್ಲ. ಶ್ರೀಮಂತರು, ಅನುಕೂಲಸ್ಥರು ಬಿಪಿಎಲ್ ಕಾರ್ಡು ಮಾಡಿಸಿಕೊಂಡಿ ರುವುದನ್ನು ಪತ್ತೆ ಹಚ್ಚಲೂ ಮನಸ್ಸಿಲ್ಲ.

ರಾಜ್ಯದಲ್ಲಿ ಸುಜಾತಳಂತಹ ಇನ್ನೆಷ್ಟು ಜನರನ್ನು ಹಸಿವೆಂಬ ಹದ್ದು ಹೊತ್ತುಕೊಂಡು ಹೋಗಬೇಕಿದೆಯೇ ಏನೋ?

ಗೋ ರಕ್ಷಣೆ

ಕೂಳಿರದ ಸೂರಿರದ ನೀರಿಲ್ಲದವರು ನಮ್ಮಲ್ಲಿ
ಇಹರಿಂದು ಅಸಂಖ್ಯ ಜನರು
ಇಂತಿರಲು ಗೋವುಗಳ ರಕ್ಷಣೆಗೆ ಕೇಳು
ಮಾಡುವರು ಕೋಟಿ ಕೋಟಿ ಹಣವನ್ನು ಪೋಲು

- ವಿಡಂಬಾರಿ

ಜನಶಕ್ತಿ ಕನ್ನಡ ವಾರಪತ್ರಿಕೆ

ಜುಲೈ 22, 20..



ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ



ಹನುಮಂತಪ್ಪ ಮತ್ತು ಮನೆಯವರ ಮೆದುಳೊಳಗಿನ ರಾಕ್ಷಸ ಈಚೆ ಬಂದ, ಕಡುಕತ್ತಲೆಯ ರಾತ್ರಿ. ಬೆಳಕಿಗಾಗಿ ಪಂಜು ಹೊತ್ತಿಸಿದರು. ಅದರ ನೆರಳಲ್ಲಿ ಸಂಗವ್ವನ ಬಟ್ಟೆ ಬಿಚ್ಚಿದರು. ಮೊಂಡು ಚಾಕುವಿನಿಂದ ಕರಕರನೇ ತಲೆಗೂದಲು ಬೋಳಿಸಿದರು. ಅಲ್ಲೇ ಇರುವ ಬೀಸಾಕಲ್ಲಿನ ಗೂಟದಿಂದ ಜಡಿದು ಬಾಯೊಳಗಿನ ಮೇಲ್ ಮುಂದಿನ ನಾಲ್ಕು ಹಲ್ಲುಗಳನ್ನು ದಳದಳನೆ ಕೆಡವಿದರು.....

‘ಅಜ್ಞಾನದ ನೇಣು ಹರಿದು...?

‘ಅಂತರಂಗ ಬಹಿರಂಗವೆರಡರಲ್ಲೂ ಸಮಗ್ರ ಬದಲಾವಣೆಗೆ ಬೇಕಾದ ಅರಿವಿನ ಕಾರಂಜಿ ಚಿಮ್ಮಿದಾಗಲೇ ಪರಿಪೂರ್ಣ ಚಳುವಳಿ ರೂಪುಗೊಳ್ಳುವುದು’.

ಹೌದು ನಿತ್ಯ ಬದಲಾಗುವ ಈ ಸಮಾಜವನ್ನು ಹಿಮ್ಮುಖವಾಗಿಸುವ ಅಥವಾ ತನ್ನಿಚ್ಛೆಯಂತೆ ಹೊರಳಿಸುವ ಪ್ರಯತ್ನದಲ್ಲಿ ಆಳುವ ವರ್ಗ ಯಾವತ್ತೂ ತೊಡಗಿರುತ್ತದೆ. ಆದ್ದರಿಂದಲೇ ಜನತೆಯನ್ನು ಅವೈಜ್ಞಾನಿಕತೆ, ಅನಕ್ಷರತೆ, ಬಡತನದ ಕೂಪಕ್ಕೆ ತಳ್ಳುತ್ತದೆ. ಜನ ಚಳುವಳಿಯನ್ನು ಕಟ್ಟುವಾಗ ಆರ್ಥಿಕ ಹೋರಾಟದೊಂದಿಗೆನೇ ಸಮಗ್ರ ಆಯಾಮದ ಚಳುವಳಿಗಳನ್ನು ಕಟ್ಟುವ ಜರೂರಿ ಇರುತ್ತದೆ. ಯಾವೊಂದು ವಿಭಾಗದ ಆಂದೋಲನ ನಿರ್ಲಕ್ಷಿಸಿದರೂ, ಆ ಕೊರತೆ ಮುಂದೊಮ್ಮೆ ಸ್ಪಷ್ಟ ಫಲಿತಾಂಶಕ್ಕೆ ಅಡ್ಡಿಯಾಗುತ್ತದೆ.

ಸಂಜೆ ಸೂರ್ಯ ನಿರ್ಗಮಿಸುವ ಹೊತ್ತಲ್ಲಿ ಗೆಳತಿಯೊಂದಿಗೆ ಚರ್ಚಿಸುತ್ತಿದ್ದೆ. ಈ ಮೇಲಿನ ಮಾತು ಪ್ರತಿ ಹೆಜ್ಜೆಗೂ ಬೆನ್ನಟ್ಟುತ್ತದೆ. ಪಾಳೇಗಾರಿ ಮೌಲ್ಯಗಳ ಕಡಾಯಿಯಲ್ಲಿ ಮತ್ತೆ ಮತ್ತೆ ಎದ್ದು ಬರುವ ಘಟನೆಗಳಂತೂ ಮೇಲಿನ ಮಾತನ್ನು ಜಾರಿಗೊಳಿಸಬೇಕಾದ ಜರೂರಿಗೆ ತಂದು ನಿಲ್ಲಿಸುತ್ತವೆ. ಅದರಲ್ಲಿಯೂ ಅವೈಜ್ಞಾನಿಕತೆ ಮೌಢ್ಯ, ಕಂದಾಚಾರಗಳು ಎಷ್ಟೋ ಬಾರಿ ತೀವ್ರ ಅಡ್ಡಿಗಳೇ ಆಗಿ ಬಿಟ್ಟಿವೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿಗಳು ಭಾನಾಮತಿ ವಿರುದ್ಧ ಆಂದೋಲನ ಜಾಥಾ ಸಾರಿದ ಈ ಸಂದರ್ಭದಲ್ಲಿ ಸೋನಕೇರಾ, ಹೊನ್ನಕಿರಣಗಿ, ಹಳ್ಳಿಖೇಡ (ಬಿ), ಪ್ರಕರಣಗಳು ಥಟ್ಟಂತ ಅವತರಿಸಿ ಎದೆಯೊಳಗೆ ತಲ್ಲಣ ಹುಟ್ಟಿಸುತ್ತವೆ. ಸಮತೆಯ ಕಟ್ಟಡಕ್ಕೆ ವೈಜ್ಞಾನಿಕ ತಿಳುವಳಿಕೆಯ ಅಡಿಪಾಯ ಬೇಕೇ ಬೇಕು. ಅಂದು ಹುಮನಾಬಾದಿನಲ್ಲಿ ಜನವಾದಿ ಗೆಳತಿಯರು ಬಲು ಸಂಭ್ರಮದಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮ ರೂಪಿಸಿದ್ದರು. ಗೆಳತಿಯರ ಉತ್ಸಾಹದ ಮಾತುಗಳಿಗೆ ಮನಸ್ಸು ಉಬ್ಬಿ ಹೋಗಿತ್ತು. ಅಷ್ಟರಲ್ಲಿ ಸಂಗಾತಿ ಸಿದ್ದಪ್ಪ ಬೋಳು ತಲೆಯ, ಹರಕು ಸೀರೆ, ಹುಚ್ಚಿಯಂಥ ಮುಖಭಾವದ ಹೆಂಗಸೊಬ್ಬಳನ್ನು ವೇದಿಕೆಗೆ ಕರೆ ತಂದರು. ಯಾರೀಕೆ? ಪ್ರಶ್ನಿಸಿದೆ ಆ ಹೆಂಗಸು ರಕ್ತವಿಲ್ಲದ ಪೇಲವ ತುಟಿಯಗಲಿಸಿ ಮುಂದಿನ ನಾಲ್ಕು ಹಲ್ಲಿಲ್ಲದ ಬೊಚ್ಚು ಬಾಯಿಂದ ಕಲ್ಲು ಕರಗುವಂಥ ಕತೆಯ ಪುಟಗಳನ್ನು ಬಿಚ್ಚಿದಳು.

ಹಣಿಯಲು ಭಾನಾಮತಿ ಮೊರೆ

ಈಚೆ ಸಂಗವ್ವನ ಮನೆ, ಆಚೆ ಹನುಮಂತಪ್ಪನ ಮನೆ. ನಡುವಿಗೆ ಮಣ್ಣಿನ ಗೋಡೆಯೊಂದೆ. ದೇವಿ ಗುಡಿಯ ಪೂಜಾರಿಕೆ ಲಾಭ ತರುವ ದಂಧೆ. ಅದರಲ್ಲಿ ಹುಟ್ಟಿಕೊಂಡ ಜಗಳ ದ್ವೇಷಕ್ಕೆ ಹೊರಳಿ ಪರಸ್ಪರ ಹಣಿಯಲು ‘ಭಾನಾಮತಿ’ ಯ ಮೊರೆ ಹೋಗಿದ್ದಾರೆ. ಈ ಸಂಗವ್ವ ತನ್ನ ಮಗಳಿಗೆ ಆರೋಗ್ಯ ಕೆಡುತ್ತಿದೆ. ಕಾರಣವೇನೆಂದು ಮಾಟ ಮಂತ್ರಗಾತಿಯರ ಹತ್ತಿರ ಕೇಳಿದ್ದಾಳೆ. ನೆರೆಮನೆಯವರು ಮಾಟ ಮಾಡಿಸಿದ್ದಾರೆ. ಬಿಡಿಸಲು ಸಾವಿರ ಖರ್ಚಾಗುತ್ತದೆ ಎಂದಿದ್ದಾಳೆ. ಸಾವಿರದ ಮೇಲೆ ಐನೂರು ಕೊಟ್ಟು ಬಿಡಿಸುವುದಷ್ಟೆ ಅಲ್ಲ. ವಾಪಸ್ ಹನುಮಂತಪ್ಪನ ಮನೆ ಜನಕ್ಕೆ ಮಾಟ ಮಾಡಿಸಬೇಕೆಂದು ಸಂಗವ್ವ ಹೇಳಿದ್ದಾಳೆ. ಆ ಮಾಟಗಾತಿ ಬಟ್ಟೆಯ ಗೊಂಬಿ ಮಾಡಿ, ನಿಂಬೆಹಣ್ಣು ಮಂತ್ರಿಸಿ ತಗೊಂಡು ಹೋಗಿ ಗೋಡೆಯ ಮಾಡದಲ್ಲಿ, ಮನೆಯ ಅಂಗಳದಲ್ಲಿ ಹೂಳಿಡಲು ಹೇಳಿದ್ದಾಳೆ. ಸಂಗವ್ವ ಹಾಗೇ ಮಾಡಿದ್ದಾಳೆ. ಅದೇ ಸಮಯಕ್ಕೆ ಆಚಾನಕ್ಕಾಗಿ ಹನುಮಂತಪ್ಪನ ತಮ್ಮನ ಹೆಂಡತಿಗೆ ಜ್ವರ ಬಂದು, ಆರೋಗ್ಯ ಕೆಟ್ಟಿದೆ. ಸಂಗವ್ವ ಖುಷಿಯಿಂದ ಅಬ್ಬರದಲ್ಲಿ ಪೂಜೆ ಮಾಡಿಸಿದ್ದಾಳೆ. ಅನುಮಾನ ಬಂದ ಹನುಮಂತಪ್ಪ ಸಂಗವ್ವನ ಮನೆಗೆ ನುಗ್ಗಿ ನೆಲ ಕೆದರಿ ನೋಡಿದರೆ ಮಾಟದ ಸಾಮಾನುಗಳೂ ದೊರೆತು ಸಂಗವ್ವ ರೆಡ್ ಹ್ಯಾಂಡ್ ಸಿಕ್ಕಿಬಿದ್ದಿದ್ದಾಳೆ. ಊರ ಜನಕ್ಕೆಲ್ಲ ಕರೆದು ಪಂಚಾಯ್ತಿ ಮಾಡಿದ ಹನುಮಂತಪ್ಪ ಭಾನಾಮತಿ (ಬಹಾನಾಮತಿ) ವಾಪಸ್ ತಿರುಗಿಸದಿದ್ದರೆ ಶಿಕ್ಷಿಸುವುದಾಗಿ ಹೇಳಿದ್ದಾನೆ. ತಮ್ಮನ ಹೆಂಡತಿಗೆ ಆರೋಗ್ಯ ಸರಿಯಾಗಲಿಲ್ಲ. ಅಂದ್ರೆ ವಾಪಸ್ ತಿರುಗಿಸಿಲ್ಲ ಎಂದೇ ಅರ್ಥ. ಸರಿ ಹನುಮಂತಪ್ಪ ಮತ್ತೆ ರಾತ್ರಿ ಬಂದ. ಸೋದರರೊಂದಿಗೆ, ಊರ ಜನರೊಂದಿಗೆ, ಭಾನಾಮತಿ ಮಾಡಿಸುವವರಿಗೆ ಶಿಕ್ಷೆ ಏನು? ಬಾಯಿಯೊಳಗಿನ ಹಲ್ಲು ಕೆಡುವುವುದು. ಆಮೇಲೆ...

ಆ ಮೇಲೆ ಹನುಮಂತಪ್ಪ ಮತ್ತು ಮನೆಯವರ ಮೆದುಳೊಳಗಿನ ರಾಕ್ಷಸ ಈಚೆ ಬಂದ, ಕಡುಕತ್ತಲೆಯ ರಾತ್ರಿ. ಬೆಳಕಿಗಾಗಿ ಪಂಜು ಹೊತ್ತಿಸಿದರು. ಅದರ ನೆರಳಲ್ಲಿ ಸಂಗವ್ವನ ಬಟ್ಟೆ ಬಿಚ್ಚಿದರು. ಮೊಂಡು ಚಾಕುವಿನಿಂದ ಕರಕರನೇ ತಲೆಗೂದಲು ಬೋಳಿಸಿದರು. ಅಲ್ಲೇ ಇರುವ ಬೀಸಾಕಲ್ಲಿನ ಗೂಟದಿಂದ ಜಡಿದು ಬಾಯೊಳಗಿನ ಮೇಲ್ ಮುಂದಿನ ನಾಲ್ಕು ಹಲ್ಲುಗಳನ್ನು ದಳದಳನೆ ಕೆಡವಿದರು. ಗುಂಪಿನ ಸಿಟ್ಟು ಶಮನವಾಗುವ ಬದಲಿಗೆ ಆಕ್ರೋಶ ಕ್ರೌರ್ಯದ ಅತಿರೇಕಕ್ಕೆ ಏರುತ್ತಲೇ ಇತ್ತು. ಅಲ್ಲೇ ಇರುವ ಹೆಂಗಸೊಬ್ಬಳು ಸುಮ್ಮನಿರಲಿಲ್ಲ. “ಏಯ್, ಗಂಡಸೂರೇ ಬಾಜಿಗೆ ಹೋಗ್ರೀ. ಈ ಹೆಂಗ್ಸಿಗಿ ಪಾಠ ಕಲಿಸ್ತೀನಿ...” ಅಂದು ದರ ದರ ಒಳಗೆ ಎಳೆದೊಯ್ದು ಸೀರೆ ಎತ್ತಿ ಬಾಯಲ್ಲಿ ಮೂತ್ರ ಹೋಯ್ದು ಹರಕು ಮುರಕು ಚಪ್ಪಲಿಗಳ ಹಾರ ಮಾಡಿ ಸಂಗವ್ವನ ಕೊರಳಿಗೆ ಹಾಕಿ ರಸ್ತೆಗೆ ಎಳೆ ತಂದಳು. ಹಳ್ಳಿಯ ಜನ ಎಲ್ಲವನ್ನೂ ಸುಮ್ಮನೇ ವೀಕ್ಷಿಸುತ್ತಿದ್ದರು. ಅಷ್ಟೇ ಅಲ್ಲ ಬೀದಿ ತುಂಬ ನಡೆದ ಮೆರವಣಿಗೆಗೆ ಸ್ಪಷ್ಟ ಸಾಕ್ಷಿಗಳಾದರು. ಆದರೂ ಬಾಯಿ ಬಿಡಲಿಲ್ಲ. ದಲಿತ ಯುವಕ ವಕೀಲನೊಬ್ಬ ಈ ಕರ್ಮಕಾಂಡ ನೋಡಲಾಗದೆ “ಹೆಣ್ಣ ಹೆಂಗ್ಸಿಗಿ ಈ ಪರಿ ಅವಮಾನ ಮಾಡಲತೀರೆಲ್ಲಿ ನೀವೇನ್ ಮನಸೇರಾ? ನಾಚಿಕಾಗಲ್ಲ....? ಬಿಡ್ರಿ ಅಕಿನ್ನ. ಇಲ್ಲಂದ್ರ ಪೋಲಿಸ್ನಾಗ ಊರ ಮಂದಿ ಹೆಸರ ಬರ್ಸಬೇಕಾಗ್ತದ....’ ಅಂತ ಬಯ್ಯುತ ನಗ್ನ ಮೆರವಣಿಗೆಗೆ ಅಡ್ಡ ತರುಬಿ ನಿಂತನು. ಕಾನೂನು ಬಲ್ಲ ಹುಡುಗ. ಅದರಲ್ಲೂ ಅಟ್ರಾಸಿಟಿ ಕೇಸಾದ್ರೆ ಗತಿ ಏನು ಅಂತ ಹೆದರಿ ಊರ ಜನ ಚದುರಿ ಹೋದರು. ಹಣಮಂತಪ್ಪ ಮತ್ತು ಮನೆಯವರು ಸಂಗವ್ವನನ್ನು ಅವಾಚ್ಯವಾಗಿ ಶಪಿಸುತ್ತಾ ಮನೆಯ ಹಾದಿ ಹಿಡಿದರು. ಯುವಕನು ಸಮೀಪದ ಪೋಲೀಸ್ ಠಾಣೆಗೆ ತೆರಳಿ ಕೇಸು ದಾಖಲಿಸಿದ.

ಪೊಲೀಸರೂ ಹೆದರುತ್ತಾರೆ

ಪೋಲೀಸರೂ ಭಾನಾಮತಿ ಕೇಸೆಂದರೇ ಹೆದರುತ್ತಾರೆ. ಎಲ್ಲಿ ತಮಗೂ ಮಾಟ ಮಾಡಿಸಿದರೇ? ಎಂದು. ತಲೆ ಬೋಳಿಸಿ ಮೂತ್ರ ಹೋಯ್ದು ಅಮಾನವೀಯ ಕ್ರೌರ್ಯವೆಸಗಿದವರಿಗೆ ಶಿಕ್ಷಿಸಿ ಎಂದೆ ಭಾನಾಮತಿ ಮಾಡಿಸಿದವಳಿಗೇನು ಶಿಕ್ಷೆ? ಎಂಬುದು ಊರವರ ಪ್ರಶ್ನೆ. ಜನವಾದಿ ಮತ್ತು ಬಿ.ಜಿ.ವಿ.ಎಸ್. ನಿಯೋಗ ಹಳ್ಳಿಗೆ ಭೇಟಿ ಯಿತ್ತಿತು. “ಏನವ್ವ ಮೂತ್ರ ಹೋಯ್ದಾಕಿ ನೀನೇ ಏನು? ನೀನೂ ಒಬ್ಬ ಹೆಂಗ್ಸಾಗಿ ಹಿಂಗ ಮಾಡಾದಾ”? ಅಂದ್ರೆ ಆ ಹೆಂಗಸು “ನಾನೇರಿ ಹಾಂಗ್ ಮಾಡ್ದಾಕಿ. ಗೊಂಬಿ -ಹೂಳಿ ಮಾಟಾ ಮಾಡ್ಸಿ ನಮ್ಮ ಮನಿ ಬರ್‌ಬಾದ್ ಮಾಡಿದ್ದಾಕಿಗಿ ಮತ್ತ ಹ್ಯಾಂಗ ಮಾಡಬೇಕು”? ಅಂತ ಜೋರಾಗಿ ಒದರಾಡಿದಳು. “ಅಲ್ಲಪ್ಪ ಯಜಮಾನ, ನಿನ್ ಹೆಣ್ತಿಗಿ ಬತ್ತಲೆ ಮಾಡಿ ಈಟೆಲ್ಲ ಮಾನಗೇಡಿ ಮಾಡಾತನ ನೀನೆಲ್ಲಿ ಹೋಗಿದ್ದಿ...?” ಎಂದು ಸಂಗವ್ವನ ಗಂಡನಿಗೆ ಕೇಳಿದರೆ “ಸಾಕ್ಷಾತ್ ದೇವಿನೇ ಹಿಂಗ್ ಮಾಡ್ಸಿ ನನ್ನ ಹೆಣ್ತಿ ಮೈಯಾಗ ಹೊಕ್ಕೊಂಡಿದ್ದಕ್ಕ ಅಟೆಲ್ಲ ಸಹಿಸಾ ಶಕ್ತಿ ಬಂದಿತ್ತರೀ. ಮೆರವಣಿಗ್ಯಾಗ ನಾನೂ ಉಧೋ ಉಧೋ ಅಂತ ಬೆನ್ನ ಹತ್ತಿದ್ದೆನ್ರಿ...” ಅನ್ನಬೇಕಾ!! “ಭಲೇ ಗಂಡಸೇ...!” ಯಾರಿಗೆ ಬಯ್ಯುವುದು? ಯಾರಿಗೆ ಶಿಕ್ಷಿಸುವುದು? ಅಪಮಾನ ಮಾಡಿದವರೂ ಮಾಡಿಕೊಂಡವರೂ ಬಡವರೇ. ಅವರೊಳಗಿನ ಅಜ್ಞಾನ, ಮೌಢ್ಯ ಗಾಬರಿ ಹುಟ್ಟಿಸುವಂತಿತ್ತು. ಕ್ರೌರ್ಯದ ಘಟನೆಗಳು ಮರುಕಳಿಸಬಾರದೆಂದು ಹಣಮಂತಪ್ಪ ಮತ್ತಿತರರ ಮೇಲೆ ಕೇಸು ಮಾಡಲಾಯಿತು. ಭಾನಾಮತಿ ಬಿಡಿಸುತ್ತೇವೆಂದು ಅಡ್ಡ ಮಾರ್ಗಕ್ಕೆಳೆದು ದಂಧೆ ಮಾಡಿಕೊಡವರನ್ನು ವಿಳಾಸ ಹುಡುಕಿ ಸ್ಟೇಷನ್ನಿಗೆ ತಂದು ಧಮಕಿ ಹಾಕಲಾಯಿತು. ಪಂಚಾಯ್ತಿ ಮುಖಂಡರು, ಪೋಲೀಸರ ಅಧಿಕಾರಿಗಳು, ಅಂಗನವಾಡಿ ಸ್ತ್ರೀ ಶಕ್ತಿ ಅಕ್ಕಂದಿರರು ಹೀಗೆ ಹತ್ತೂರವರನ್ನು ಸೇರಿಸಿ ‘ಭಾನಾಮತಿ ಒಂದು ವಿದ್ಯೆ, ಕೈ ಚಳಕ. ನಿಗೂಢ ಮಾಯಾ ಶಕ್ತಿ ಏನಲ್ಲ. ಹೆದರಬೇಡಿ...’ ಎಂದು ಬಿಜಿವಿಎಸ್ ನೊಂದಿಗೆ ಜನವಾದಿ ಪವಾಡ ರಹಸ್ಯ ಬಯಲು ಕಾರ್ಯಕ್ರಮ ನಡೆಸಿತು. ನೆರೆದ ಜನಸ್ತೋಮ ಹೌದ್ಹೌದೆಂದು ತಲೆ ತೂಗುತ್ತಿತ್ತು. “ನಮ್ಮೂರಿಗೆ ಬರ್ರಿ....” ಅಂತ ದುಂಬಾಲು ಬೀಳತೊಡಗಿದರು.

ವಿಜ್ಞಾನ ಬಾವುಟ

ಎಷ್ಟೂರಿಗೆ ಹೋಗುವುದು? ಆದರೆ ಜ್ಞಾನ ವಿಜ್ಞಾನ ಬೆಳಕ ಬಾವುಟ ಹಿಡಿದು ಎಲ್ಲೆಡೆ ಹೋಗಲೇಬೇಕಲ್ಲ. ಚಿಂಚೋಳಿ ಯಲ್ಲಮ್ಮ ಬಹಿರಂಗ ಸಭೆ ನಡೆಯುವಾಗಲೇ ಒಬ್ಬ ಹೆಂಗಸು ಮೈಯಲ್ಲಿ ದೇವರು ಬಂದು “ಹಾಹ್ಹಾ....” ಚೀರ ತೊಡಗಿದ್ದಳು. “ಆ ದೇವರಿಗೆ ನಾಳೆ ಬರಲು ಹೇಳ್ರಿ...’ ಅಂದು ಸಂಗಾತಿಯೊಬ್ಬರನ್ನು ಕರೆದು ಸಭೆಯಾಚೆಗೆ ಕರೆದೊಯ್ಯಲು ಹೇಳಿದ್ದೆ. ಸಂಘದ ಮುಖಂಡೆಯೊಬ್ಬಳು ದಸರಾದಲ್ಲಿ ತುಳಜಾಪುರಕ್ಕೆ ಭವಾನಿ ದರ್ಶನಕ್ಕೆಂದು ಬರಿಗಾಲು ಪಾದಯಾತ್ರೆ ಹೋಗಿ ಸಂಘದ ಸಮ್ಮೇಳನವೇ ನಿಲ್ಲುವಂತಾಗಿತ್ತು.

ಹೌದು, ಆದ್ದರಿಂದಲೇ **ಎಲ್ಲ ನಮೂನೆಯ ತಾರತಮ್ಯದ ವಿರುದ್ಧ, ಪಾಳೇಗಾರಿ ಮೌಲ್ಯಗಳ ವಿರುದ್ಧ ನಿರಂತರ ಚಳುವಳಿ ಬೇಕಿದೆ. ಅಜ್ಞಾನದ ತೊಟ್ಟಿಲು ಮುರಿದು ದೌರ್ಜನ್ಯದ ನೇಣು ಹರಿದು ಜ್ಞಾನವೆಂಬ ಶಿಶುವ ಉಳಿಸಬೇಕಿದೆ.**

ದುಡಿಮೆಯೂ ಇಲ್ಲ, ದಯೆಯೂ ಇಲ್ಲ

ಬೇಸಿಗೆಯಲ್ಲೂ ಭತ್ತ ಬೆಳೆಯುವ ಜಿಲ್ಲೆ ಮಂಡ್ಯ, ಜೂನ್‌ನಿಂದ ಜುಲೈ ಕೊನೆಯವರೆಗೆ ಭತ್ತ ಒಕ್ಕಣೆಯ ಕಾಲ. ಕೇವಲ 10 ವರ್ಷಗಳ ಹಿಂದೆ ಈ ಕಾಲ ಬಂತೆಂದರೆ ರಾಶಿ, ರಾಶಿ ಭತ್ತದ ಬಣವೆಗಳು, ಬಣವೆಗಳ ಮಧ್ಯೆ ವಿಶಾಲವಾದ ಕಣ. ಕಣದ ತುಂಬೆಲ್ಲಾ ಕೂಲಿಗಳು.

ಭತ್ತದ ಒಕ್ಕಣೆಯ ಸಮಯ ಬಂತೆಂದರೆ ದಲಿತ ಹೆಂಗಸರ ಮುಖಗಳು ಮೊರದಗಲ ಅರಳುತ್ತಿದ್ದವು. ಸಾಮಾನ್ಯವಾಗಿ ಭತ್ತವಕ್ಕುವ ಕೆಲಸದಲ್ಲಿ ಚಾಣಾಕ್ಷತನ ಮೆರೆಯುವವರು ದಲಿತರು. ಶತಮಾನಗಳಿಂದ ಕೇವಲ ಒಕ್ಕುವ ಕೆಲಸವನ್ನಷ್ಟೇ ಮಾಡಿದವರು ಚಾಣಾಕ್ಷರಾಗದೆ ಮತ್ತೇನು? ಒಬ್ಬ ಹೆಣ್ಣಾಳು ಒಂದು ದಿನ ಧಾನ್ಯದ ಕಣದಲ್ಲಿ ಕೆಲಸಕ್ಕೆ ಹೋದರೆ ಒಂದೂವರೆ ಮೊರ (ಸುಮಾರು 10-12 ಸೇರು) ಭತ್ತ ಸಿಗುತ್ತಿತ್ತು. ಹೀಗೆ 30-40 ದಿನ ಕೆಲಸ ಸಿಕ್ಕಿದರೆ 3-4 ಕ್ವಿಂಟಾಲ್ ಭತ್ತದಷ್ಟು ದುಡಿಮೆಯನ್ನು ಒಬ್ಬ ಹೆಣ್ಣಾಳು ಗಳಿಸುತ್ತಿದ್ದಳು, ಗಂಡಾಳು ಇದರ ಒಂದೂವರೆ ಪಟ್ಟು. ಗಂಡ-ಹೆಂಡತಿ ಸೇರಿ ದುಡಿದರೆ ಒಂದು ವರ್ಷಕ್ಕಾಗುವಷ್ಟು ಭತ್ತ ಸಂಗ್ರಹ ಮಾಡಿಕೊಳ್ಳುತ್ತಿದ್ದರು. ಈ ಸಮಯದಲ್ಲಿ ಬೇರೆ ಕೆಲಸಕ್ಕೆ ಕರೆದರೆ ನಿರಾಕರಿಸುತ್ತಿದ್ದರು.

ಒಕ್ಕಣೆ ಮುಗಿದು ರಾಶಿ ಕಟ್ಟಿದ ನಂತರ ಭತ್ತವನ್ನು ಪೂಜೆ ಮಾಡಲಾಗುತ್ತಿತ್ತು. ಅದನ್ನು ರಾಶಿ ಪೂಜೆ ಎನ್ನುತ್ತಿದ್ದರು. ರಾಶಿ ಕಟ್ಟುವವರೆಗೆ ಭತ್ತದೊಡನೆ ಬೆರೆತು, ಬೆಂದು ಕಲ್ಲು-ಕಸ ಬೇರ್ಪಡಿಸಿದ ದಲಿತರು ರಾಶಿ ಪೂಜೆಯ ನಂತರ ಭತ್ತವನ್ನು ಮುಟ್ಟುವಂತಿರಲಿಲ್ಲ. ಎಲ್ಲಿಂದ ಉಣ್ಣುವುದು ಆರಂಭವಾಗುತ್ತದೋ ಅಲ್ಲಿಂದ ಅಸ್ಪೃಶ್ಯತೆ ಆರಂಭವಾಗುತ್ತಿತ್ತು! ಒಕ್ಕಣೆ ಮಾಡಿದ ದಲಿತರನ್ನು ಕಣದ ಮೂಲೆಯಲ್ಲಿ ನಿಲ್ಲಿಸಿ ಮೊರದಲ್ಲಿ ಅಳೆದು ಭತ್ತ ನೀಡಲಾಗುತ್ತಿತ್ತು. ಹರಿದ ಬೆವರಿಗೆ ಭತ್ತ ಸಿಕ್ಕಿತಲ್ಲ ಎಂಬ ಸಮಾಧಾನದಲ್ಲಿ ದಲಿತರು ಮನೆ ಸೇರುತ್ತಿದ್ದರು.

ನಮ್ಮೂರು ತಳಗವಾದಿಯಲ್ಲಿ ಇಂತಹ ನೂರಾರು ನಿದರ್ಶನಗಳು ಪ್ರತಿವರ್ಷದ ಮಾಮೂಲಾಗಿತ್ತು. ಆದರೀಗ ದಲಿತರು ನಿಲ್ಲುತ್ತಿದ್ದ ಜಾಗಗಳಲ್ಲಿ ಯಂತ್ರಗಳು ಬಂದು ನಿಂತಿವೆ. ಮೊದಲಿನಂತೆ ಭತ್ತವನ್ನು ಗಾಳಿಗೆ ತೂರುವ, ರಾಶಿ ಹಾಕುವ ಅಗತ್ಯವೇ ಇಲ್ಲ. ಯಂತ್ರದ ಬಾಯಿಂದ ನೇರವಾಗಿ ಭತ್ತವು ಪ್ಲಾಸ್ಟಿಕ್ ಚೀಲದ ಹೊಟ್ಟೆ ಸೇರುತ್ತದೆ. 25 ಆಳುಗಳು ಬೇಕಾಗಿದ್ದ ಕೆಲಸಕ್ಕೆ ಈಗ ಕೇವಲ ಮೂವರು ಸಾಕು. ರೈತನ ಮನೆಯವರೇ ಹೇಗೋ ಕೆಲವು ಗಂಟೆಗಳಲ್ಲಿ ಈ ಕೆಲಸವನ್ನು ನಿಬಾಯಿಸಿ ಬಿಡುತ್ತಾರೆ.

ಒಕ್ಕಣೆ ಮುಗಿಯುವ ಸಮಯಕ್ಕೆ ಈಗಲೂ ಕಣದ ಮೂಲೆಯಲ್ಲಿ ದಲಿತ ಹೆಂಗಸರು ನಿಂತಿರುತ್ತಾರೆ. ಆಗ ದುಡಿದ ಪಾಲನ್ನು ಧೈರ್ಯವಾಗಿ ಕೇಳಲು, ಈಗ ಕೊಟ್ಟಷ್ಟನ್ನು ದಯನೀಯವಾಗಿ ಪಡೆಯಲು ನಿಂತಿರುತ್ತಾರೆ.

ಜಾಗತೀಕರಣದಿಂದಾಗಿ ದಲಿತರು ದುಡಿಯುವ ಜಾಗಗಳಿಂದ ಪಲ್ಲಟಗೊಂಡರೂ ಅಸ್ಪೃಶ್ಯತೆ ಅಲ್ಲೇ ಗೂಟ ಹೊಡೆದಿದೆ. ದುಡಿಮೆಯಿಂದ ದಕ್ಕುತ್ತಿದ್ದ ಕಾಳೂ ದಲಿತರಿಗಿಲ್ಲ. ಯೂನಿಟ್ ಪದ್ಧತಿಯಿಂದಾಗಿ ಸರ್ಕಾರ ನೀಡುತ್ತಿರುವ ಕಾಳೂ ದಲಿತರ ಹೊಟ್ಟೆಗೆ ಸಾಲುತ್ತಿಲ್ಲ. ಅವರ ಬದುಕು ದುಡಿಮೆಯೂ ಇಲ್ಲದ ಹಸಿವೂ ಇಂಗದ ಇಕ್ಕಳದಲ್ಲಿ ಸಿಕ್ಕಿ ನರಳುತ್ತಿದೆ.

■ ಕೃಷ್ಣೇಗೌಡ ಟಿ.ಎಲ್.

ಖಾಸಗಿ ರಂಗದ ಕಂಪನಿಗಳಿಗೆ 'ರಕ್ಷಾ ಉದ್ಯೋಗ ರತ್ನ' (ಆರ್‌ಯುಆರ್) ಎಂಬ ಬಿರುದು ನೀಡಿ, ಇದುವರೆಗೂ ದೇಶದ ಸಾರ್ವಜನಿಕ ಉದ್ದಿಮೆಗಳು ಉತ್ಪಾದಿಸಿ ಪೂರೈಸುತ್ತಿದ್ದಂತಹ ರಕ್ಷಣಾ ಸಾಮಾಗ್ರಿ ಸಾಧನಗಳನ್ನು ಖಾಸಗಿ ಕಂಪನಿಗಳಿಂದ ಕೊಳ್ಳಲು ಪೂರಕವಾದ ಸಂಚು ನಡೆಯುತ್ತಿರುವುದು, ದೇಶದ ಹೆಮ್ಮೆಯ ಸಾರ್ವಜನಿಕ ವಲಯದ ಉದ್ದಿಮೆ (ಪಿಎಸ್‌ಯು)ಗಳ ಅಸ್ತಿತ್ವ ಮತ್ತು ಬೆಳವಣಿಗೆ ಬೆದರಿಕೆ ಒಡ್ಡಿದೆ. ಮಾತ್ರವಲ್ಲ, ದೇಶದ ರಕ್ಷಣೆಗೂ ಗಂಭೀರ ಅಪಾಯವನ್ನು ತಂದೊಡ್ಡಲಿದೆ. ಈ ಅಪಾಯಕಾರಿ ಬೆಳವಣಿಗೆಯನ್ನು ದೇಶಾದ್ಯಂತ ಕಾರ್ಮಿಕ ವರ್ಗ ಖಂಡಿಸಿದೆ. ಈ ಸಂಬಂಧ ಬೆಂಗಳೂರಿನಲ್ಲಿ ಜುಲೈ 10 ರಂದು ನಡೆದ ಬೃಹತ್ ಕಾರ್ಮಿಕ ಪ್ರತಿರೋಧ, ಚಳುವಳಿಯ ವರದಿ ಇಲ್ಲಿದೆ.

ಸಾರ್ವಜನಿಕ ಉದ್ದಿಮೆಗಳ ರಕ್ಷಣೆಗಾಗಿ ಕಾರ್ಮಿಕರ ಸಂಘರ್ಷ

ಬಿ.ಎಸ್.ಗೊರವರ್

ಬೆಂಗಳೂರಿನ ಬೀದಿಗಳು ಮಂಗಳವಾರದ ಸಂಜೆ ಹೊತ್ತಿಗೆ ಎಂದಿನಂತಿರಲಿಲ್ಲ. ಅಲ್ಲಿ ಸೋನೆ ಮಳೆ ಹುಯ್ಯ ತೊಡಗಿತ್ತು. ಮಳೆಗೆ ಎದೆಯೊಡ್ಡಿದ ಸಾವಿರಾರು ಕಾರ್ಮಿಕರ ದೃಢವಾದ ಹೆಜ್ಜೆಗಳು ಬನ್ನಪ್ಪ ಪಾರ್ಕಿನ ಕಡೆಗೆ ನಡೆಯತೊಡಗಿದ್ದವು. ಸಾವಿರಾರು ಕಾರ್ಮಿಕರು ಅಲ್ಲಿ ಜಮಾಯಿಸಿದ್ದರು. ಏಕಕಂಠದಿಂದ ಘೋಷಿಸುತ್ತಿದ್ದ ಅವರ ಹಕ್ಕೊತ್ತಾಯದ ಕೂಗು ಮುಗಿಲು ಮುಟ್ಟಿತ್ತು.

ಬೀದಿಗೆ ಬಂದ ಕಾರ್ಮಿಕರ ಬದುಕು: ಬೆಂಗಳೂರು ನಗರವನ್ನು ಕಟ್ಟಿ ಬೆಳೆಸಿದ ಕಾರ್ಮಿಕರ ಪಾಡು ನಾಯಿ ಪಾಡಾಗಿದೆ. ಮನೆ ಬಾಡಿಗೆ ದಿನೇ-ದಿನೇ ಗಗನ ಮುಖಿಯಾಗಿ ಏರುತ್ತಿದೆ. ಬೃಹತ್ ಬೆಂಗಳೂರಿನ ಇಂದಿನ ಜನಸಂಖ್ಯೆಯು 80 ಲಕ್ಷಕ್ಕೂ ಮೀರಿದೆ ಎಂದು ಸರ್ಕಾರದ ಅಂಕಿ-ಅಂಶಗಳೇ ಹೇಳುತ್ತಿವೆ. ಆದಾಗ್ಯೂ ಬೆಂಗಳೂರನ್ನು ಎ-1 ನಗರವೆಂದು ಘೋಷಿಸಿ ಶೇ.30 ಮನೆ ಬಾಡಿಗೆ ಭತ್ಯೆಯನ್ನು ಪಾವತಿಸುವುದಕ್ಕೆ ಕೇಂದ್ರ ಸರ್ಕಾರ ತೊಡರು ಕಾಲು ಬಡಿಯುತ್ತಿದೆ.


ನಗರ ಜೀವನ ದುಸ್ತರವಾಗಿದ್ದು, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕಾರ್ಮಿಕರ ಜೀವನ ಅಯೋಮಯವಾಗಿದೆ. ಕೇಂದ್ರ ಸರ್ಕಾರ ಕಾರ್ಮಿಕರ ಈ ಶೋಚನೀಯ ಬದುಕನ್ನು ಕಣ್ತೆರೆದು ನೋಡುತ್ತಿಲ್ಲ.

ಹೋರಾಟದ ಅಖಾಡಕ್ಕೆ ಇಳಿದ ಕಾರ್ಮಿಕರು:

ಬೆಂಗಳೂರಿನ ಸಾರ್ವಜನಿಕ ವಲಯದ ವಿವಿಧ ಕಾರ್ಮಿಕ ಸಂಘಗಳಾದ ಎಚ್.ಎಇಎ, ಐಟಿಐಇಯು, ಬಿಇಡಬ್ಲ್ಯುಯುಎಫ್, ಬಿಇಡಬ್ಲ್ಯುಯು, ಬಿಇಎಂಇಎ (ಬೆಂಗಳೂರು-ಕೆಜಿಎಫ್- ಮೈಸೂರು), ಬಿಹೆಚ್‌ಇಎಲ್, ಇಡಿಎನ್‌ಇಎ ಸಾರ್ವಜನಿಕ ವಲಯ ಉದ್ದಿಮೆಗಳ ಸಾವಿರಾರು ಕಾರ್ಮಿಕರು ಹೋರಾಟದ ಅಖಾಡಕ್ಕಿಳಿದು ತಮ್ಮ ಹಕ್ಕೊತ್ತಾಯದ ಕೂಗನ್ನು ಸರ್ಕಾರಕ್ಕೆ ಮುಟ್ಟಿಸಿದರು.

ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶವನ್ನು ಗುತ್ತಿಗೆ ಕೊಡುತ್ತಿರುವ ಸರ್ಕಾರ:

ಶತ-ಶತಮಾನಗಳ ಕಾಲದಿಂದಲೂ ಯುದ್ಧ ಸಾಮಗ್ರಿಗಳು ಮತ್ತು ರಾಜ್ಯವನ್ನು ರಕ್ಷಿಸುವ ಸಲುವಾಗಿ ಬೇಕಾಗುವ ರಕ್ಷಣಾ ಉಪಕರಣಗಳ ಉತ್ಪಾದನೆಯು ಪ್ರಭುತ್ವ ನಿಯಂತ್ರಿತ ಕೈಗಾರಿಕೆಯಾಗಿಯೇ ನಡೆದು ಬಂದಿರುವುದನ್ನು ಎಲ್ಲಾ ನಾಗರೀಕತೆಗಳಲ್ಲೂ ನಾವು ಕಾಣುತ್ತೇವೆ. ಈ ಉಪಕರಣಗಳನ್ನು ಖಾಸಗಿಯವರು ಉತ್ಪಾದನೆ ಆರಂಭಿಸಿದ ಬಳಿಕವೇ ಜಗತ್ತಿನಲ್ಲಿ ಮಾರಣಾಂತಿಕ ಪ್ರಮಾಣದಲ್ಲಿ ಭಯೋತ್ಪಾದನೆ ವಿಷ ವೃಕ್ಷದಂತೆ ವ್ಯಾಪಿಸುತ್ತಿದೆ. ಈಗಾಗಲೇ ಬಹುರಾಷ್ಟ್ರೀಯ ಕಂಪನಿಗಳು ಜಗತ್ತಿನ ಮೂಲೆ ಮೂಲೆಯಲ್ಲಿ ಭಯೋತ್ಪಾದನೆ ಮತ್ತು ನೆರೆಹೊರೆಯ ದೇಶಗಳ ನಡುವೆ ಯುದ್ಧವನ್ನು ಪ್ರಚೋದಿಸುವ ಪಿತೂರಿಯಲ್ಲಿ ತೊಡಗಿರುವುದು ಮಾನವ ಕುಲದ ಅನುಭವವಾಗಿದೆ.



ಹಿಂದಿನ ಎನ್.ಡಿ.ಎ. ಸರ್ಕಾರ ಸ್ವದೇಶಿ ಹೆಸರಿನಲ್ಲಿ ಅಧಿಕಾರ ಗ್ರಹಣ ಮಾಡಿ, ರಕ್ಷಣಾ ಉತ್ಪಾದನೆಯನ್ನು ಖಾಸಗಿ ರಂಗಕ್ಕೆ ಮುಕ್ತಗೊಳಿಸುವ ವಿನಾಶಕಾರಿ ಯೋಜನೆಯ ಭಾಗವಾಗಿ ಡಾ: ವಿಜಯ್ ಕೇಲ್ಕರ್ ಸಮಿತಿ ರಚಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸೂಚಿಸಿತ್ತು. ಆ ನಂತರ ಅಧಿಕಾರ ಹಿಡಿದ ಯು.ಪಿ.ಎ. ಸರ್ಕಾರವು ಆತ್ಯಾತುರವಾಗಿ ಹೆಚ್.ಎ.ಎಲ್., ಬಿ.ಇ.ಎಲ್ ಮತ್ತು ಬಿ.ಇ.ಎಂ.ಎಲ್. ಗಳಂತಹ ರಕ್ಷಣಾ ಸಾರ್ವಜನಿಕ ವಲಯ ಕೇಂದ್ರೋದ್ಯಮಗಳಿಂದ ಖರೀದಿ ಆದೇಶಗಳನ್ನು ಬೇರೆಡೆಗೆ ರವಾನಿಸುವ ಅಪಾಯಕಾರಿ ತೀರ್ಮಾನವನ್ನು ವಿಜಯ್‌ಕೇಲ್ಕರ್ ಸಮಿತಿಯ ಶಿಫಾರಸ್ಸಿನ ಆಧಾರದಲ್ಲಿ ಕೈಗೊಂಡಿದೆ. ಮಾರುವೇಶದ ಸ್ಥಳೀಯ ಕಂಪನಿಗಳ ಜೊತೆ ಜಂಟಿ ಸಹಯೋಗದ ಮೂಲಕ 'ಆಫ್ಸೆಟ್' ನಿಯಮದ ಅವಕಾಶವನ್ನು ಉಪಯೋಗಿಸಿ ಈಗಾಗಲೇ, ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರೀಸ್ (ಐಎಐ) ಎಂಬ ಕಂಪನಿಯು ರಕ್ಷಣಾ ಹಾಗೂ ನಾಗರೀಕ ವಿಮಾನಗಳ ಉತ್ಪಾದನೆಗೆ ವ್ಯಾಪಕ ಪ್ರಯತ್ನ ನಡೆಸಿದೆ. ಟಾಟಾ ಪವರ್, ಮಹೀಂದ್ರ ಅಂಡ್ ಮಹೀಂದ್ರ, ಎಲ್ ಅಂಡ್ ಟಿ, ಇನ್ಫೋಸಿಸ್ ಇತ್ಯಾದಿಗಳಿಗೆ "ರಕ್ಷಾ ಉತ್ಪಾದನಾ ರತ್ನ" ಗಳೆಂಬ (ಆರ್‌ಯುಆರ್) ಪಟ್ಟ ಕಟ್ಟಿರುವುದೇ ಬಿ.ಇ.ಎಲ್ ಹಾಗೂ ಬಿ.ಇ.ಎಂ.ಎಲ್. ಗಳಿಂದ ಆದೇಶಗಳನ್ನು ಆರ್‌ಯುಆರ್‌ಗಳಿಗೆ ವರ್ಗಾಯಿಸಲು, ಸಂಪರ್ಕ ಸಚಿವಾಲಯದ ದಡಿಯಲ್ಲಿ ಬರುವ ಮತ್ತೊಂದು ಸಾರ್ವಜನಿಕ ವಲಯದ ಕೇಂದ್ರೋದ್ಯಮ ವಾದ ಐ.ಟಿ.ಐ.ಗೆ ಆದೇಶಗಳನ್ನು ನಿರಾಕರಿಸುವ ಮೂಲಕ ಉದ್ದೇಶಪೂರ್ವಕ ವಾಗಿ ನಾಶ ಮಾಡುವ ಪ್ರಕ್ರಿಯೆಗೆ ಸರ್ಕಾರ ಮುಂದಾಗಿದೆ.

ವ್ಯಾಪಕ ವಿರೋಧ


ಪ್ರತಿಭಟನಾ ಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಪಿಎಂ ನ ಮಾಜಿ ಲೋಕಸಭಾ ಸದಸ್ಯರೂ ಹಾಗೂ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಗಳಾದ ದೀಪಂಕರ್ ಮುಖರ್ಜಿ' ಹಿಂದೆ, ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಎನ್.ಡಿ.ಎ. ಸರ್ಕಾರವು ಹತ್ತು ವರ್ಷಗಳ ಅವಧಿಯ ವೇತನ ಒಪ್ಪಂದವನ್ನು ಹೇರಿ ಕಾರ್ಮಿಕರ ಬದುಕಿನ ಜೊತೆ ಚೆಲ್ಲಾಟವಾಡಿದೆ. ಜನವಿರೋಧಿ ನೀತಿಗಳನ್ನು ಅನುಸರಿಸಿದ್ದಕ್ಕಾಗಿ ಮೂಲೆಗುಂಪಾದ ಎನ್.ಡಿ.ಎ. ಸರ್ಕಾರ ಅನುಸರಿಸಿದ ವೇತನ ನೀತಿಯನ್ನು ಯು.ಪಿ.ಎ. ಸರ್ಕಾರವೂ ಅನುಸರಿಸುತ್ತಿದೆ. ಇದರ ಭಾಗವಾಗಿ ಪುನಃ ಹತ್ತು ವರ್ಷಗಳ ಅವಧಿಯ ವೇತನ ಒಪ್ಪಂದವನ್ನು ಹೇರುವ ಮಾರ್ಗ ಸೂಚಿಯನ್ನು ನೀಡಲಾಗಿದ್ದು, ಅದನ್ನು ಬದಲಿಸಬೇಕು ಮತ್ತು ಐದು ವರ್ಷಗಳ ಅವಧಿಗೆ ವೇತನ ಒಪ್ಪಂದವಾಗಬೇಕು' ಎಂದು ಅವರು ಸರ್ಕಾರವನ್ನು ಒತ್ತಾಯಿಸಿದರು.

ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ"ಯುದ್ಧ ಸಾಮಗ್ರಿಗಳನ್ನು ತಯಾರಿಸಲು ಬಹುರಾಷ್ಟ್ರೀಯ ಕಂಪನಿಗಳಿಗೆ ಪರವಾನಗಿ ಕೊಡಲಾಗಿದೆ. ಇದರಿಂದ ಜಗತ್ತಿನ ಯಾವುದೇ ಸರ್ಕಾರ ನಿಯಂತ್ರಿಸಲಾಗದಷ್ಟು ಮಾರಕಾಸ್ತ್ರಗಳನ್ನು ಭಯೋತ್ಪಾದಕರು ಹೊಂದಿದ್ದಾರೆ. ಇದು ನಿಲ್ಲಬೇಕು" ಎಂದು ಅವರು ಹೇಳಿದರು.

ಹೆಚ್.ಎ.ಎಲ್.ನ ಅಧ್ಯಕ್ಷ ಎಸ್.ಆರ್.ವಿಶ್ವನಾಥ ಮಾತನಾಡಿ "ಕೇಂದ್ರ ಸರ್ಕಾರ ಕಾರ್ಮಿಕರನ್ನು ಬೀದಿಗೆ ತಳ್ಳುತ್ತಿದೆ. ಕೇಂದ್ರೋದ್ಯಮದ ಕಾರ್ಮಿಕರ ತಾಳ್ಮೆಯನ್ನು ಕೆಣಕುತ್ತಿದೆ. ಸರ್ಕಾರದ ನಿಧಾನದ್ರೋಹವನ್ನು ನಾವು ಸಹಿಸಲಾರೆವು. ಕಾರ್ಮಿಕರ ವಿರೋಧಿ ನೀತಿಗಳನ್ನು ಸರ್ಕಾರ ಕೈ ಬಿಡಬೇಕು" ಎಂದು ಅವರು ಒತ್ತಾಯಿಸಿದರು.

ಬೃಹತ್ ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಜೆ.ಎ.ಎಫ್.ನ ಸಂಯೋಜಕರಾದ ಡಿ.ಅನಂತಪದ್ಮನಾಭ, ಬಿ.ಇ.ಡಬ್ಲ್ಯೂ.ಯು.ಎಫ್.ನ ಎನ್. ಬಾಲಪ್ಪ, ಬಿ.ಇ.ಡಬ್ಲ್ಯುಯು ನ ಎಸ್. ಪ್ರಸನ್ನಕುಮಾರ್, ಬಿ.ಇ.ಎಂ.ಇ.ಎ. ನ ಕಾರ್ಯಾಧ್ಯಕ್ಷರು, ಸಿಐಟಿಯು ಸಂಘಟನೆಯ ರಾಜ್ಯ ಕಾರ್ಯದರ್ಶಿಗಳೂ ಆದ ಬಸಪ್ಪ, ಐಟಿಐಇಯು ನ ರಾಮಪ್ಪ ಬಿ.ಹೆಚ್. ಇ.ಎಲ್.ನ ಡಿ.ವಿನಾಯಕಂ ವಹಿಸಿದ್ದರು. ಕೇಂದ್ರ ಸರ್ಕಾರಿ ನೌಕರರ ಸಂಘಗಳ ಸಮನ್ವಯ ಸಮಿತಿಯ ಸಂಚಾಲಕರಾದ ರಾಧಾಕೃಷ್ಣರವರು ಹೋರಾಟ ಬೆಂಬಲಿಸಿ ಮಾತನಾಡಿದರು.

ಸಭೆಯನ್ನುದ್ದೇಶಿಸಿ ಮಾತಾನಾಡುತ್ತಿರುವ ದೀಪಂಕರ್ ಮುಖರ್ಜಿ



ಭಯೋತ್ಪಾದಕರೂ ಅವರ[illegible]ನ್ನ ಪೋಷಿಸುವ ವಾತಾವರಣವೂ...

ಪುಟ 6 ರಿಂದ

ಮಾತ್ರವೇ ಅಂತಿಮವಾಗಿ ಭಯೋತ್ಪಾದನೆಯ ಮೂಲವನ್ನು ಇಲ್ಲವಾಗಿಸಲು ಸಾಧ್ಯ.

ಅದರ ಬದಲು ಬ್ರಿಟನ್ನಿನಲ್ಲಿ ಮಾಡುತ್ತಿರುವಂತೆ ವಲಸೆಯ ಮೇಲೆ ಹೆಚ್ಚಿನ ಹತೋಟಿ, ನಿಯಂತ್ರಣ ಬೇಕು ಎನ್ನುವುದರಿಂದ ಅಥವಾ ದೇಶದೊಳಗೆ ಅಮಾಯಕರಿಗೆ ಕಿರುಕುಳ ಕೊಡುವುದರಿಂದ ('ಫನಾ' ದಂತಹ ಸಿನಿಮಾ ಭಯೋತ್ಪಾದನೆ ಹೇಗೆ ಬೇರು ಬಿಡುತ್ತವೆ ಎಂದು ಚಿತ್ರಿಸಿವೆ) ಭಯೋತ್ಪಾದಕರು ಮುಂದೆ ಹುಟ್ಟಿಕೊಳ್ಳದಂತೆ ತಡೆಯಲು ಸಾಧ್ಯವಿಲ್ಲ, ಬದಲಾಗಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಬಹುದು.

ವಲಸೆಯನ್ನು ಎಷ್ಟೇ ಬಿಗಿಗೊಳಿಸಿದ್ದರೂ ಗ್ಲಾಸ್ಗೋ ಧಾಳಿಯನ್ನು ತಡೆಯಲಾಗುತ್ತಿರಲಿಲ್ಲ. ಏಕೆಂದರೆ ಅದನ್ನು ಮಾಡಿದವರು ಆ ದೇಶದೊಳಗೇ ಭಯೋತ್ಪಾದನೆಯ ಪ್ರಭಾವಕ್ಕೆ ಒಳಗಾದವರು.

ಮೊನ್ನೆಯಷ್ಟೇ ಇಸ್ಲಾಮಾಬಾದಿನಲ್ಲಿ ಭಯೋತ್ಪಾದಕರನ್ನು ಹೊರದಬ್ಬಲು ಲಾಲ್ ಮಸ್ಜಿದ್‌ಗೆ ನುಗ್ಗಿದಾಗ 88 ಉಗ್ರಗಾಮಿಗಳು ಕೊಲ್ಲಲ್ಪಟ್ಟಿದ್ದಾರೆ. ಪಾಕಿಸ್ತಾನ ಗಡಿಯಾಚೆಯಿಂದ ಭಯೋತ್ಪಾದನೆಯಲ್ಲಿ ತೊಡಗಿತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಭಾರತದ ನೆರೆಕರೆಯಲ್ಲಿನ ಬೆಳವಣಿಗೆಗಳು, ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಭಯೋತ್ಪಾದಕ ಸಂಘಟನೆಗಳಿಗೆ ಒದಗಿಸಿದ ವಾತಾವರಣ ಇವೆಲ್ಲಾ ಭಯೋತ್ಪಾದನೆಯ ಬೆದರಿಕೆಗಳನ್ನು ಇನ್ನಷ್ಟು ಹೆಚ್ಚಿಸುತ್ತವೆ. ಅಮರಿಕನ್ ಸಾಮ್ರಾಜ್ಯಶಾಹಿಯ 'ಭಯೋತ್ಪಾದನೆಯ ವಿರುದ್ಧ ಸಮರ' ಸೃಷ್ಟಿಸಿದ ಅಂತರಾಷ್ಟ್ರೀಯ ವಾತಾವರಣ ಭಾರತದಲ್ಲಿರುವ ನಮ್ಮನ್ನು ಇನ್ನಷ್ಟು ಭಯೋತ್ಪಾದಕ ಬೆದರಿಕೆಗಳಿಗೆ ತೆರೆದಿಟ್ಟಿದೆ. ಆದ್ದರಿಂದ ನಾವು ನಮ್ಮ ಆಂತರಿಕ ಭದ್ರತೆಯನ್ನು ಇನ್ನಷ್ಟು ಬಿಗಿಗೊಳಿಸಬೇಕು ಹಾಗೂ ಅದೇ ವೇಳೆಗೆ ಭಯೋತ್ಪಾದನೆಯನ್ನು ಪೋಷಿಸುವ ದೀರ್ಘ ಕಾಲದ ಸಮಸ್ಯೆಗಳಿಗೆ ರಾಜಕೀಯ ಪರಿಹಾರ ಕಂಡುಕೊಳ್ಳಲು ಶ್ರಮಿಸಬೇಕು, ಒಟ್ಟಾರೆ ವಾತಾವರಣವನ್ನು ಭಯೋತ್ಪಾದನೆಯನ್ನು ಪೋಷಿಸದ ರೀತಿಯಲ್ಲಿ ಉತ್ತಮಪಡಿಸಬೇಕು.

ಈ ನಡುವೆ ಭಾರತ ಸರಕಾರ ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಬ್ರಿಟಿಶ್ ಮತ್ತು ಅಂತರಾಷ್ಟ್ರೀಯ ಅಧಿಕಾರಿಗಳಿಗೆ ಎಲ್ಲಾ ಸಹಕಾರ ನೀಡಬೇಕು, ಅದೇ ವೇಳೆಗೆ ಕೆಲವ ಭಯೋತ್ಪಾದಕರ ಕೃತ್ಯಗಳಿಗೆ ಇಡೀ ಸಮುದಾಯವನ್ನು ದೂಷಿಸಬಾರದು ಎಂಬ ಪ್ರಧಾನ ಮಂತ್ರಿಗಳ ಮಾತನ್ನೂ ಒತ್ತಿ ಹೇಳಬೇಕು.

ಕಾರ್ಮಿಕರಿಗೆ ಪ್ರಯೋಜನಕ್ಕಿಲ್ಲದ ಇಎಸ್‌ಐ ಡಿಸ್ಪೆನ್ಸರಿ

ಕಾರ್ಮಿಕರ ಮತ್ತು ಮಾಲಕರ ವಂತಿಗೆಯಿಂದ ಪ್ರತೀ ತಿಂಗಳೂ ಸಂಗ್ರಹವಾಗುವ ಕೋಟ್ಯಾಂತರ ರೂಪಾಯಿ ನಿಧಿಯಲ್ಲಿ ನೌಕರರ ರಾಜ್ಯ ವಿಮಾ ಯೋಜನೆ (ಇಎಸ್‌ಐ) ಕಾರ್ಯಗತಗೊಳ್ಳುತ್ತಿದೆ. ಈ ಯೋಜನೆಯಿಂದ ಕಾರ್ಮಿಕರಿಗೆ ಸಮರ್ಪಕವಾದ ಸೇವೆ ಸಿಗುವ ಬದಲು ಯಾವ ಪ್ರಯೋಜನವೂ ಇಲ್ಲದ ಪರಿಸ್ಥಿತಿ ಉಡುಪಿ ಜಿಲ್ಲೆಯಲ್ಲಿದೆ.

ಉಡುಪಿ ನಗರದ ಕೇಂದ್ರದಿಂದ ಎರಡೂವರೆ ಕಿಲೋ ಮೀಟರ್ ದೂರದ ಕಿನ್ನಿಮೂಲ್ಕಿಯಲ್ಲಿ ಇಎಸ್‌ಐ ಡಿಸ್ಪೆನ್ಸರಿ ಇದೆ. ಇಲ್ಲಿಂದ ಪುನಃ 2.5 ಕಿ.ಮೀ ದೂರದಲ್ಲಿ ಇ.ಎಸ್.ಐ. ಲೋಕಲ್ ಆಫೀಸು ಇದೆ. ಡಿಸ್ಪೆನ್ಸರಿ ಮಳೆಗಾಲದಲ್ಲಿ ಸೋರುವ ಕಟ್ಟಡದಲ್ಲಿದ್ದು ಅದರ ನೌಕರರಿಗೂ ಕೆಲಸ ಮಾಡಲು ಸಾಧ್ಯವಿಲ್ಲದ ಮತ್ತು ಇಎಸ್‌ಐ ಸದಸ್ಯ ಕಾರ್ಮಿಕರಿಗೆ ಬರಲು ಮುಜುಗರ ಉಂಟಾಗುತ್ತದೆ. ಈ ಡಿಸ್ಪೆನ್ಸರಿಯ ಸಮಯ ಸಾಮಾನ್ಯವಾಗಿ ಸರಕಾರಿ ಕಛೇರಿಗಳಂತೆ ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ಇರುವುದರಿಂದ ಸಾಧಾರಣ ಪಾಳಿಯಲ್ಲಿ ಇರುವವರು ಕಾರ್ಖಾನೆಗೆ ರಜೆ ಮಾಡಿಯೇ ಬರಬೇಕು. ವೈದ್ಯರಂತೂ 10 ಗಂಟೆಯ ನಂತರವೇ ಬರುವುದು. ಕೆಲಸಕ್ಕೆ ರಜೆ ಹಾಕಿ ಔಷಧ ಹಾಗೂ ವಿಶ್ರಾಂತಿಗಾಗಿ ಇಎಸ್‌ಐ ರಜೆ ಶಿಫಾರಸ್ಸಿಗೆ ಈ ಡಿಸ್ಪೆನ್ಸರಿಗೆ ಹೋದರೆ ರೋಗಿಯನ್ನು ಮುಟ್ಟದೆ ದೂರದಿಂದಲೇ ನೋಡಿ ಔಷಧಿ ಬರೆದುಕೊಟ್ಟು ಕಾರ್ಖಾನೆಗೆ ರಜೆ ಹಾಕುವ ಅವಶ್ಯಕತೆ ಇಲ್ಲ ಕೆಲಸಕ್ಕೆ ಹೋಗಿ ಎಂದು ಕಾರ್ಖಾನೆಯ ಮಾಲಕರಿಗಿಂತಲೂ ನಿರ್ದಾಕ್ಷಿಣ್ಯವಾಗಿ ಆಜ್ಞೆ ಮಾಡುತ್ತಾರೆ. ಈ ವೈದ್ಯರು ಬರೆದುಕೊಟ್ಟ ಔಷಧಿಯಂತೂ ಈ ಡಿಸ್ಪೆನ್ಸರಿಯಲ್ಲಿ ಸಿಗುವುದಿಲ್ಲ. ಬದಲಾಗಿ ಖಾಸಗಿ ಮೆಡಿಕಲ್ ಶಾಪ್‌ಗೆ ಹೋಗಬೇಕು. ಕಾರ್ಮಿಕರು ತುರ್ತು ಚಿಕಿತ್ಸೆಗಾಗಿ ಇಎಸ್‌ಐ ನಿಂದ ಅಂಗೀಕಾರ ಹೊಂದಿದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾದರೆ ವೈದ್ಯಕೀಯ ಖರ್ಚುಗಳನ್ನು ಕ್ಲೈಮ್ ಮಾಡಿದರೆ ಹಣವಂತೂ ವಾಪಾಸು ಸಿಗುವುದಿಲ್ಲ. ಈ ಚಿಕಿತ್ಸಾಲಯದಲ್ಲಿ ಖಾಯಂ ವೈದ್ಯರಂತೂ ಇಲ್ಲ. ತಾತ್ಕಾಲಿಕ ನೆಲೆಯ ವೈದ್ಯರು ಬೆಂಗಳೂರಿನಿಂದ ಪ್ರತೀ ಹದಿನೈದು ದಿನದ ಮಟ್ಟಿಗೆ ಒಂದು ಡಿಸ್ಪೆನ್ಸರಿಯನ್ನು ಅಲಂಕರಿಸಿ ಹೋಗುತ್ತಾರೆ. ಕಾರ್ಮಿಕರು ಈ ಅಸಮರ್ಪಕ ವ್ಯವಸ್ಥೆಯ ವಿರುದ್ಧ ದಿನನಿತ್ಯ ಶಪಿಸುತ್ತಿದ್ದಾರೆ. ಹೆಚ್ಚಿನ ಕಾರ್ಮಿಕರು ಹಣ ಕೊಟ್ಟು ಖಾಸಗೀ ವೈದ್ಯರಿಂದ ಚಿಕಿತ್ಸೆ ಪಡೆದು ಈ ಇಎಸ್‌ಐ ವ್ಯವಸ್ಥೆಯನ್ನೇ ಮರೆತುಬಿಟ್ಟಿದ್ದಾರೆ. ಇಂತಹ ಅವ್ಯವಸ್ಥೆಗಳ ವಿರುದ್ಧವಾಗಿ ಜೂನ್ 25, 2007ರಂದು ಸಿಐಟಿಯು ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಉಡುಪಿ ಇಎಸ್‌ಐ ಸದಸ್ಯ ಕಾರ್ಮಿಕರು ಮೆರವಣಿಗೆಯಲ್ಲಿ ಉಡುಪಿ ಕಿನ್ನಿಮೂಲ್ಕಿಯ ಇಎಸ್‌ಐ ಡಿಸ್ಪೆನ್ಸರಿಗೆ ಹೋಗಿ ಪ್ರತಿಭಟನೆ ಸಲ್ಲಿಸಿ ಅಲ್ಲಿ ಉಪಸ್ಥಿತರಿದ್ದ ವೈದ್ಯಾಧಿಕಾರಿ ಡಾ. ಅನಂತ ಹೆಚ್. ಇವರಿಗೆ ಮನವಿ ಸಲ್ಲಿಸಿ ಈ ಅವ್ಯವಸ್ಥೆಗಳನ್ನು ಪರಿಹರಿಸುವಂತೆ ಒತ್ತಾಯ ಹಾಕಿದರು.

ಸಿಐಟಿಯು ಉಡುಪಿ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ ರೈಯವರು ಇಲ್ಲಿನ ಅವ್ಯವಸ್ಥೆಗಳ ಬಗ್ಗೆ ವಿವರವಾಗಿ ಮಾತನಾಡಿದರು. ಈ ಕಾರ್ಯಕ್ರಮದ ನೇತೃತ್ವವನ್ನು ರಮೇಶ ಮೆಂಡನ್, ಸಂಜೀವ ನಾಯಕ್, ಸತೀಶ ಶೆಟ್ಟಿ, ರಮೇಶ ಬೈಕಾಡಿ ವಹಿಸಿದ್ದರು.

ವಚನಭ್ರಷ್ಟ ಸಚಿವ : ಬಸ್‌ಪಾಸ್ ದರ ಏರಿಕೆ ವಿರುದ್ಧ ವಿಧಾನಸೌಧ ಚಲೋ

ರಾಜ್ಯ ಸರ್ಕಾರವು ಏಕಾಏಕಿಯಾಗಿ ಅವೈಜ್ಞಾನಿಕ ರೀತಿಯಲ್ಲಿ ಸರ್ಕಾರಿ ಶಾಲಾ ಕಾಲೇಜು ಶುಲ್ಕಕ್ಕಿಂತ ಅಧಿಕವಾಗಿ ಬಸ್‌ಪಾಸ್ ದರ ಏರಿಕೆ ಮಾಡಿದ ಕ್ರಮ ಖಂಡಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಕರ್ನಾಟಕ ರಾಜ್ಯಸಮಿತಿ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ನೀಡಿದ್ದರ ಅಂಗವಾಗಿ ರಾಜ್ಯದಲ್ಲಿ ಹತ್ತಾರು ದಿನ ಹತ್ತಾರು ರೀತಿಯಲ್ಲಿ ಪ್ರತಿಭಟನೆಗಳು ನಡೆದವು. ಪ್ರತಿಭಟನೆ ತೀವ್ರಗೊಂಡಂತೆ ರಾಜ್ಯಸರ್ಕಾರವು ಎಸ್‌ಎಫ್‌ಐನೊಂದಿಗೆ ಮಾತುಕತೆ ನಡೆಸಬೇಕಾಯಿತು.



ಎಸ್‌ಎಫ್‌ಐನೊಂದಿಗೆ ಸಾರಿಗೆ ಸಚಿವರ ಮಾತುಕತೆ

ನಿರಂತರ ಪ್ರತಿಭಟನೆಗೆ ಮಣಿದ ಸಾರಿಗೆ ಸಚಿವರು ಜುಲೈ 9,07ರಂದು ಎಸ್‌ಎಫ್‌ಐನೊಂದಿಗೆ ಅಧಿಕೃತ ಮಾತುಕತೆಗೆ ಆಹ್ವಾನಿಸಿದರು. ಮಾತುಕತೆಯಲ್ಲಿ ಎಸ್‌ಎಫ್‌ಐ ಏರಿಸಿರುವ ಬಸ್‌ಪಾಸ್ ದರ ಸಂಪೂರ್ಣ ವಾಪಾಸ್ ಪಡೆಯಬೇಕು. ಸರ್ಕಾರದ ಆದೇಶದ ಆಶಯದಂತೆ 17 ಸಾವಿರ ಆದಾಯದೊಳಗಿರುವ ಕುಟುಂಬದ ಮಕ್ಕಳಿಗೆ ಉಚಿತ ಬಸ್‌ಪಾಸ್ ನೀಡಬೇಕು, ಬಸ್‌ಪಾಸ್ ಅವಧಿಯನ್ನು 12 ತಿಂಗಳಿಗೆ, ವ್ಯಾಪ್ತಿಯನ್ನು 80 ಕಿ.ಮೀ.ಗೆ ವಿಸ್ತರಿಸಬೇಕು, ಹಾಗೂ 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೂ ಬಸ್‌ಪಾಸ್ ನೀಡಬೇಕು. ಆಗತ್ಯ ಕೌಂಟರ್‌ಗಳನ್ನು ಹೋಬಳಿ ಕೇಂದ್ರಗಳನ್ನು ಒಳಗೊಂಡಂತೆ ವ್ಯಾಪಕವಾಗಿ ತೆರೆಯಲು, ಬಸ್‌ಪಾಸ್ ಕಳೆದುಕೊಂಡ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡಬೇಕೆಂದು ಸರ್ಕಾರವನ್ನು ನಿಯೋಗ ಒತ್ತಾಯಿಸಿತು. ಸಾರಿಗೆ ಸಚಿವರಾದ ಎನ್.ಚಲುವರಾಯ ಸ್ವಾಮಿಯವರು ಅಧಿಕೃತವಾಗಿ ನಾಳೆ ತೀರ್ಮಾನ ಕೈಗೊಳ್ಳುವುದಾಗಿ ಜಾರಿಕೊಳ್ಳಲು ಯತ್ನಿಸಿದಾಗ, ಎಸ್‌ಎಫ್‌ಐ ಬಿಗಿಪಟ್ಟು ಹಿಡಿದು ಸಚಿವರೊಂದಿಗೆ ವಾಗ್ವಾದಕ್ಕೆ ಇಳಿಯಿತು. ಸಚಿವರು ಬಸ್‌ಪಾಸ್‌ದರ ಏರಿಕೆ ಅವೈಜ್ಞಾನಿಕ ಎಂದು ಒಪ್ಪಿಕೊಂಡು ನಾಳೆ ಒಳಗಾಗಿ ನಿಮ್ಮ ಬೇಡಿಕೆ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಲಾಗುವುದು ಎಂದರು. ಮಾರನೆ ದಿನ ರಾಜ್ಯ ಸರ್ಕಾರ ಶೇ.40 ಮಾತ್ರ ಬಸ್‌ಪಾಸ್‌ದರ ಏರಿಕೆ ವಾಪಸ್ ಪಡೆದು ವಚನಭ್ರಷ್ಟತೆ ಮೆರೆಯಿತು.

ವಚನಭ್ರಷ್ಟ ಸರ್ಕಾರ ಎಸ್‌ಎಫ್‌ಐನಿಂದ ವಿಧಾನಸೌಧ ಚಲೋ

ಈ ನೀತಿ ಖಂಡಿಸಿ ಎಸ್‌ಎಫ್‌ಐ ಕರ್ನಾಟಕ ರಾಜ್ಯಸಮಿತಿ ದಿನಾಂಕ 13.7.07 ರಂದು ವಿಧಾನಸೌಧ ಚಲೋ ಹಮ್ಮಿಕೊಂಡಿತು. ರಾಜ್ಯಾದ್ಯಂತ ಆಗಮಿಸಿದ ವಿದ್ಯಾರ್ಥಿಗಳು ಸರ್ಕಾರದ ನೀತಿಯನ್ನು ಖಂಡಿಸಿದರು. ನಗರದ ಚಿಕ್ಕಲಾಲ್‌ಬಾಗ್ ನಿಂದ ಹೊರಟ ಮೆರವಣಿಗೆ ನಗರದ ಪ್ರಮುಖ ಬೀದಿಯನ್ನು ಹಾಯ್ದು ಬನ್ನಪ್ಪ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಯಿತು. ಮುಖ್ಯಮಂತ್ರಿಗಳು ನಗರದಲ್ಲಿ ಇಲ್ಲದ ಕಾರಣ ಗೃಹಸಚಿವರಾದ ಎಂ.ಪಿ.ಪ್ರಕಾಶ್‌ರವರನ್ನು ಎಸ್‌ಎಫ್‌ಐನ ನಿಯೋಗವು ಭೇಟಿ ಮಾಡಿ ಬಸ್‌ಪಾಸ್‌ದರ ಏರಿಕೆ ವಿರೋಧಿಸುತ್ತಿದ್ದಂತೆ ನನ್ನ ಕ್ಷೇತ್ರದಲ್ಲಿಯೂ ತೊಂದರೆಯಾಗಿದೆ ಎಂದ ಸಚಿವರು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಎಸ್‌ಎಫ್‌ಐನೊಂದಿಗೆ ಮುಖ್ಯಮಂತ್ರಿ ಮಾತುಕತೆಗೆ ಅವಕಾಶ ಮಾಡಿಕೊಡುವುದಾಗಿ ಭರವಸೆ ನೀಡಿದರು. ನಿಯೋಗದಲ್ಲಿ ರಾಜ್ಯ ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್, ರಾಜ್ಯ ಉಪಾಧ್ಯಕ್ಷ ವಿಜಯಕುಮಾರ್ ದೊಡ್ಡಮನಿ, ಎಂ.ಪಿ.ಮುನಿವೆಂಕಟಪ್ಪ ಅಲ್ಲದೇ ಬೆಂಗಳೂರಿನ ಪ್ರಸಾದ್, ಮಂಡ್ಯದ ರಾಜೇಂದ್ರ ಬಾಬು ಇದ್ದರು.

ವಿಜಯಕುಮಾರ್ ದೊಡ್ಡಮನಿ

ಹ್ಹ...ಹ್ಹಾ...ಹ್ಹಾ...

ಟಿ.ವಿ. ಕೆಟ್ಟಿದೆ

ಗುಂಡನ ಮನೆಯವರು ಬಹಳ ಖಾಯಿಸ್ ಪಟ್ಟು ಮನೆಗೆ ದುಬಾರಿ ಬೆಲೆಯ ಬಣ್ಣದ ಟಿ.ವಿ. ತಂದರು. ಎರಡೇ ದಿನ. ಟಿ.ವಿ.ಗೆ ಏನೋ ಒಂದು ರೋಗ ವಕ್ಕರಿಸಿಕೊಂಡಿತು.

ಚಿತ್ರ ಅಸ್ಪಷ್ಟ -ಕಪ್ಪಗೆ, ಬೆಳ್ಳಗೆ ಏನೋ ಆಗೀಗ ತುಣುಕು, ಮಿಣುಕು ಕಾಣುತ್ತಿತ್ತು. ಧ್ವನಿಯಂತೂ ಕೇಳುವುದೇ ಬೇಡ. 10 ನಿಮಿಷ, 15 ನಿಮಿಷಕ್ಕೊಮ್ಮೆ ಏನೋ ಒಂದು ಮಾತು ಕೇಳುತ್ತಿತ್ತು. ಅದೂ ಅರ್ಥವಾಗುತ್ತಿರಲಿಲ್ಲ.

ಆತಂಕಗೊಂಡ ಗುಂಡನ ಮನೆಯವರು ತಕ್ಷಣ ಅದನ್ನು ರಿಪೇರಿಗೆ ತೆಗೆದುಕೊಂಡು ಹೋದರು. ರಿಪೇರಿ ಮಾಡುವವನು ಟಿ.ವಿ.ಯನ್ನು ಪರೀಕ್ಷಿಸಿ ಅವರ ಆತಂಕ ನಿವಾರಿಸಿದ. ಅವನು ಹೇಳಿದ.

"ಟಿ.ವಿ.ಗೆ ಏನೂ ಆಗಿಲ್ಲ. ಎಲ್ಲಾ ಸರಿಯಾಗೇ ಇದೇ. ಟಿ.ವಿ.ಯಲ್ಲಿ ಈಗ ಪ್ರಶಸ್ತಿ ವಿಜೇತ, ಕಲಾತ್ಮಕ ಚಲನ ಚಿತ್ರ ಬರ್ತಿದೆ. ಅದು ಮುಗಿದ ಮೇಲೆ ಚಿತ್ರ, ಧ್ವನಿ ಎರಡೂ ಮಾಮೂಲಿ ಆಗುತ್ತೆ!!"

- ಸಂಗ್ರಹ

ಶಿಕ್ಷಕ-ಶಿಕ್ಷಕಿಯರ ಹೋರಾಟ

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕ-ಶಿಕ್ಷಕಿಯರ ಸಂಘಕ್ಕೆ ಸರ್ಕಾರ ಮಾನ್ಯತೆ ನೀಡಬೇಕು ಎಂಬುದು ಸೇರಿದಂತೆ ಶಿಕ್ಷಕರ ವೇತನ, ಬಡ್ತಿ, ಮುಂತಾದ ನ್ಯಾಯಬದ್ಧ ಬೇಡಿಕೆಗಳಿಗಾಗಿ ಆಗ್ರಹಿಸಿ ಇದೇ ಜುಲೈ 5,2007ರಂದು ಬೆಂಗಳೂರಿನ ಮಹಾತ್ಮ ಗಾಂಧಿ ಪ್ರತಿಮೆ ಬಳಿ ರಾಜ್ಯ ಮಟ್ಟದ ಶಿಕ್ಷಕರ ಧರಣ ನಡೆಯಿತು.

ದೈಹಿಕ ಶಿಕ್ಷಣ, ಚಿತ್ರಕಲೆ, ಕ್ರಾಫ್ಟ್, ಸಂಗೀತ ಮತ್ತು ಹಿಂದಿ ಶಿಕ್ಷಕರಿಗೆ ಉನ್ನತ ವೇತನ ಶ್ರೇಣಿ ಮಂಜೂರು, ಗುತ್ತಿಗೆ ಕೃಪಾಂಕ ಹಾಗೂ ಕೃಪಾಂಕ



ರಹಿತ ಶಿಕ್ಷಕರ ಸೇವಾ ಅಂತರ ಹಾಗೂ ವೇತನ ಅಂತರಗಳನ್ನು ಸರಿದೂಗಿಸುವುದು ಧರಣಿಯ ಇತರ ಪ್ರಮುಖ ಬೇಡಿಕೆಗಳಾಗಿದ್ದವು. ಧರಣಿಯಲ್ಲಿ ವಿವಿಧ ಜಿಲ್ಲೆಗಳಿಂದ ಗಣನೀಯ ಸಂಖ್ಯೆಯ ಮಹಿಳೆಯರೂ ಸೇರಿದಂತೆ ಸುಮಾರು 300ಕ್ಕೂ ಹೆಚ್ಚು ಶಿಕ್ಷಕರು ಪಾಲ್ಗೊಂಡಿದ್ದರು.

ಸಂಘದ ರಾಜ್ಯಾಧ್ಯಕ್ಷೆ ಶ್ರೀಮತಿ ರಮಾದೇವಿ, ಪ್ರಧಾಯ ಕಾರ್ಯದರ್ಶಿ ಶಂಕರ ಗಂಗಣ್ಣವರ, ಸಹಕಾರ್ಯದರ್ಶಿ ರಂಗನಾಥ ಹವಲ್ದಾರ, ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು.

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ರಾಜ್ಯಾಧ್ಯಕ್ಷರಾದ ಯು.ಡಿ.ನರಸಿಂಹಯ್ಯ ಪ್ರಧಾನ ಕಾರ್ಯದರ್ಶಿ ಸಚ್ಚಿದಾನಂದ ಮೂರ್ತಿ,



ಉಪಾಧ್ಯಕ್ಷರಾದ ಮಹದೇವಯ್ಯ ಮಠಪತಿ, ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ಪ್ರಸನ್ನ ಕುಮಾರ್ ಹೋರಾಟ ನಿರತ ಶಿಕ್ಷಕ -ಶಿಕ್ಷಕಿಯರನ್ನುದ್ದೇಶಿಸಿ ಮಾತನಾಡಿದರು.

ಧರಣಿಯ ನಂತರ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಲಾಗಿದೆ.

ವರದಿ : ಕೆ.ಆರ್.ಹೆಗ್ಡೆ

ಶೈಕ್ಷಣಿಕ ಕ್ಷೇತ್ರ

ಶೈಕ್ಷಣಿಕ ಕ್ಷೇತ್ರವೂ ಕತ್ತಲೆಯ ಕೂಪ
ಆಗಿಹುದು ಕಾರಣವ ಕೇಳು ದೇವಪ್ಪ
ಇಂದಿಗೂ ವಿಜ್ಞಾನ ಎಂದೆಂಬ ಬೆಳಕು
ಜನಮನದಿ ನೆಲೆಸಲಿಕೆ ಬಿಡಲಿಲ್ಲ ಹುಳುಕು

ಕಡೆಗಣಿಸಬೇಡಿ

ಅಡಿಗಡಿಗು ಕಡೆಗಣಿಸಿ ತುಳಿಯದಿರಿ ನಮ್ಮ
ಸಿಡಿದೆದ್ದು ಗುಡುಗುತ್ತ ಮುರಿದೇವು ತಮ್ಮ
ನೀವಿತ್ತಾ ಆ ನಿದ್ದೆಗುಳಿಗೆಗಳ ಎಸೆದು ಬರುತಿಹೆವು
ಈ ಕೆಂಪು ಬಾವುಟವ ಹಿಡಿದು

- ವಿಡಂಬಾರಿ

ಶರತ್‌ಚಂದ್ರ

ಲಾಲ್ ಮಸೀದಿ - ಜನರಲ್ ಮುಷರಫರ 'ಬ್ಲೂಸ್ಟಾರ್'?

ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಲಾಲ್ ಮಸೀದಿಯನ್ನು ಅತಿಕ್ರಮಿಸಿಕೊಂಡ ಜೆಹಾದಿ ಉಗ್ರವಾದಿಗಳ ಮೇಲೆ ಕೊನೆಗೂ ಜುಲೈ 10 ರಂದು ಮಿಲಿಟರಿ ಕಾರ್ಯಾಚರಣೆ ನಡೆಯಿತು. ಬಿಂದ್ರನ್‌ವಾಲೆ ನಾಯಕತ್ವದಲ್ಲಿ ಸಿಖ್ ಉಗ್ರವಾದಿಗಳು ಅತಿಕ್ರಮಿಸಿಕೊಂಡ ಸುವರ್ಣ ದೇವಾಲಯವನ್ನು ತೆರವು ಮಾಡಲು ನಡೆದ 'ಬ್ಲೂ ಸ್ಟಾರ್' ಕಾರ್ಯಾಚರಣೆ ನೆನಪಿಗೆ ತರುವಂಥದ್ದು ಈ ಘಟನೆ. ಎರಡೂ ಘಟನೆಗಳ ನಡುವೆ ಹಲವು ಸಾಮ್ಯಗಳಿವೆ. 80ಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡು, ನೂರಾರು ಜನ ಈ ಕಾರ್ಯಾಚರಣೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದಾರೆ. ಜೆಹಾದಿಗಳ ಮೇಲೆ 'ಉಗ್ರ' ಕಾರ್ಯಾಚರಣೆಗೆ ಅಮೇರಿಕದ ಶಹಭಶ್ ಗಿರಿ ಸಿಕ್ಕಿದೆ. ಪಾಕಿಸ್ತಾನದ ಪ್ರಮುಖ ಧರ್ಮಾತೀತ ಪಕ್ಷಗಳೂ ಇದನ್ನು ಬೆಂಬಲಿಸಿವೆ. ಆದರೆ ಈ ಘಟನೆ ಇದನ್ನು ನಡೆಸಿದ ರಾಜಕೀಯ-ಮಿಲಿಟರಿ ಬಾಸ್‌ಗಳ ಪ್ರತಿಷ್ಠೆ ಮತ್ತು ನಂಬಲರ್ಹತೆಗೆ ತೀವ್ರ ಘಾಸಿ ಮಾಡಿದೆ. ಜುಲೈ 3 ರಿಂದ ನಂತರದ ಗಂಭೀರ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಕ್ರಮ ಅನಿವಾರ್ಯವಾಗಿತ್ತು ಎಂಬುದು ಸರ್ವಸಮ್ಮತ ಅಭಿಪ್ರಾಯ.

ಇದು ಹೇಗೆ? ಯಾಕೆ?


ಆದರೆ ಇಂತಹ ಗಂಭೀರ ಪರಿಸ್ಥಿತಿ ನಿರ್ಮಾಣ ಹೇಗೆ ಮತ್ತು ಏಕಾಯಿತು ? ಅಧ್ಯಕ್ಷ ಮುಶರಫ್ ಅರಮನೆಗೆ, ಪ್ರಧಾನಿ ನಿವಾಸಕ್ಕೆ, ಮಿಲಿಟರಿ ಮುಖ್ಯ ಕಚೇರಿಗೆ - ಹತ್ತಿರವಿರುವ ಲಾಲ್ ಮಸೀದಿಯಲ್ಲಿ ಕಾನೂನು ವಿರುದ್ಧವಾಗಿ ಇಷ್ಟು ಪ್ರಮಾಣದಲ್ಲಿ ಮಾರಕಾಸ್ತ್ರಗಳು ಶೇಖರಣೆಯಾದ್ದು ಎಲ್ಲಿಂದ? ಇದು ಸರಕಾರಕ್ಕೆ, ಮಿಲಿಟರಿ ಗೂಢಚಾರರಿಗೆ ಗೊತ್ತಿರಲಿಲ್ಲವೇ ? ಜೆಹಾದಿ ನಾಯಕ ಸರಕಾರದ ಜತೆ (ಕಾರ್ಯಾಚರಣೆಯ ಮೊದಲು ನಡೆದ ವಿಫಲ ಮಾತುಕತೆಗಳಲ್ಲಿ) ಮಸೀದಿಯಲ್ಲಿದ್ದ ಯಾವ 'ವಿದೇಶಿ ಜೆಹಾದಿ'ಗಳು ಮುಕ್ತವಾಗಿ ಹೋಗಲು ಬಿಡಬೇಕೆಂದು ಷರತ್ತು ಹಾಕಿದ್ದು? ಈ ವಿದೇಶಿ ಜೆಹಾದಿಗಳು ಸರಕಾರದ ಮೂಗಿನ ಕೆಳಗೆ ಭಾರೀ ಶಸ್ತ್ರಾಸ್ತ್ರಗಳ ಜತೆ ಲಾಲ್ ಮಸೀದಿಯ ಒಳಗೆ ಸೇರಿಕೊಂಡದ್ದು ಹೇಗೆ ? ಕಳೆದ ಆರು ತಿಂಗಳಿಂದ ಯಾವುದೇ ಸರಕಾರ ಸಹಿಸದ ಪ್ರಚೋದನಾ ಕ್ರಮಗಳಲ್ಲಿ ತೊಡಗಿದ್ದ ಲಾಲ್ ಮಸೀದಿಯ ಜೆಹಾದಿಗಳ ಮೇಲೆ ಯಾಕೆ ಕ್ರಮ ಕೈಗೊಳ್ಳಲಿಲ್ಲ? ಜೆಹಾದಿಗಳು ಚೀನಿ ನಾಗರಿಕರನ್ನು ಅಪಹರಿಸಿ, ಚೀನಾದ ಸರಕಾರ ಪ್ರಬಲ ಪ್ರತಿಭಟನೆ ಸಲ್ಲಿಸದಿದ್ದರೆ ಈ ಕಾರ್ಯಾಚರಣೆ ನಡೆಯುತ್ತಿತ್ತೇ? ಇಂತಹ ಹಲವು ಪ್ರಶ್ನೆಗಳು ಏಳುತ್ತವೆ. ಇದಕ್ಕೆಲ್ಲಾ ಒಂದೇ ಸರಿಯಾದ ಉತ್ತರ - ಅಧ್ಯಕ್ಷ ಮುಶರಫ್ ಸೇರಿದಂತೆ ಪಾಕಿಸ್ತಾನದ ಮಿಲಿಟರಿ ನಾಯಕರು-ಸರ್ವಾಧಿಕಾರಿಗಳು (ಜನತೆಯ ಪ್ರಜಾಸತ್ತಾತ್ಮಕ ಆಶಯಗಳನ್ನು ಹತ್ತಿಕ್ಕಲು, ಅಫ್‌ಘಾನಿಸ್ತಾನದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಜತೆ ಸೋವಿಯೆಟ್- ವಿರೋಧಿ ಕೃತ್ಯಗಳಲ್ಲಿ ಬಳಸಲು) ಇಸ್ಲಾಮಿಕ್ ಮೂಲಭೂತವಾದಿಗಳ ಜತೆ ನಡೆಸಿದ ಚೆಲ್ಲಾಟ 'ಬ್ಯೂಮರಾಂಗ್' (ತಿರುಗೇಟು) ಆಗಿದ್ದಲ್ಲವೇ?

ದೃಢಕ್ರಮ ವಹಿಸಿರಲಿಲ್ಲ

ಕಳೆದ ಆರು ತಿಂಗಳಲ್ಲಿ ಲಾಲ್ ಮಸೀದಿ ಮತ್ತು ಅದಕ್ಕೆ ಸೇರಿದ ಎರಡು ಮದ್ರಸಾ (ಧಾರ್ಮಿಕ ಶಾಲೆ)ಗಳ ವಿದ್ಯಾರ್ಥಿಗಳು ರಾಜಧಾನಿಯಲ್ಲೇ ಕಾನೂನು-ಬಾಹಿರ ದಾಂಧಲೆ ನಡೆಸುತ್ತಿದ್ದರು. ಹಲವು ಅಂಗಡಿಗಳ ಮೇಲೆ 'ಅನೈತಿಕ' ಸೀಡಿ-ವಿಡಿಯೋಗಳನ್ನು ನಾಶ ಮಾಡುವ ಹೆಸರಲ್ಲಿ ಬೇಕಾಬಿಟ್ಟಿ ದಾಳಿ ಮಾಡಿದ್ದರು. 'ಅನೈತಿಕತೆ ತಡೆಯುವ' ಹೆಸರಲ್ಲಿ ಮಹಿಳೆಯರನ್ನು ಅಪಹರಿಸಿದ್ದರು. ಮಕ್ಕಳ ವಾಚನಾಲಯದ ಸರ್ಕಾರಿ ಕಟ್ಟಡವನ್ನು ತಿಂಗಳುಗಟ್ಟಲೆ ಅತಿಕ್ರಮಣ ಮಾಡಿತ್ತು. ಹದಿ ಹರೆಯದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಮದ್ರಸಾದಲ್ಲಿ ಈ ಬಿಕ್ಕಟ್ಟಿನ ಅವಧಿಯಲ್ಲಿ ಒತ್ತೆಯಾಳುಗಳಂತೆ ಕೂಡಿ ಹಾಕಲಾಗಿತ್ತು. ಇವೆಲ್ಲದರ ವಿರುದ್ಧ ಸರಕಾರ ಯಾವುದೇ ದೃಢ ಕ್ರಮ ಕೈಗೊಂಡಿರಲಿಲ್ಲ. 1965ರಲ್ಲಿ ಸ್ಥಾಪಿಸಲಾದ ಲಾಲ್ ಮಸೀದಿ ರಾಜಧಾನಿಯ ಮಹತ್ವದ ಮಸೀದಿಯಾಗಿದ್ದು ಅದರ ಇಮಾಮ ಮತ್ತು ಆಡಳಿತಕ್ಕೆ ಸರ್ಕಾರ ಭಾರಿ ಮಹತ್ವ ಮತ್ತು ಸವಲತ್ತುಗಳನ್ನು ಒದಗಿಸುತ್ತಿತ್ತು. ಅದರ ಸ್ಥಾಪಕ ಇಮಾಮ್ ಆಸ್ತಿ ವಿವಾದವೊಂದರಲ್ಲಿ ಕೊಲೆಯಾದ ನಂತರ, ಅವನ ಮಕ್ಕಳು ಅಜೀಜ್ ಮತ್ತು ಗಾಜೀ ಮಸೀದಿಯ ಆಡಳಿತ ವಹಿಸಿಕೊಂಡಿದ್ದರು. ಅಜೀಜ್ ಮಡದಿ ಮಸೀದಿಯ ಭಾಗವಾಗಿದ್ದ ಮಹಿಳಾ 'ಕಾಲೇಜ'ನ ಪ್ರಿನ್ಸಿಪಾಲ್ ಆಗಿದ್ದಳು. ಆಕೆ ಮತ್ತು ಗಾಜೀ ಕಾರ್ಯಾಚರಣೆಯಲ್ಲಿ ಸತ್ತಿದ್ದಾರೆ.

ಇದೆಲ್ಲಾ 'ಆಶೀರ್ವಾದವಿಲ್ಲದೆ' ಸಾಧ್ಯವಿರಲಿಲ್ಲ

ಇವರ ಆಡಳಿತದಲ್ಲೇ ಮತ್ತು ಅದರ




ಜನರಲ್ ಮುಷರ್ರಫ್

ಭಾಗವಾಗಿದ್ದ ಎರಡು ಮದ್ರಸಾಗಳ ಪ್ರತಿಷ್ಠೆ ಬಳಸಿ ಮಸೀದಿಯನ್ನು, ರಾಜಧಾನಿಯಲ್ಲಿ ಜೆಹಾದಿಗಳ ಮತ್ತು ತಾಲಿಬಾನಿಗಳ ತಂಗುದಾಣವಾಗಿ ಪರಿವರ್ತಿಸಲಾಯಿತು. ಇದು ಇಂದಿನ ಹಿಂದಿನ ಸರಕಾರ ಮತ್ತು ಮಿಲಿಟರಿ ನಾಯಕರ ಕೈವಾಡ ಅಥವಾ ಆಶೀರ್ವಾದವಿಲ್ಲದೆ ಸಾಧ್ಯವೇ ಇರಲಿಲ್ಲ. ಇತ್ತೀಚೆಗೆ ಇವರಿಬ್ಬರು ಮಿಲಿಟರಿ ಸರಕಾರಕ್ಕೂ ಕೇರ್ ಮಾಡದಷ್ಟು ಧಾಷ್ಟ್ಯ ಬೆಳೆಸಿಕೊಂಡಿದ್ದರು. ಇವರು ರಾಜಧಾನಿಯಲ್ಲಿ ಕಾನೂನು ಬಾಹಿರವಾಗಿ ಭೂಅತಿಕ್ರಮಣ ನಡೆಸಿ ಕಟ್ಟಿದ ಎಂಟು ಮಸೀದಿಗಳನ್ನು ನಗರ ಮುನಿಸಿಪಾಲಿಟಿ ಕೆಡವಿದಾಗ ಅಜೀಜ್ ಮತ್ತು ಗಾಜೀ ಶಿಷ್ಯರು ಭಾರೀ ಧಾಂದಲೆ ಎಬ್ಬಿಸಿದ್ದರು. ಆಗ ಪ್ರಧಾನಿ ಒತ್ತಡಕ್ಕೆ ಮಣಿದು ಸರ್ಕಾರೀ ವೆಚ್ಚದಲ್ಲಿ ಮಸೀದಿಗಳನ್ನು ಕಟ್ಟಿಸಲಾಗುವುದು ಎಂದು ಭರವಸೆ ನೀಡಿದ್ದರು. ಇದು ಅವರಿಗೆ ಕುಮ್ಮಕ್ಕು ನೀಡಿದಂತಾಗಿತ್ತು. ಜೆಹಾದಿಗಳ (ಲಾಲ್ ಮಸೀದಿಯವರು ಸೇರಿದಂತೆ) ಬೇಕಾಬಿಟ್ಟಿ ಹಿಂಸಾಚಾರ ಮತ್ತು ದಾಂಧಲೆಗಳಿಂದ ರೋಸಿ ಹೋಗಿದ್ದ ಜನ ಮೇ ತಿಂಗಳಲ್ಲಿ ಭಾರೀ ಪ್ರದರ್ಶನ ನಡೆಸಿದ್ದರು. ಕರಾಚಿಯಲ್ಲಿ ನಡೆದ ಪ್ರದರ್ಶನ ಅತಿ ದೊಡ್ಡದಾಗಿದ್ದು, ಇದರಲ್ಲಿ ಮುಶರಫ್ ಬೆಂಬಲಿಸುವ ಎಂ.ಕ್ಯೂ.ಎಂ. ದೊಡ್ಡ ಪಾತ್ರ ವಹಿಸಿತ್ತು. ಆದರೂ ಸರಕಾರ ಯಾವುದೇ ಉಗ್ರ ಕ್ರಮ ಕೈಗೊಂಡಿರಲಿಲ್ಲ. ಕಾರ್ಯಾಚರಣೆಯ ಮೊದಲು ನಡೆದ ವಿಫಲ ಮಾತುಕತೆಗಳಲ್ಲಿ ಸರಕಾರ ಅಜೀಜ್ ಮತ್ತು ಗಾಜೀ ಗ್ಯಾಂಗ್ ನ ಹಲವು ವಿಚಿತ್ರ ಷರತ್ತುಗಳಿಗೆ ಒಪ್ಪಿಕೊಂಡಿತ್ತು. ಗಾಜೀಯನ್ನು ಬಂಧಿಸದೆ ಇರುವುದು, ವಿದೇಶೀ ಜೆಹಾದಿಗಳನ್ನು ಮುಕ್ತವಾಗಿ ಹೋಗಲು ಬಿಡುವುದು - ಇತ್ಯಾದಿ ಆ ಶರತ್ತುಗಳು ಎನ್ನಲಾಗಿದೆ. ಮಿಲಿಟರಿ ಮಸೀದಿಯ ಒಳಗೆ ನುಗ್ಗಿದರೆ ಸಾವಿರಾರು ಆತ್ಮಹತ್ಯಾ ದಳಗಳು ಇಡೀ ಪಾಕಿಸ್ತಾನ ಹತ್ತಿ ಉರಿಯುವಂತೆ ಮಾಡುತ್ತವೆ ಎಂದು ಗಾಜೀ ಬೆದರಿಸಿದ್ದ. ಇದೇ ಕಾರಣ ಮುಂದೆ ಮಾಡಿ ಸರಕಾರ ಉಗ್ರ ಕಾರ್ಯಾಚರಣೆಗೆ ಹಿಂದೇಟು ಹಾಕಿತ್ತು. ಆದರೆ ಕೆಲವು ಕಡೆ ಧಾರ್ಮಿಕ-ಮೂಲಭೂತವಾದಿ ಪಕ್ಷಗಳ ಕಾರ್ಯಕರ್ತರು ಬಿಟ್ಟರೆ, ಮಹಾ ಪ್ರತಿಭಟನೆ ನಡೆಯಲಿಲ್ಲ. ವೀರಾವೇಶದಿಂದ ಮಾತಾಡುತ್ತಿದ್ದ ಅಜೀಜ್ ಸಹ ಕಾರ್ಯಾಚರಣೆಯ ಸಮಯದಲ್ಲಿ ಮಹಿಳಾ ವೇಷದಲ್ಲಿ ಓಡಿ ಹೋಗಲು ಪ್ರಯತ್ನಿಸಿದಾಗ ಬಂಧಿಸಲಾಯಿತು. ಸರಕಾರ ಮೊದಲೇ ದೃಢ ಕ್ರಮ ಕೈಗೊಂಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂಬುದು ಸ್ಪಷ್ಟ. ಕಾರ್ಯಾಚರಣೆಗೆ ನಿರ್ಧರಿಸಿದ ಮೇಲೂ ಸರಕಾರ ಅದಕ್ಕೆ ಬೇಕಾದ ಸಿದ್ಧತೆ ಮಾಡದೆ, ಹಲವು ತಪ್ಪುಗಳಾದವು.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರ ವಜಾ ಪ್ರಕರಣದ ವಿರುದ್ಧ ಭಾರೀ ಪ್ರತಿಭಟನೆ ತಂದಿಟ್ಟ ಕಷ್ಟಕರ ರಾಜಕೀಯ ಸ್ಥಿತಿ ಮತ್ತು ಮುಂದಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಮೂಲಭೂತವಾದಿ ಪಕ್ಷಗಳ ಬೆಂಬಲ ಉಳಿಸಿಕೊಳ್ಳಲು ಅಧ್ಯಕ್ಷ ಮುಶರಫ್ ರ ಹತಾಶ ಪ್ರಯತ್ನವೇ ಇದಕ್ಕೆ ಕಾರಣ. ಇದರಿಂದಾಗಿ ಮುಂದೆನೂ ಮುಶರಫ್ ಸರಕಾರ ಜೆಹಾದಿ-ತಾಲಿಬಾನಿಗಳ ವಿರುದ್ಧ ದೃಢ ಕ್ರಮ ಕೈಗೊಳ್ಳುವ ಬಗ್ಗೆ ತೀವ್ರ ಅನುಮಾನಗಳಿವೆ. ಮಿಲಿಟರಿ ಸರ್ಕಾರ ಮತ್ತು ಜೆಹಾದಿಗಳು ಶಾಮೀಲಾಗಿ ಜನರ ಗಮನ ಬೇರೆಡೆ ಸೆಳೆಯುವ ಮತ್ತು ಪ್ರಜಾಪ್ರಭುತ್ವ ದುರ್ಬಲಗೊಳಿಸುವುದನ್ನು ಮನಗಾಣುತ್ತಾರೆ ಎಂದು ಆಶಿಸಬೇಕಾಗಿದೆ.





ಸೈನಿಕ ಕಾರ್ಯಾಚರಣೆ

ಮೈಕೊ ಚುನಾವಣೆ : ಮಿಶ್ರ ಫಲ

ಬೆಂಗಳೂರಿನ ಮೈಕೋ ಕಾರ್ಖಾನೆ ಎಂದರೆ, ಅಲ್ಲಿ ಕಾರ್ಮಿಕ ಸಂಘದ ಚುನಾವಣೆ ಎಂದರೆ ಇಡೀ ರಾಜ್ಯಾದ್ಯಂತ ಕುತೂಹಲ. 80ರ ದಶಕದಲ್ಲಿ ಕಾಂ: ಸೂರ್ಯನಾರಾಯಣ ರಾವ್‌ಅವರ ನೇತೃತ್ವದಲ್ಲಿ ನಡೆದ ಕಾರ್ಮಿಕ ಚಳುವಳಿ ಅಂದಿನ ಜನರಲ್ಲಿ ಇಂದಿಗೂ ಹಸಿರಾಗಿದೆ.

ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕಾರ್ಮಿಕ ಸಂಘಟನೆಯನ್ನು ಕಟ್ಟಿ ಬೆಳೆಸಿದ ದುರ್ಗಮ ಹೋರಾಟದ ದಾರಿ ಈ ಕಾರ್ಖಾನೆಯ ಚಳುವಳಿಯದ್ದು. ಜುಲೈ 5, 2007ರಂದು ಈ ಕಾರ್ಮಿಕ ಸಂಘಕ್ಕೆ ಚುನಾವಣೆ ನಡೆಯಿತು. ಎರಡು ವರ್ಷಗಳ ಹಿಂದೆ ನಡೆದ ಚುನಾವಣೆಯಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಸಿಐಟಿಯು ವಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿಜೆಕೆ ನಾಯರ್ ಮತ್ತು ಸಿಐಟಿಯು ಬೆಂಬಲಿತ ತಂಡ ವಿಜಯಗಳಿಸಿತ್ತು. ಉತ್ತಮ ವೇತನ ಒಪ್ಪಂದ ಸೇರಿದಂತೆ ಹಲವು ಉತ್ತಮ ಸಾಧನೆಗಳನ್ನು ಮಾಡಲಾಗಿತ್ತು.

ಕೆಲವು ಸಂಘಟನಾತ್ಮಕವಾದ ದೌರ್ಬಲ್ಯಗಳು, ಇತರೆ ಕಾರಣಗಳಿಂದಾಗಿ ಈ ಹಿಂದಿನ ಮಟ್ಟದ ಸಾಧನೆ ಈ ಚುನಾವಣೆಯಲ್ಲಿ ಸಾಧ್ಯವಾಗಿಲ್ಲ. ಆದರೆ ಸಿಐಟಿಯು ಬೆಂಬಲಿತ ತಂಡಕ್ಕೆ ಮಿಶ್ರಫಲ ಸಿಕ್ಕಿದೆ.

ಮೈಕೋ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಸ್ಪರ್ಧಿಸಿದ್ದ ಶಿವಶಂಕರ್ 783 ಮತಗಳಿಸಿ ಪುನರಾಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಐಎನ್‌ಟಿಯುಸಿ ಪರವಾಗಿ ಸ್ಪರ್ಧಿಸಿದ ಎಸ್.ಎನ್.ಶಿವಣ್ಣ 782 ಮತಗಳಿಸಿ ಆಯ್ಕೆಯಾಗಿದ್ದಾರೆ. ಕಾಂ. ವಿಜೆಕೆ. ನಾಯರ್‌ರವರು 775 ಮತಗಳನ್ನು (ಅಲ್ಪ ಅಂತರದ ವ್ಯತ್ಯಾಸ)ಗಳಿಸಿದ್ದಾರೆ.

ಇದಲ್ಲದೆ 54 ಸದಸ್ಯರಿರುವ ಜನರಲ್ ಕೌನ್ಸಿಲ್‌ಗೆ ಸಿಐಟಿಯು ಬೆಂಬಲಿತ ಆನೆ ತಂಡದಿಂದ 32 ಜನರು ಆಯ್ಕೆಯಾಗಿದ್ದಾರೆ. ಕ್ಯಾಂಟೀನ್ ಸಮಿತಿಯ 4 ಸ್ಥಾನಗಳಲ್ಲಿ 2 ಸ್ಥಾನವನ್ನು ಆನೆ ತಂಡ ಗೆದ್ದಿದೆ. 20 ಜನ ಕಾರ್ಯಕಾರಿ ಸಮಿತಿಯಲ್ಲಿ 9 ಜನ ಸಿಐಟಿಯು ಬೆಂಬಲಿಗರು ಗೆದ್ದಿದ್ದಾರೆ.

ಪ್ರಜಾಸತ್ತಾತ್ಮಕ ಚುನಾವಣಾ ಫಲಿತಾಂಶವನ್ನು ಸಕಾರಾತ್ಮಕವಾಗಿ ಸ್ವೀಕರಿಸಿರುವ ತಂಡವು ಸಂಘಟನೆಯನ್ನು ಬಲಪಡಿಸಿಕೊಂಡು ಕಾರ್ಮಿಕ ವರ್ಗದ ಹಿತ ರಕ್ಷಣೆಗಾಗಿ ಮತ್ತಷ್ಟು ಶ್ರಮ ವಹಿಸಲು ನಿರ್ಧರಿಸಿದೆ.

ಮಾನವ ಮಲ ಹೊರುವ ಪದ್ಧತಿ ನಿರ್ಮೂಲನಕ್ಕೆ ಚಳುವಳಿ

ಜೂನ್ 12 ರಂದು ತಮಿಳುನಾಡಿನ ರಾಜಧಾನಿ ಚೆನ್ನೈನಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು. ಇದೊಂದು ವಿಶಿಷ್ಟ ರ್‍ಯಾಲಿ. ತಲೆಯ ಮೇಲೆ ಮಲ ಹೊರುವ, ಸ್ಮಶಾನಗಳಲ್ಲಿ ಕೆಲಸ ಮಾಡುವ, ಚಪ್ಪಲಿ, ಜಾಡಮಾಲಿ ಇತ್ಯಾದಿ ಹೀನ ಎಂದೆನಿಸಿಕೊಂಡಿರುವ ಕೆಲಸಗಳಲ್ಲಿ ತೊಡಗಿರುವ 25 ಸಾವಿರ ಜನ ಇದರಲ್ಲಿ ಭಾಗವಹಿಸಿದ್ದರು. ಅರುಂಧತಿಯಾರ್, ಆದಿ ಆಂಧ್ರ ಇತ್ಯಾದಿ ದಲಿತ ಜಾತಿಗಳಿಗೆ ಸೇರಿದ ಇವರನ್ನು ಅವರಿರುವ ಹೀನ ಪರಿಸ್ಥಿತಿಯಿಂದ ಹೊರತರಬೇಕು, ತಲೆಯ ಮೇಲೆ ಮಲಹೊರುವ ಪದ್ಧತಿಯನ್ನು ನಿರ್ಮೂಲ ಮಾಡಬೇಕು ಎಂಬುದು ಈ ರ್‍ಯಾಲಿಯ ಪ್ರಮುಖ ಬೇಡಿಕೆಯಾಗಿತ್ತು. ಸಿಪಿಐ(ಎಂ) ಈ ರ್‍ಯಾಲಿಯನ್ನು ಸಂಘಟಿಸಿತ್ತು. ಒಂದು ರಾಜಕೀಯ ಪಕ್ಷ ದಲಿತರ ಈ ಪ್ರಶ್ನೆಗಳನ್ನು ಎತ್ತಿಕೊಂಡು ಚಳುವಳಿ ನಡೆಸುತ್ತಿರುವುದು ಇದೇ ಮೊದಲು ಎಂದು ಹೇಳಲಾಗಿದೆ.



ಅಧಿಕಾರಿಗಳು ಕೊಟ್ಟ ಸಂಖ್ಯೆ

ಸರಕಾರೀ ಅಧಿಕಾರಿಗಳ ಪ್ರಕಾರ ತಮಿಳುನಾಡಿನಲ್ಲಿ ಈಗ ತಲೆಯ ಮೇಲೆ ಮಲಹೊರುತ್ತಿರವವರ ಸಂಖ್ಯೆ 'ಕೇವಲ' ಆರು ಸಾವಿರ. ಆದರೆ ವಿವಿಧ ಜಿಲ್ಲೆಗಳಲ್ಲಿ ನಡೆಸಿದ ಸರ್ವೆಗಳಲ್ಲಿ ಕಂಡುಬಂದದ್ದೇ ಬೇರೆ. ಗ್ರಾಮ ಪಂಚಾಯತುಗಳಲ್ಲಿ, ಆಸ್ಪತ್ರೆಗಳಲ್ಲಿ, ಖಾಸಗೀ ಸಂಸ್ಥೆಗಳಲ್ಲಿ, ಮನೆಗಳಲ್ಲಿ, ರೈಲ್ವೇ ಮತ್ತಿತರ ಸ್ಥಳಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ಈ ಕೆಲಸಗಳಲ್ಲಿ ತೊಡಗಿದ್ದಾರೆ. ವಿವಿಧ ಯಾತ್ರಾಸ್ಥಳಗಳಲ್ಲಿ ಉತ್ಸವ ಇತ್ಯಾದಿ ಬಹಳ ಜನ ಸೇರುವ ಸಂದರ್ಭಗಳಲ್ಲಿ ಬಯಲು ಪ್ರದೇಶಗಳನ್ನು ಶೌಚಾಲಯಗಳಾಗಿ ಬಳಸಲಾಗುತ್ತದೆ. ಇವುಗಳನ್ನು ಶುಚಿಗೊಳಿಸುವ ಕೆಲಸಗಳಲ್ಲಿ ಹಲವಾರು ಜನ ದುಡಿಯುತ್ತಿದ್ದಾರೆ. ರಾಜ್ಯದಲ್ಲಿ ಸುಮಾರು 80 ಲಕ್ಷ ಮನೆಗಳಲ್ಲಿ ಆಧುನಿಕ ಶೌಚಾಲಯಗಳಿಲ್ಲ. ಇಲ್ಲಿಯೂ ಮಾನವ ಮಲವನ್ನು ತೆಗೆಯುವ ಕೆಲಸವನ್ನು ಮನುಷ್ಯರೇ ಮಾಡುತ್ತಾರೆ. ಆದರೆ ಇವರೆಲ್ಲಾ ಕೆಲವು ನಿರ್ದಿಷ್ಟ ದಲಿತ ಸಮುದಾಯಗಳಿಗೆ ಸೇರಿದವರೆಂದು ಬೇರೆ ಹೇಳಬೇಕಾಗಿಲ್ಲ.

ಸಿಪಿಐ(ಎಂ) ಈ ಬಗ್ಗೆ ರಾಜ್ಯದಲ್ಲಿ ದೀರ್ಘಕಾಲದಿಂದ ದನಿ ಎತ್ತುತ್ತಾ ಬಂದಿದೆ. ಇತ್ತೀಚೆಗೆ ಜಿಲ್ಲಾಮಟ್ಟದಲ್ಲಿ ಸರ್ವೆಗಳನ್ನು ನಡೆಸಿ ಮೂರು ಕೇಂದ್ರಗಳಲ್ಲಿ ಸಮ್ಮೇಳನಗಳನ್ನು ಅದು ಸಂಘಟಿಸಿತು. ವಿರುಧನಗರದಲ್ಲಿ 5000, ದಿಂಡಿಗಲ್‌ನಲ್ಲಿ 6000 ಹಾಗೂ ನಾಮಕ್ಕಲ್‌ನಲ್ಲಿ 2000 ಜನ ಈ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಇಲ್ಲಿ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿರ್ಮೂಲ ಮಾಡಬೇಕಾದ ತುರ್ತು ಆವಶ್ಯಕತೆ ಸ್ಪಷ್ಟವಾಗಿ ಕಂಡು ಬಂತು. ನಿಜವಾಗಿಯೂ ಇದೊಂದು ಅತ್ಯಂತ ಅಮಾನವೀಯ ಪದ್ಧತಿ.

ಜೂನ್ 12ರ ರ್‍ಯಾಲಿಗೆ ಪೂರ್ವಭಾವಿಯಾಗಿ ಒಂದೆಡೆ ಅಧ್ಯಯನಗಳನ್ನು, ಇನ್ನೊಂದೆಡೆ ದಲಿತ ಸಮುದಾಯಗಳ ನಡುವೆ ಪ್ರಚಾರ ಕಾರ್ಯವನ್ನು ಕೈಗೊಂಡಿತು. ಸ್ಥಳೀಯ ಮಟ್ಟಗಳಲ್ಲಿ ವಿವಿಧ ಸಂಘಟನೆಗಳೂ ಇದರಲ್ಲಿ ಭಾಗವಹಿಸಿದವು. ಸಿಪಿಐ(ಎಂ)ನ ವಿವಿಧ ಜಿಲ್ಲಾ ಸಮಿತಿಗಳು ಇದಕ್ಕೆ ವಿಶೇಷ ಆದ್ಯತೆ ನೀಡಿದವು. ಮೇಲೆ ಹೇಳಿದ ಮೂರು ಸಮ್ಮೇಳನಗಳಲ್ಲಿ ಮತ್ತು ಮುಖಂಡರ ಸಭೆಗಳಲ್ಲಿ ಮುಖ್ಯ ಬೇಡಿಕೆಗಳನ್ನು ರೂಪಿಸಲಾಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎನ್.ವರದರಾಜನ್ ಹಾಗೂ ಇನ್ನೊಬ್ಬ ಮುಖಂಡರಾದ ಟಿ ಕೆ ರಂಗರಾಜನ್ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಬೇಡಿಕೆಗಳನ್ನು ಸಲ್ಲಿಸಿದರು. ಕರುಣಾನಿಧಿಯವರು ಈ ಅಮಾನವೀಯ ಪರಿಸ್ಥಿತಿಗಳಲ್ಲಿ ಬದುಕುತ್ತಿರುವ ಸಮುದಾಯಗಳಿಗೆ ಪರಿಹಾರ ನೀಡುವ ಕ್ರಮಗಳನ್ನು ತಕ್ಷಣವೇ ಪ್ರಕಟಿಸಬೇಕು ಎಂದು ಆಗ್ರಹ ಪಡಿಸಿದರು.

ರ್‍ಯಾಲಿಯ ನಂತರ ಸರಕಾರ ಮಲ ಹೊರುವ ಕೆಲಸದಲ್ಲಿ ತೊಡಗಿರುವವರ ಪುನರ್ವಸತಿಗಾಗಿ ಒಂದು ಕಲ್ಯಾಣ ಮಂಡಳಿಯನ್ನು ರಚಿಸುವುದಾಗಿ ಪ್ರಕಟಿಸಿತು. ಇಬ್ಬರು ಸಿಪಿಐ(ಎಂ) ಮುಖಂಡರನ್ನು ಈ ಮಂಡಳಿಯಲ್ಲಿ ಸೇರಿಸಲಾಗಿದೆ. ಕ್ರಮೇಣ ಈ ಪದ್ಧತಿಯನ್ನು ನಿರ್ಮೂಲ ಮಾಡುವುದಾಗಿ ಸರಕಾರ ಒಪ್ಪಿಕೊಂಡಿದೆ, ಈ ವರ್ಷ ಈ ಉದ್ದೇಶಕ್ಕಾಗಿ 84ಕೋಟಿ ರೂಪಾಯಿ ಇಡಲಾಗಿದೆ. ○

ಜಾರ್ಖಂಡಿಗಳ ಕೊಲೆ ರಾಜಕೀಯ

ಬಂಗಾಲದಲ್ಲೀಗ ಒಂದು ಭೀಷಣ ವರ್ಗ ಹೋರಾಟ ಒಳಗೊಳಗೇ ನಡೆಯುತ್ತಿರುವಂತಿದೆ. ನಗರಗಳು ಮತ್ತು ಗ್ರಾಮೀಣ ಪ್ರದೇಶದ ಪಟ್ಟಭದ್ರ ಹಿತಾಸಕ್ತಿಗಳು ಪ್ರಾಯೋಜಿಸುವ ರಾಜಕೀಯ ರಚನೆಗಳು ಮತ್ತೆ ಮತ್ತೆ ಧಾಳಿ ನಡೆಸುತ್ತಿವೆ. ಸಾಮಾನ್ಯವಾಗಿ ಸಿಪಿಐ(ಎಂ) ಕಾರ್ಯಕರ್ತರೇ ಅವರ ಗುರಿ. ಬಂಡವಾಳಶಾಹಿ ಮಾಧ್ಯಮ ಇಂತಹ ಘಟನೆಗಳನ್ನು ಉಪೇಕ್ಷಿಸುತ್ತವೆ.

ಇತ್ತೀಚೆಗೆ ಮಿದ್ನಾಪುರ ಜಿಲ್ಲೆಯ ಜಾರಗ್ರಾಮದ 38 ವರ್ಷದ ಬಿಕಾಶ್ ಮೈತಿ ಎಂಬಾತನನ್ನು ಸಾಯಂಕಾಲ ಮನೆಗೆ ಮರಳುವಾಗ ಜಾರ್ಖಂಡಿಗಳು ಆತನ ಮೇಲೆರಗಿ ಮಾರಕಾಸ್ತ್ರಗಳಿಂದ ಹೊಡೆದು ಸಾಯಿಸಿದರು. ನಾಲ್ಕು ದಿನಗಳ ನಂತರ ಅದೇ ಜಿಲ್ಲೆಯ ಜಂಬಾನಿಯಲ್ಲಿ ಡಿವೈಎಫ್‌ಐ ಕಾರ್ಯಕರ್ತ ಶೇಕ್ ಸಿದ್ದಿಕಿಯನ್ನು ಆತ ಪ್ರಯಾಣಿಸುತ್ತಿದ್ದ ಬಸ್ಸಿನೊಳಗೆ ನುಗ್ಗಿ ಹೊರದಬ್ಬಿದ ಜಾರ್ಖಂಡಿಗಳು ಗುಂಡಿಕ್ಕಿ ಕೊಂದು ಓಡಿಹೋದರು. ಎರಡು ದಿನಗಳ ನಂತರ ಅದೇ ಊರಿನಲ್ಲಿ ಇನ್ನೊಬ್ಬ ಸಿಪಿಐ(ಎಂ) ಕಾರ್ಯಕರ್ತ ಅನಿಲ್ ರಾಣಾನನ್ನು ಆತ ಮನೆಗೆ ಹಿಂದಿರುಗುತ್ತಿದ್ದಾಗ ಸುತ್ತುವರಿದು ಅಮಾನುಷವಾಗಿ ಗುಂಡಿಕ್ಕಿ ಕೊಂದರು. ಮಾವೋವಾದಿಗಳೆನ್ನುವವರ ಸಶಸ್ತ್ರ ಬೆಂಬಲವೂ ಅವರಿಗಿತ್ತು.

ಪಶ್ಚಿಮ ಮಿದ್ನಾಪುರದಲ್ಲಿ ಸುಪಾರಿ ಹಂತಕರಿಗೆ ಜಾರ್ಖಂಡಿ ಮುಖಂಡರ ಮನೆಗಳಲ್ಲಿ ಆಶ್ರಯ ನೀಡಿ ಸಿಪಿಐ(ಎಂ) ಕಾರ್ಯಕರ್ತರನ್ನು ಮುಗಿಸುವ ಹುನ್ನಾರ ನಡೆದಿದೆ ಎಂದು ಹೇಳಲಾಗುತ್ತಿದೆ. ಸ್ಥಳೀಯ ಜಾರ್ಖಂಡಿ ಶಾಸಕ ಇದರಲ್ಲಿ ನೆರವಾಗುತ್ತಿದ್ದಾನೆ ಎಂದೂ ನಂಬಲಾಗಿದೆ. ಇದರ ವಿರುದ್ಧ ಪಶ್ಚಿಮ ಮಿದ್ನಾಪುರದ ಜಿಲ್ಲೆಯಾದ್ಯಂತ ಒಂದು ತಿಂಗಳು ಪ್ರಚಾರಾಂದೋಲನ ನಡೆಯುತ್ತಿದೆ.

ಬಿಹಾರದಲ್ಲಿ ಭೂ ಹೋರಾಟದ ಹೊಸ ಘಟ್ಟ

ನಿತೀಶ್ ಕುಮಾರ್ ನೇತೃತ್ವದ ಜೆಡಿಯು-ಬಿಜೆಪಿ ಸರಕಾರ ಬಂದ ನಂತರ ಬಿಹಾರದಲ್ಲಿ ಬಡವಿಭಾಗಗಳ ಮೇಲೆ ಪಾಳೇಗಾರಿ ಶಕ್ತಿಗಳ ಮತ್ತು ಅವರ ಕ್ರಿಮಿನಲ್‌ಗಳ ಧಾಳಿಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿ ಈಗ ಭೂಹೀನ ಮತ್ತು ಬಡರೈತರ ಹೋರಾಟದ ಹೊಸ ಘಟ್ಟ ಆರಂಭವಾಗಿದೆ. ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಬಿಹಾರ ರಾಜ್ಯ ಕಿಸಾನ್ ಮಂಡಳಿ ಜೂನ್ 14 ರಂದು ಪೂರ್ಣಿಯಾದಲ್ಲಿ ಏರ್ಪಡಿಸಿದ 'ರಾಜ್ಯಮಟ್ಟದ ಒಕ್ಕಲೆಬ್ಬಿಸುವಿಕೆ-ವಿರೋಧಿ ಸಮಾವೇಶ'ದೊಂದಿಗೆ ಇದು ಆರಂಭವಾಗಿದೆ.

ಜೂನ್ 14 ಬಿಹಾರದ ಜನಪ್ರಿಯ ರೈತ ಮುಖಂಡ ಹಾಗೂ ಪೂರ್ಣಿಯಾದಿಂದ ಸಿಪಿಐ(ಎಂ) ಶಾಸಕರೂ ಆಗಿದ್ದ ಅಜಿತ್ ಸರ್ಕಾರ್ ಹುತಾತ್ಮರಾದ ದಿನ. ಒಂಭತ್ತು ವರ್ಷಗಳ ಹಿಂದೆ 1998ರಲ್ಲಿ ಭೂಮಾಲಕರು ಸಾಕಿರುವ ಕ್ರಿಮಿನಲ್‌ಗಳು ಅವರನ್ನು ಅಮಾನುಷವಾಗಿ ಹತ್ಯೆಗೈದಿದ್ದರು. ಅವರ ಪ್ರತಿಮೆಗೆ ಎಐಕೆಎಸ್ ಅಧ್ಯಕ್ಷ ಎಸ್. ರಾಮಚಂದ್ರನ್ ಪಿಳ್ಳೆ ಮತ್ತು ಇತರ ಮುಖಂಡರು ಹೂಮಾಲೆ ಅರ್ಪಿಸಿದ ನಂತರ ನಡೆದ ಸಮಾವೇಶ 90ರ ದಶಕದ ಭೂಹೋರಾಟಗಳಲ್ಲಿ ಭೂಹೀನ ಮತ್ತು ಬಡರೈತರು ಆಕ್ರಮಿಸಿಕೊಂಡ ಭೂಮಿತಿ ಮೀರಿದ ಅಥವಾ ಸರಕಾರಿ ಭೂಮಿಯಿಂದ ಒಕ್ಕಲೆಬ್ಬಿಸುವುದನ್ನು ಸಕಲ ಸಂಘಟನಾ ಶಕ್ತಿಯನ್ನು ಉಪಯೋಗಿಸಿ ವಿರೋಧಿಸುವ ಪ್ರತಿಜ್ಞೆಗೈಯಲಾಯಿತು. ಅಲ್ಲದೆ ಭೂಹೀನ ಮತ್ತು ಬಡರೈತರಿಗೆ ಪಟ್ಟಾ, ಮನೆನಿವೇಶನ ಹಾಗೂ ಭಾಗ ಬೆಳೆಗಾರರ ನೋಂದಣಿ ಮತ್ತು ರಕ್ಷಣೆಯ ಬೇಡಿಕೆಗಳನ್ನು ಮುಂದಿಡಲಾಗಿದೆ. ವೈಶಾಲಿ, ನಳಂದಾ, ಸಿವಾನ್ ಹಾಗೂ ಚಂಪಾರಣ್‌ಗಳಲ್ಲಿ ಒಕ್ಕಲೆಬ್ಬಿಸುವುದಕ್ಕೆ ವಿರೋಧವನ್ನು ಹೊಸ ಚೈತನ್ಯ ಹಾಗೂ ಶಕ್ತಿಯೊಂದಿಗೆ ಮುಂದುವರೆಸಲು ನಿರ್ಧರಿಸಲಾಯಿತು.

ಈ ಸಮಾವೇಶ ಭೂಹೀನ ಮತ್ತು ಬಡರೈತರ ಇತರ ಬೇಡಿಕೆಗಳಾದ ಬಿಪಿಎಲ್ ಪಟ್ಟಿ ಸರಿಪಡಿಕೆ, ಕೆಲಸದ ಕಾರ್ಡ್, ಉದ್ಯೋಗ ಖಾತರಿ ಕಾನೂನಡಿ ಕೆಲಸ ಮತ್ತು ಸರಿಯಾದ ಕೂಲಿ, ಸಾಲ, ರಸಗೊಬ್ಬರ, ಬೀಜ, ನೀರಾವರಿ, ಬೆಳೆ ವಿಮೆ, ರೇಶನ್ ವ್ಯವಸ್ಥೆಯನ್ನು ಬಲಪಡಿಸುವಿಕೆ, ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಅನುಷ್ಠಾನ, ಬೆಲೆಯೇರಿಕೆ ತಡೆ ಇತ್ಯಾದಿಗಳನ್ನು ಕೂಡಾ ಕೈಗೆತ್ತಿಕೊಳ್ಳಲು ನಿರ್ಧರಿಸಿತು. ಆಗಸ್ಟ 7 ರಂದು ಬ್ಲಾಕ್ ಕಚೇರಿಗಳು ಮತ್ತು ಆಗಸ್ಟ್ 20ರಂದು ಜಿಲ್ಲಾ ಮುಖ್ಯಾಲಯಗಳಲ್ಲಿ ಮತಪ್ರದರ್ಶನ, ಘೇರಾವ್ ಇತ್ಯಾದಿಗಳನ್ನು ನಡೆಸಲಾಗುವುದು.

ಈ ರಾಜ್ಯದಲ್ಲಿ ಭೂಸುಧಾರಣೆಗಳನ್ನು ಮಾಡಲು ಯಾವ ಕ್ರಮವನ್ನೂ ಕೈಗೊಂಡಿಲ್ಲ. 1970-71ರ ಜನಗಣತಿ ಪ್ರಕಾರ ಭೂಮಿತಿಗೆ ಮೀರಿದ 17ಲಕ್ಷ ಎಕರೆ ಜಮೀನು ಇದೆ. ಬಹುಪಾಲು 200 ಎಕ್ರೆಗೂ ಹೆಚ್ಚು ಜಮೀನು ಹೊಂದಿರುವ ಭೂಮಾಲಕರ ಕೇಸುಗಳು ಕೋರ್ಟುಗಳಲ್ಲಿವೆ. ಈ ರಾಜ್ಯದಲ್ಲಿ 25ಶೇ. ಕ್ಕಿಂತಲೂ ಹೆಚ್ಚು ಜಮೀನನ್ನು ಭೂಮಾಲಕರು ಅಕ್ರಮವಾಗಿ ಇಟ್ಟುಕೊಂಡಿದ್ದಾರೆ. 10ಸಾವಿರ ಎಕ್ರೆಗಿಂತಲೂ ಹೆಚ್ಚು ಜಮೀನು ಹೊಂದಿರುವ ಭೂಮಾಲಕರಿದ್ದಾರೆ. ಸುಮಾರು 416 ಭೂಮಾಲಕರು ಸರಾಸರಿ ತಲಾ 785 ಎಕ್ರೆ ಹೊಂದಿದ್ದಾರೆ.

ಜೆಡಿಯು-ಬಿಜೆಪಿ ಸರಕಾರ ಒಂದು ಭೂಸುಧಾರಣಾ ಆಯೋಗವನ್ನೇನೋ ರಚಿಸಿದೆ. ಆದರೆ ಅದು ಕೇವಲ ಬಡವರು ಮತ್ತು ಭೂಹೀನರನ್ನು ವಂಚಿಸಲಷ್ಟೇ. ವಾಸ್ತವವಾಗಿ ಈ ಸರಕಾರ ಬಂದ ಮೇಲೆ ಭೂಮಾಲಕರ ಧಾಳಿ ತೀವ್ರಗೊಂಡಿದೆ, ಪೋಲೀಸರ ಎದುರಲ್ಲೇ ಜನಗಳನ್ನು ಅವರು ಹಲವಾರು ವರ್ಷಗಳಿಂದ ಜೀವಿಸುತ್ತಿದ್ದ ಜಮೀನಿನಿಂದ ಒಕ್ಕಲೆಬ್ಬಿಸುತ್ತಿದ್ದಾರೆ ಎಂದು ಎಐಕೆಎಸ್ ಮುಖಂಡರು ಹೇಳುತ್ತಾರ ಇದನ್ನು ವಿರೋಧಿಸಿದ ನೌಗಾಚಿಯಾದ ಮುರ ಮಂಡಲ್, ಆನಂದಮೋಹನ್ ಸಿಂಗ್, ಪೂವ ಚಂಪಾರಣ್‌ನ ಕಫುಲ್ ಸಾಹ, ಜಮುಯಿಂ ಬ್ರಹ್ಮದೇವ್ ಠಾಕುರ್ ಮುಂತಾದ ರೈ ಮುಖಂಡರನ್ನು ಇತ್ತಿಚಿಗಷ್ಟೇ ಕ್ರಿಮಿನಲ್ ಗಳು ಹ ಮಾಡಿದ್ದಾರೆ. ಎಐಕೆಎಸ್ ಅಧ್ಯಕ್ಷರು ಸಮಾವೇಶವನ್ನು ಉದ್ಘಾಟಿಸಲು ಬರುವ ಮೊದ ಚಂಪಾರಣ್ ಮತ್ತು ನೌಗಾಚಿಯಾಕ್ಕೆ ಭೇಟಿ ನೀ ಬಂದರು. ಈ ಹಿನ್ನೆಲೆಯಲ್ಲಿಯೇ ಸಮಾವೇ 'ಈಗಲೂ ಭೂಮಿ ಪ್ರಶ್ನೆಯೇ ಪ್ರಧಾನ ಪ್ರಶ್ನೆ' ಎಂ ಗಮನಿಸಿ ಕಳೆದ 13 ವರ್ಷಗಳಿಂದ ನಡೆಯುತ್ತಿರು ಹೋರಾಟವನ್ನು ಹೊಸ ಹಂತಕ್ಕೊಯ್ಯ ನಿರ್ಧರಿಸಿತು.

ಸ್ವಾತಂತ್ರ ಭಾರತ

ಸ್ವಾತಂತ್ರ್ಯ ಭಾರತಕ್ಕೆ ಅರವತ್ತು ವರುಷ
ಹೊಟ್ಟೆ ಬಿರಿ ಉಂಡವರು ಕೆಲವರೇ ದಿವಸ
ತಿಳಿನೀರು ಶಿಕ್ಷಣವು ಸೂರು ಹಿಡಿಕೂಳು
ಎಲ್ಲರಿಗೆ ದೊರಕುವುದು ಯಾವಾಗ ಹೇಳು

- ವಿಡಂಬಾ

ಸರ್ಕಾರದ ಖಾಸಗೀಕರಣ ಪ್ರೀತಿ

ಭಾರೀ ನಷ್ಟದತ್ತ ಬಿಎಸ್ಎನ್ಎಲ್

ಸರ್ಕಾರಿ ಸ್ವಾಮ್ಯದ ಬಿಎಸ್ಎನ್ಎಲ್ ತಲೆ ಎತ್ತಿ ನಿಲ್ಲುವುದು ಸರ್ಕಾರಕ್ಕೇ ಬೇಕಿಲ್ಲ. ಇಲ್ಲಸಲ್ಲದ ಕುಂಟು ನೆಪ ತೋರಿಸಿ ಸೇವೆಯ ವಿಸ್ತರಣೆಗೆ ಅಗತ್ಯವಾದ ಸಾಧನಗಳ ಖರೀದಿಗೆ ಅವಕಾಶ ನೀಡದೆ ಸರ್ಕಾರವೇ ಸಂಸ್ಥೆಯನ್ನು ಕೊಲ್ಲಲು ಯತ್ನಿಸುತ್ತಿದೆ. ಆದರೆ ಕಾರ್ಮಿಕರು ಸುಮ್ಮನಿಲ್ಲ....


ಬಿಎಸ್ಎನ್ಎಲ್ ಮೊಬೈಲ್‌ಗಳಿಗೆ ದೇಶಾದ್ಯಂತ ಭಾರೀ ಬೇಡಿಕೆಯಿದ್ದು ಕಳೆದ ಮೂರು ತಿಂಗಳಿಂದ ಜಿಎಸ್ಎಂ ಲೈನ್‌ಗಳಿಲ್ಲದೆ ಹೊಸ ಸಂಪರ್ಕಗಳನ್ನು ಕೊಡಲಾಗುತ್ತಿಲ್ಲ.

ಹಿಂದಿನ ಸಂಪರ್ಕ ಮಂತ್ರಿಗಳು 4.55 ಕೋಟಿ ಜಿಎಸ್ಎಂ ಲೈನುಗಳನ್ನು ಖರೀದಿಸುವುದಾಗಿ ಹೇಳಿ ಪ್ರಚಾರ ಗಿಟ್ಟಿಸಿದ್ದರು. ಯಾವುದೇ ಪ್ರಯೋಜನವಿಲ್ಲ. ಬಿ.ಎಸ್.ಎನ್.ಎಲ್. ಮೊಬೈಲ್ ಬಾರಿ ಬೇಡಿಕೆಯಿದ್ದು, ಕಳೆದ ಮೂರು ತಿಂಗಳಿಂದ ಜಿ.ಎಸ್.ಎಂ. ಲೈನ್‌ಗಳಿಲ್ಲದೆ ಹೊಸ ಸಂಪರ್ಕಗಳನ್ನು ಕೊಡಲಾಗುತ್ತಿಲ್ಲ. ಹಿಂದಿನ ಸಂಪರ್ಕ ಮಂತ್ರಿಗಳು 4.55 ಕೋಟಿ ಲೈನ್‌ಗಳನ್ನು ಖರೀದಿಸುವುದಾಗಿ ಹೇಳಿ ಪ್ರಚಾರ ಗಿಟ್ಟಿಸಿಕೊಂಡಿದ್ದರೂ, ಯಾವುದೇ ಪರಿಹಾರ ಇಲ್ಲ.

ಸರ್ಕಾರದ ವಿಳಂಬ ನೀತಿಯಿಂದ ಪ್ರತಿಸ್ಪರ್ಧಿಗಳಾಗಿರುವ ಹಚ್, ಏರ್‌ಟೆಲ್ ಮೊದಲಾದ ಖಾಸಗಿ ಸಂಸ್ಥೆಗಳು ಗ್ರಾಹಕರನ್ನು ತಮ್ಮೆಡೆಗೆ ಸೆಳೆಯುತ್ತಿವೆ.

ಇದು ಬಿಎಸ್ಎನ್ಎಲ್ ನ ಅಸ್ತಿತ್ವಕ್ಕೇ ಸಂಚಕಾರ ತರಲಿದೆ ಎಂದು ಬಿಎಸ್ಎನ್ಎಲ್‌ನ ನೌಕರರು ಹಾಗೂ ಅಧಿಕಾರಿಗಳು ಆತಂಕಕ್ಕೆ ಈಡಾಗಿದ್ದಾರೆ. ಅಂತೆಯೇ ಸರ್ಕಾರದ ಖಾಸಗೀಕರಣ ನೀತಿಯ ವಿರುದ್ಧ ನೌಕರರನ್ನು ಹಾಗೂ ಅಧಿಕಾರಿಗಳನ್ನು ಪ್ರತಿನಿಧಿಸುವ 9 ಸಂಘಟನೆಗಳು ಸೇರಿ ಜಂಟಿ ವೇದಿಕೆಯನ್ನು ರಚಿಸಿಕೊಂಡು ಮುಷ್ಕರಕ್ಕೆ ಇಳಿದಿದ್ದವು.

ಸರ್ಕಾರಿ ಸ್ವಾಮ್ಯದ ಭಾರತ ಸಂಚಾರ ನಿಗಮ, ನಿಯಮಿತ ಬಿಎಸ್ಎನ್ಎಲ್‌ನ ಜುಲೈ 11ರಂದು ಮೂರು ಲಕ್ಷ ನಲವತ್ತು ಸಾವಿರ ನೌಕರರು ಮತ್ತು ಅಧಿಕಾರಿಗಳು ದೇಶವ್ಯಾಪಿ ಮುಷ್ಕರ ನಡೆಸಿ ತಕ್ಷಣವೇ ಜಿಎಸ್ಎಂ ಲೈನ್‌ಗಳನ್ನು ಪೂರೈಸಿ ಬಿಎಸ್ಎನ್ಎಲ್ ಉಳಿಸಲು ಆಗ್ರಹಿಸಿದ್ದಾರೆ.



ದೇಶಾದ್ಯಂತ ಇದಕ್ಕೆ ಸಂಪೂರ್ಣ ಬೆಂಬಲ ವ್ಯಕ್ತವಾಗಿದೆ ಅಲ್ಲದೆ ಬೆಂಗಳೂರಿನಲ್ಲಿಯೂ ಬಾರಿ ಪ್ರತಿಭಟನೆ ನಡೆದು, ಸಂಚಾರ ಅಸ್ತವ್ಯಸ್ತವಾಗಿದೆ. ಇದೇ ವೇಳೆ ಸರ್ಕಾರ ತಮ್ಮ ವಿಷಯದಲ್ಲಿ ಅನುಸರಿಸುತ್ತಿರುವ ತಾರತಮ್ಯ ನೀತಿಯನ್ನು ಮಾತನಾಡಿದವರು ಖಂಡಿಸಿದರು.

ಬಿ.ಎಸ್.ಎನ್.ಎಲ್.ನ ಯೋಜನೆ

ಬಿ.ಎಸ್.ಎನ್.ಎಲ್.ಭಾರತಾದ್ಯಂತ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸುಮಾರು 45.5 ಮಿಲಿಯನ್ ಲೈನುಗಳ ಬೃಹತ್ ಪ್ರಮಾಣದ ಮೊಬೈಲ್ ಸೇವೆ ಒದಗಿಸಲು ಜಿಎಸ್ಎಂ ಮತ್ತು ಸಿಡಿಎಂಎ ಉಪಕರಣಗಳ ಖರೀದಿಗೆ ಸುಮಾರು 20 ಸಾವಿರ ಕೋಟಿ ರೂಪಾಯಿಗಳ ಬೃಹತ್ ಯೋಜನೆ ರೂಪಿಸಿತ್ತು. 2005ರಿಂದಲೇ ಪ್ರಾರಂಭಗೊಂಡ ಇದರ ಯೋಜನೆಗೆ ಐ.ಐ.ಎಂ. ಅಲಹಬಾದ್ ಕೋರ್ಟ್ ಹಾಗೂ ಇದಕ್ಕೆ ಸಂಬಂಧಿಸಿದ ತಾಂತ್ರಿಕ ಇಲಾಖೆ ಹಾಗೂ ಹಣಕಾಸು ಇಲಾಖೆಗಳು ಸಮ್ಮತಿ ಸೂಚಿಸಿದ್ದವು. ಇದಕ್ಕೆ ಸಂಬಂಧಿಸಿದ ಉಪಕರಣಗಳನ್ನು ನೀಡಲು ನೋಕಿಯಾ ಹಾಗೂ ಎರಿಕ್‌ಸನ್ ಕಂಪನಿಗಳು ಒಪ್ಪಿಕೊಂಡಿದ್ದವು.

ಆಗಿರುವುದೇನು?

ಬಿ.ಎಸ್.ಎನ್.ಎಲ್.ನ ಯೋಜನೆಯ ಟೆಂಡರ್ ಪ್ರಕ್ರಿಯೆ ಮೂರು ತಿಂಗಳಲ್ಲಿ ಮುಗಿಯಬೇಕಿತ್ತು. ಈ ನಡುವೆ ಖಾಸಗಿ ಕಂಪನಿಯೊಂದು ಹೈಕೋರ್ಟ್ ಮೆಟ್ಟಿಲೇರಿ ಸ್ವಲ್ಪ ವಿಳಂಬವಾಯಿತಾದರೂ ಅದು ತಕ್ಷಣ ಹಿಂಪಡೆಯಿತು. ಈ ನಡುವೆ ಲೈನುಗಳ ಬೆಲೆಯ ನಿಗದಿ ಕಾಲದ ಮಿತಿ ನಿಗದಿ. ಮುಂತಾದವುಗಳ ನಿಯಮಗಳನ್ನು ಅಂತಿಮಗೊಳಿಸಿದ ಕಡತ, ಸುಮಾರು ದಿನಗಳ ನಂತರ ತಯಾರಾದರೂ ಇದನ್ನು ಖರೀದಿಯ ಆದೇಶಕ್ಕಾಗಿ ಸಂಪರ್ಕ ಮಂತ್ರಾಲಯಕ್ಕೆ ಕಳುಹಿಸಲಾಗಿತ್ತು. ಆದರೆ ಸಂಬಂಧಿಸಿದ ಇಲಾಖೆಗಳು ಖಾಸಗೀ ಕಂಪನಿಗಳಿಗೆ ಕೇವಲ 45 ದಿನಗಳಲ್ಲಿ ಒಪ್ಪಿಗೆ ನೀಡಿದ 2005ರಿಂದ ಕಾಯುತ್ತಲೇ ಬಂದ ಬಿ.ಎಸ್.ಎನ್.ಎಲ್. ಟೆಂಡರ್ ಪ್ರಕ್ರಿಯೆ ಇದೂವರೆಗೂ ನೆನೆಗುದಿಗೆ ಬಿದ್ದಿವೆ.

ನಷ್ಟದತ್ತ ಬಿ.ಎಸ್.ಎನ್.ಎಲ್.

ಸರ್ಕಾರವು ಬಿ.ಎಸ್.ಎನ್.ಎಲ್. ಯೋಜನೆಯತ್ತ ಗಮನಹರಿಸದೆ, ಬೇಕಾದ ಉಪಕರಣಗಳು ಬಿ.ಎಸ್.ಎನ್.ಎಲ್.ಗೆ ಸಿಗದೆ ಪ್ರತಿ ತಿಂಗಳೂ 300 ಕೋಟಿಯಷ್ಟು ನಷ್ಟ ಹೊಂದುತ್ತಿದೆ. 2 ವರ್ಷಕ್ಕೆ ನಷ್ಟದ ಪ್ರಮಾಣ 7200 ಕೋಟಿ ಆಗುವುದು. ಅಲ್ಲದೆ ಮಾರ್ಕೆಟಿನಲ್ಲಿ ಅದರ ಷೇರು ಶೇ.10ಕ್ಕೆ ಇಳಿದಿದೆ. ಹಾಗೆಯೇ 2 ಸ್ಥಾನದಿಂದ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಒಟ್ಟಾರೆ ಸುಮಾರು 20 ಕೋಟಿ [illegible] ಕೇವಲ 10.50 ಕೋಟಿ ಮಾತ್ರ ಆಗುತ್ತದೆ. ಅಲ್ಲದೆ ಇದರ 16 ಕೋಟಿ ದೂರವಾಣಿ ಸಂಪರ್ಕ ಖಾಸಗೀಯವರ ಪಾಲಾಗಿವೆ. ಇದಕ್ಕೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ.

ಸರ್ಕಾರದ ಬಣ್ಣ ಬಯಲು

ಹಿಂದಿನ ದೂರಸಂಪರ್ಕ ಮಂತ್ರಿ ದಯಾನಿಧಿ ಮಾರನ್‌ರ ಅವಧಿಯಲ್ಲಿ ಸಿದ್ಧಪಡಿಸಿದ ಟೆಂಡರ್‌ನಿಂದ ಯಾವುದೇ ಲಾಭವಿಲ್ಲ ಇದರಿಂದ 10 ಕೋಟಿ ನಷ್ಟವಾಗುತ್ತದೆಂದೂ ಈಗಿನ ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಿ ಎ.ರಾಜ ಹೇಳುತ್ತಾರೆ. ಇವರ ಮಾತಿನಲ್ಲಿ ಯಾವುದೇ ಅರ್ಥವಿಲ್ಲ. ಬದಲಾಗಿ ಆದಷ್ಟು ವಿಳಂಬ ಮಾಡಿ ಖಾಸಗಿಯವರಿಗೆ ಲಾಭ ಮಾಡುವ ಹುನ್ನಾರ ಅಷ್ಟೇ.

ಈ ಕುರಿತಂತೆ ಬಿ.ಎಸ್.ಎನ್.ಎಲ್. ನೌಕರರು ಸರ್ಕಾರದ ವಿಳಂಬ ನೀತಿಯ ವಿರುದ್ಧ ಕೆಲಸ ಬಿಟ್ಟು ಕಛೇರಿ ಎದುರುಗಡೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ ಮಾಡಿದ್ದಾರೆ. ಬೆಂಗಳೂರಿನ ಎಲ್ಲ ಕಛೇರಿಗಳ ಎದುರು ಬಾರಿ ಪ್ರತಿಭಟನೆ ನಡೆದವು.


ಇದೇ ವೇಳೆ ಮಾತನಾಡಿದ ಮಾಜಿ ಸಂಸತ್ ಸದಸ್ಯರೂ, ಸಿಐಟಿಯು ವಿನ ಮುಖಂಡರಾದ ದೀಪಂಕರ ಮುಖರ್ಜಿಯವರು ಕಾರ್ಮಿಕ ಮುಖಂಡರಾದ ಬಿ.ಎಸ್. ಎನ್.ಎಲ್.ಗೆ ಬೇಕಾದ ಉನ್ನತ ಮಟ್ಟದ ತಂತ್ರಜ್ಞಾನ ಹೊಂದಿದ (2 ಜಿ 3 ಜಿ) ಉಪಕರಣಗಳ ಖರೀದಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಇಲಾಖೆ ದೂರಸಂಪರ್ಕ ಅನಗತ್ಯ ವಿಳಂಬ ಮಾಡುತ್ತಿರುವುದು ಖಂಡನಾರ್ಹ ಎಂದರಲ್ಲದೆ 3 ಜಿ ಉಪಕರಣ ಬದಲಾಗಿ ಕೆಳ ಮಟ್ಟದ 2 ಜಿ ಉಪಕರಣ ಖರೀದಿಗೆ ಸರ್ಕಾರ ಮುಂದಾದಲ್ಲಿ ಮತ್ತೆ ಪ್ರತಿಭಟನೆ ನಡೆಸುವುದಾಗಿ ಎಂದು ಸರ್ಕಾರಕ್ಕೆ ಎಚ್ಚರಿಸಿದರು. ಸರ್ಕಾರ ಅನುಸರಿಸುತ್ತಿರುವ ಖಾಸಗೀ ನೀತಿಯನ್ನು ಬಿ.ಎಸ್.ಎನ್.ಎಲ್. ಸಂಘಟನೆಗಳ ಎಲ್ಲ ಮುಖಂಡರು ಖಂಡಿಸಿದರು.

ಜುಲೈ 6 ರಿಂದ 11 ರವರೆಗೆ ನಗರದ ವಿವಿಧೆಡೆ ಪ್ರತಿಭಟನೆಗಳು ನಡೆದಿದ್ದು, ಬಿಎಸ್ಎನ್ಎಲ್ ಮುಖಂಡರಾದ [illegible] ಎಸ್.ಆರ್. [illegible] ವಹಿಸಿದ್ದರು. ಸರ್ಕಾರ ಇವರ ಹೋರಾಟಕ್ಕೆ [illegible] ತಾತ್ಕಾಲಿಕ ಒಪ್ಪಿಗೆ ನೀಡಿದೆಯಾದರೂ ಪರಿಹಾರ ಕಾದು ನೋಡಬೇಕಾಗಿದೆ.

■ ಗವಿಸಿದ್ದ ಬಿ.ಹೊಸಮನಿ

'ಕೊಟ್ಟ ಮಾತು ಉಳಿಸಿಕೊಳ್ಳಿ' ಅಂಗನವಾಡಿ ನೌಕರರ ಆಗ್ರಹ

ಜುಲೈ 10 ರಂದು ದೇಶದಾದ್ಯಂತ ಅಂಗನವಾಡಿ ನೌಕರರು ಬೃಹತ್ ಪ್ರಮಾಣದಲ್ಲಿ ಮುಷ್ಕರ ನಡೆಸಿದರು. ಸುಮಾರು ಒಂದು ವರ್ಷದ ಹಿಂದೆ ಪ್ರಧಾನ ಮಂತ್ರಿಗಳು ಅಂಗನವಾಡಿ ನೌಕರರ ದೀರ್ಘಕಾಲದ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದರೂ ಈ ದಿಸೆಯಲ್ಲಿ ಏನೂ ಕ್ರಮಕೈಗೊಳ್ಳದ್ದನ್ನು ಪ್ರತಿಭಟಿಸಿ ಮುಷ್ಕರ ನಡೆಸಲು ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕರ ಒಕ್ಕೂಟ ಕರೆ ನೀಡಿತ್ತು. ಕರ್ನಾಟಕವೂ ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ ಮುಷ್ಕರ ಯಶಸ್ವಿಯಾಗಿರುವ ವರದಿಗಳು ಬಂದಿವೆ. ಮುಷ್ಕರದ ಭಾಗವಾಗಿ ಮತಪ್ರದರ್ಶನಗಳು, ಮೆರವಣಿಗೆಗಳು, ರ‍್ಯಾಲಿಗಳು, ರಾಸ್ತಾರೋಕೋ, ರೈಲ್ ರೋಕೋ, ಪ್ರತಿಕೃತಿ ದಹನ ಇತ್ಯಾದಿ ನಡೆದಿವೆ.



ಉತ್ತರ ಕನ್ನಡದ ಕಾರವಾರದಲ್ಲಿ ಪ್ರತಿಭಟನೆ



ಕುಂದಾಪುರದಲ್ಲಿ

ಅಂಗನವಾಡಿ ನೌಕರರನ್ನು ನೌಕರರೆಂದು ಪರಿಗಣಿಸಬೇಕು, ಅವರ ವೇತನ, ಪೆನ್ಶನ್ ಸೇರಿದಂತೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಹೆಚ್ಚಿಸಬೇಕು ಎಂದು ಮಾತ್ರವಲ್ಲ, ಐಸಿಡಿಎಸ್ ನ್ನು ಒಂದು ಶಾಶ್ವತ ಯೋಜನೆಯಾಗಿ ಪರಿವರ್ತಿಸಿ ಲಕ್ಷಾಂತರ ಬಡ ಹೆಂಗಸರು ಮತ್ತು ಮಕ್ಕಳಿಗೆ ಪ್ರಯೋಜನಕಾರಿಯಾಗಿಸಬೇಕು ಮತ್ತು ಯುಪಿಎ ತನ್ನ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಭರವಸೆ ನೀಡಿರುವಂತೆ ಐಸಿಡಿಎಸ್ ನ್ನು ಸಾರ್ವತ್ರೀಕರಿಸಬೇಕು ಎಂಬುದು ಅಂಗನವಾಡಿ ನೌಕರರ ಬೇಡಿಕೆ.




ಹಳಸಲು ಮೌಲ್ಯದ 'ಯುಗಾದಿ'

ಯುಗಾದಿ ಚಿತ್ರನೋಡಿ ಹೊರ ಬಂದ ಮೇಲೆ ರವಿಚಂದ್ರನ್ ತಮ್ಮ ಹಳೆಯ 'ಪ್ರೀತ್ಸೋದ್ ತಪ್ಪಾ', 'ಒಂದಾಗೋಣ ಬಾ' ಚಿತ್ರಗಳ ಹ್ಯಾಂಗೋವರ್‌ನಿಂದ ಹೊರಬಂದಿಲ್ಲ ಎಂಬುದು ಮನದಟ್ಟಾಗುತ್ತದೆ.

ನಾಯಕ ಪ್ರೀತಿಸಿ ಮದುವೆಯಾದ ಹೆಂಡತಿ ಹೆರಿಗೆ ಸಮಯದಲ್ಲಿ ಸಾಯುತ್ತಾಳೆ. ಆಕೆಗೊಬ್ಬಳು ತಂಗಿ ಇರುತ್ತಾಳೆ. ಅವಳು ನಾಯಕನ ಸ್ನೇಹಿತನನ್ನು ಪ್ರೀತಿಸುತ್ತಿರುತ್ತಾಳೆ. ನಂತರ ಮನಸ್ಸು ಬದಲಿಸಿ ನಾಯಕನ ಕಡೆಗೆ ಒಲಿಯುತ್ತಾಳೆ. ಸ್ನೇಹಿತ ತ್ಯಾಗಜೀವಿಯಾಗುತ್ತಾನೆ. ಮಗುವಿನ ಪಾಲನೆಗೆ ಅನುಕೂಲ ಎಂಬುದು ನಾಯಕನಿಗೆ ಒಂದು ನೆಪವಾದರೆ, ತಾನು ಇಷ್ಟಪಡುವ ಗುಣ ನಾಯಕನಲ್ಲಿದೆ ಎಂಬುದು ನಾಯಕಿಯ ತಂಗಿಗೆ ನೆಪ.

ಹೆಂಡತಿ ಸತ್ತ ಮೇಲೆ (ಹೇಗಾದರೂ ಸಾಯಲಿ) ಹೇಗಾದರೂ ಮಾಡಿ ಆಕೆಯ ತಂಗಿಯನ್ನು ಮಾಡಿಕೊಳ್ಳುವುದು, ಅಸಹಾಯಕ ತಂದೆ ತಾಯಿಗಳು ಬೇರೆ ದಾರಿ ಇಲ್ಲದೆ ಆತನಿಗೆ ಮತ್ತೊಬ್ಬ ಮಗಳನ್ನು ಮದುವೆ ಮಾಡಿಕೊಡುವುದು ಸಮಾಜದಲ್ಲಿ ತುಂಬಾ ಇದೆ. ಈ ಪ್ರವೃತ್ತಿಯ ಮತ್ತೊಂದು ಅವತರಣಿಕೆಯೇ 'ಯುಗಾದಿ' ಸಿನಿಮಾ.

ಏನೋ ಹೊಸತನ ಇರಬಹುದೆಂದು ಹೋದ ಪ್ರೇಕ್ಷಕ ಮಹಾಶಯನಿಗೆ ಮಾತ್ರ ಭರ್ಜರಿ ಮಕ್ಮಲ್ ಟೋಪಿ ಹಾಕಿಸಿದ್ದಾರೆ. ಪ್ರೀತಿ ಮಾಡಬಾರದು ಮಾಡಿದರೆ ಜಗಕೆ ಹೆದರಬಾರದು ಎಂದು ಹೇಳಿದ ರವಿಚಂದ್ರನ್ ಈ ಚಿತ್ರದಲ್ಲಿ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿಪಾದಿಸುವ ಸನಾತನಿಯಂತೆ ಗೋಚರಿಸಿದ್ದಾರೆ. ಹೆಸರಿಗೆ ಮಾತ್ರ ಓಂ ಸಾಯಿಪ್ರಕಾಶ್ ನಿರ್ದೇಶಕರು, ಎಲ್ಲವೂ ರವಿಚಂದ್ರನ್‌ಮಯ. ವಿದೇಶದಲ್ಲಿ ನೆಲೆಗೊಂಡ ಐಟಿ



ಕಿಂಗ್ ಸಂಜಯ್ (ರವಿಚಂದ್ರನ್) ಊಟಿಯಲ್ಲಿ ಕಣ್ಣಿಗೆ ಬೀಳುವ ಕಾವೇರಿ (ಜೇಶ್ಮಲಾನಿ)ಯನ್ನು ಕಾಡಿಸಿ ಪೀಡಿಸಿ ಪ್ರೀತಿಸುತ್ತಾನೆ. ಇದಕ್ಕೆ ಸಾಕ್ಷಿಯಾಗಿ ನಾಯಕಿ ತಂಗಿ ಪ್ರಿಯಾ (ಜೆನ್ನಿಫರ್ ಕೊತ್ವಾಲ್) ನಿಲ್ಲುತ್ತಾಳೆ.

ಕಾವೇರಿಯ ನಿಶ್ಚಿತಾರ್ಥ ದಿನ (ಅದೇ ದಿನ ಯುಗಾದಿ ಹಬ್ಬ) ಓಡಿಹೋಗಿ ಇಬ್ಬರೂ ಮದುವೆಯಾಗಿ ವಿದೇಶದಲ್ಲಿ ನೆಲೆ ನಿಲ್ಲುತ್ತಾರೆ. ಅವರ ಜೊತೆಗೆ ನಾಯಕಿಯ ತಂಗಿಯಾಗಿ ನಟಿಸಿದ ಹುಡುಗಿ ಅವಳ ವೈದ್ಯ ಗಂಡನಾಗಿ ನಟ ಮೋಹನ್ ಅಭಿನಯ ಆಟಕ್ಕುಂಟು ಲೆಕ್ಕಕ್ಕಿಲ್ಲ. ನಾಯಕಿ ಒಂದು ಮಗುವಿಗೆ ಜನ್ಮನೀಡಿ ಸಾಯುತ್ತಾಳೆ.

ಫ್ಯೂಡಲಿಸಂನ ಪ್ರತಿರೂಪದಂತೆ ಬಿಂಬಿತವಾಗುವ ಪಾತ್ರದಲ್ಲಿ ವೀರಭದ್ರಗೌಡನಾಗಿ, ನಾಯಕಿಯ ತಂದೆಯಾಗಿ ಅರ್ಧ ಉತ್ತಮ, ಅರ್ಧ ಕಳಪೆ ಅಭಿನಯ ನೀಡಿದ್ದಾರೆ ನಟ ಶ್ರೀನಿವಾಸಮೂರ್ತಿ ಮಗಳನ್ನು ಹಾರಿಸಿ ಕೊಂಡುಹೋದ ಅಳಿಯನ ಮೇಲಿನ ದ್ವೇಷ ಮೇಲ್ವರ್ಗದ ಕುಟುಂಬದ ಹುಡುಗಿಯರನ್ನು ಯಾರೂ ಪ್ರೀತಿಸಲೇಬಾರದು ಎನ್ನುವಂತಿದ್ದರೆ, ರವಿಚಂದ್ರನ್ ಅಭಿನಯ ಹಳೆಯ ಮೌಲ್ಯವನ್ನು ಎತ್ತಿಹಿಡಿದ ಅನುಭವವಾಗುತ್ತದೆ.

ವಿದೇಶದಲ್ಲಿ ಗೆಳೆಯನಾಗಿ ಪರಿಚಿತನಾದ ಅರ್ಜುನ (ಕೆ.ಬಾಲಚಂದರ) ನಾಯಕಿ ತಂಗಿ ಪ್ರಿಯಾಳನ್ನು ತಾನು ಪ್ರೀತಿಸುವ ವಿಷಯ ನಾಯಕನಿಗೆ ತಿಳಿಸಿ 'ನೀನು ನನ್ನ ಅಣ್ಣ ಇದ್ದಂತೆ' ಎಂದು ಹೇಳಿ ಅವಳನ್ನು ಒಪ್ಪಿಸುವ ಜವಾಬ್ದಾರಿ ನಿನ್ನದು ಎಂದು ಹೇಳಿ ನಾಯಕನ ಮನೆಯಲ್ಲಿ ಬಿಟ್ಟುಹೋಗುತ್ತಾನೆ. ಅರ್ಜುನನೊಂದಿಗೆ ಪ್ರೀತಿ ಹೊಂದಿರುವಾಗಲೇ ತಾನು ಬಯಸುವ ಒಂದು ಗುಣ ನಾಯಕನಲ್ಲಿ ಇದೆ ಎನ್ನುವ ಕಾರಣಕ್ಕೆ ನಿಷ್ಠೆ ಬದಲಿಸಿ, ನಾಯಕನಿಗೆ ಆಕರ್ಷಿತಳಾಗುತ್ತಾಳೆ. ಸತ್ತು ಹೋದ ತನ್ನ ಹೆಂಡತಿಯ ತಂಗಿಯ ಬಗೆಗೆ ಮನಸ್ಸಿದ್ದರೂ ಹೊರಗೆ ನಾಯಕ ನಿರಾಕರಿಸುತ್ತಾನೆ. ಈ ವಿಷಯ ಹೇಗೋ ನಾಯಕನ ಮಾವನಿಗೆ ತಿಳಿದು ಏಕಾಏಕಿ ಅಳಿಯನ ಮೇಲಿನ ದ್ವೇಷ ಮರೆ[...] ನನ್ನ ಮೊದಲ ಮಗಳನ್ನು ಚೆನ್ನಾಗಿ ನೋಡಿಕೊ[...] ಈತ ಈ ಮಗಳನ್ನೂ ಚೆನ್ನಾಗಿ ನೋಡಿಕೊಳ್ಳುತ್[...] ಎಂದು ಅವನಿಗೆ ಮದುವೆ ಮಾಡುವ ಮೂ[...] ಚಿತ್ರ ಕೊನೆ ಗೊಳ್ಳುತ್ತದೆ.

ಒಂದೇ ಒಂದು ಮೆಚ್ಚುವ ಸಂಗತಿಯೆಂ[...] ಹುಡುಗಿಯರ ಬಳಿ ಲೀಲಾಜಾಲವಾಗಿ ತನ್ನ ಚಳಕ ಪ್ರದರ್ಶಿಸುವ ರವಿಚಂದ್ರನ್ ಈ ಚಿತ್ರದ[...] ಸಂಯಮ ಮೆರೆದಿದ್ದಾರೆ. ಕೆ.ಕಲ್ಯಾಣರ ಗೀತೆಯ[...] ಕೇವಲ ಎರಡು ಮಾತ್ರ ನೆನಪಿನಲ್ಲುಳಿಯುತ್[...] ಒಂದಿಡೀ ಕುಟುಂಬದ ಪಾತ್ರದಲ್ಲಿ ಯಾರೊಬ್ಬ[...] ನೆನಪಿನಲ್ಲಿ ಉಳಿಯುವುದಿಲ್ಲ. ರಂಗಾಯಣ ರ[...] ಸಾಧುಕೋಕಿಲ ತಮ್ಮ ಅಲ್ಪಸಮಯದ ಹ[...] ಅಭಿನಯದಿಂದ ನೆನಪಿನಲ್ಲಿ ಉಳಿಯುತ್[...] ಪ್ರೇಕ್ಷಕರ ಮನ ಗೆಲ್ಲುವಲ್ಲಿ ಈ ಚಿತ್ರ ಸೋ[...] ಎನ್ನುವುದಕ್ಕೆ ಖಾಲಿ ಹೊಡೆಯುವ ಖುರ್ಚಿಗ[...] ಸಾಕ್ಷಿ. ಮುಖ್ಯವಾಗಿ ರವಿ ಹಳೇ[...] ಹ್ಯಾಂಗೋವರ್‌ನಿಂದ ಹೊರಬಂದು ಕ್ರಿಯಾ[...] ಆಲೋಚನೆಯಲ್ಲಿ ತೊಡಗುವಂತಾಗಲಿ.



ಕೋನೇರು ಹಂಪಿ ಸಾಧನೆಯ ಹಾದಿಯ[...]

ಹಾಲೆಂಡನ್ ಹಿಲ್ವೆರ್ಸ್‌ಮ್‌ನಲ್ಲಿ ನಡ[...] ಹೆಚ್.ಎಸ್.ಜಿ ಅಂತರಾಷ್ಟ್ರೀಯ ಓಪನ್ ಚೆ[...] ಟೂರ್ನಿಯಲ್ಲಿ ಆಂಧ್ರದ ವಿಜಯವಾಡದ ಹೆ[...] ಮಗಳು ಕೋನೇರುಹಂಪಿ ಚಾಂಪಿಯನ್ ಕಿರೀ[...] ಧರಿಸಿದ್ದಾರೆ.

ವೈಶಿಷ್ಟ್ಯಗಳು : ಈಕೆ ಪ್ರಶಸ್ತಿ ಗೆ[...] ಹೆಚ್.ಎಸ್.ಜಿ ಟೂರ್ನಿ ಕೇವ[...] ಮಹಿಳೆಯರಿಗಲ್ಲ, ಅದು ಗಂಡು ಹೆಣ್ಣು ಎ[...] ಬೇಧವಿಲ್ಲದೇ ಮುಕ್ತ ಟೂರ್ನಿ ಪುರ[...] ಚಾಂಪಿಯನ್‌ಗಳೇ ಬಹು ಸಂಖ್ಯಾತರು! ಮಹಿ[...] ಭಾಗವಹಿಸುವುದೇ ಒಂದು ವಿಶೇಷವಾದ[...] ಪ್ರಶಸ್ತಿ ಗೆದ್ದಿದ್ದು ಇನ್ನೊಂದು ವಿಶೇಷ. [...] ಟೂರ್ನಿಯಲ್ಲಿ ಗೆದ್ದ ಮೊದಲ ಮಹಿ[...] ಕೋನೇರುಹಂಪಿ. ಜೂನ್ 20 ರಿಂದ 28ರವ[...] ನಡೆದ ಈ ಆಟದಲ್ಲಿ 80 ಆಟಗಾರ[...] ಭಾಗವಹಿಸಿದ್ದರು. ಒಂಭತ್ತು ಸುತ್ತು[...] ಟೂರ್ನಿಯಲ್ಲಿ ಕೋನೇರು ಹಂಪಿ ಒಟ್ಟು [...] ಅಂಕ ಪಡೆದು ಹಾಲೆಂಡಿನ ಚೆಸ್ ದ[...] ಗ್ರ್ಯಾಂಡ್ ಮಾಸ್ಟರ್ ಎರಿಕ್‌ವಾ[...] ಡೆನ್‌ಡೊಯಲ್ ರನ್ನು ಹಿಂದೆ ಸರಿಸಿ ಕಿರ[...] ತನ್ನದಾಗಿಸಿಕೊಂಡಳು.

ಒಂದಿಷ್ಟು ಲಾಭ : ಈ ಟೂರ್ನಿಯಿಂದ 1[...] 'ಇಲೋ' ಅಂಕಗಳು ದೊರೆತ ಕಾರ[...] ರ್‍ಯಾಂಕಿಂಗ್ ಪಟ್ಟಿಯಲ್ಲಿ ಅತಿ ಹೆಚ್ಚು 'ಇಲ[...] ಅಂಕ ಪಡೆದ ಜಗತ್ತಿನ 2ನೇ ಆಟಗಾರ್ತಿ ಎ[...] ಹೆಗ್ಗಳಿಕೆ. ಈ ಮೊದಲು ಸೂಸನ್ ಪೋಲ[...] ಹೆಸರಿನಲ್ಲಿದ್ದ ದಾಖಲೆ ಅಳಿಸಿಹೋಗಿದೆ.

ಹೊಣೆಗೇಡಿ ಮಾಧ್ಯಮಗಳು: ಅ[...] ಸಮಯಕ್ಕೆ ನಡೆಯುತ್ತಿದ್ದ ವಿಂಬಲ್[...] ಪಂದ್ಯಾವಳಿಯಲ್ಲಿ 44ನೇ ಶ್ರೇಯಾಂ[...] ಸಾನಿಯಾ ಮಿರ್ಜಾ ಸೋಲು ಕಂಡಳು. [...] ಬಹಳಷ್ಟು ಪತ್ರಿಕೆಯಲ್ಲಿ ದೊಡ್ಡಕ್ಷರ[...] ಪ್ರಕಟವಾದರೆ ಕೋನೇರು ಹಂಪಿ ಜಯ[...] ಅನೇಕ ಪತ್ರಿಕೆಗಳಲ್ಲಿ ಸುದ್ದಿಯಾಗಲಿಲ್ಲ.


ಪರಶುರಾಮ ಬೋ[...]



ಸುಳ್ಳು ಹೇಳದ ಸಾಕ್ಷಿದಾರ


ಡಿಎನ್‌ಎ ಪರೀಕ್ಷೆ ಎಂದರೇನು?

ಡಿ.ಎನ್.ಎ. ಯ ಪೂರ್ಣ ಹೆಸರು ಡಿಆಕ್ಸಿ ರೈಬೋಸ್ ನ್ಯೂಕ್ಲಿಯಿಕ್ ಆಸಿಡ್. ಪ್ರತಿಯೊಂದು ಜೀವಿಯಲ್ಲಿ ಡಿ.ಎನ್.ಎ.ಯು ತನ್ನದೇ ಆದ, ಇನ್ನೊಂದರೊಡನೆ ಹೋಲಿಸಲಾಗದ ವಿಶಿಷ್ಟ ಜೈವಿಕ ಮಾಹಿತಿ(Genetic Code) ಯನ್ನು ಹೊಂದಿರುತ್ತದೆ. ಮನುಷ್ಯನೊಬ್ಬನ ಡಿ.ಎನ್.ಎ.ಯನ್ನು 13 ಭಾಗಗಳಿಂದ ಸಂಗ್ರಹಿಸಿ ಆ ವ್ಯಕ್ತಿಯ ಡಿ.ಎನ್.ಎ. ಜಾತಕವನ್ನು ಸಿದ್ದಪಡಿಸಲಾಗುತ್ತದೆ. ಒಂದು ಡಿ.ಎನ್.ಎ. ಜಾತಕ ಮತ್ತೊಂದಕ್ಕೆ ಹೋಲಿಕೆಯಾಗುವುದಿಲ್ಲ. ಹೀಗಾಗಿ ಅಪರಾಧದಲ್ಲಿ ಭಾಗಿಯಾಗಿರುವ ವ್ಯಕ್ತಿಯೊಬ್ಬನ ದೇಹದ ಯಾವುದೇ ತುಣುಕು,



ಪರಿಶೋಧನೆಯ ಸಮಯದಲ್ಲಿ ಸಿಕ್ಕಲ್ಲಿ ಅದರ ಡಿ.ಎನ್.ಎ. ಯನ್ನು ಆರೋಪಿಗಳ ಡಿ.ಎನ್.ಎ. ಯೊಂದಿಗೆ ಹೋಲಿಸಿ ಪರೀಕ್ಷಿಸಲಾಗುತ್ತದೆ.

ಪ್ರತಿಯೊಂದು ಜೀವಿಯು ಸಣ್ಣ ಸಣ್ಣ ಜೀವಕೋಶಗಳಿಂದ ರೂಪುಗೊಂಡಿವೆ. ಮನೆ ನಿರ್ಮಿಸಲು ಇಟ್ಟಿಗೆಗಳು ಅವಶ್ಯವಿರುವಂತೆಯೇ ಜೀವಕೋಶಗಳು ಜೀವಿಯ ನಿರ್ಮಾಣಕ್ಕೆ ಅತ್ಯವಶ್ಯ. ಕೆಲವು ಜೀವಿಗಳು ಏಕ ಕೋಶಗಳಿಂದ ರಚನೆಯಾಗಿವೆ. ಉದಾಹರಣೆಗೆ: ಬ್ಯಾಕ್ಟೀರೀಯಾದಂಥಹ ಸೂಕ್ಷ್ಮಜೀವಿಗಳು. ಕೆಲವು ಜೀವಿಗಳು ಬಹುಕೋಶಗಳಿಂದ ರಚನೆಯಾಗಿವೆ. ಉದಾಹರಣೆಗೆ - ಮನುಷ್ಯನ ದೇಹವು ಅಂದಾಜು ಒಂದು ಲಕ್ಷ ಕೋಟಿ ಜೀವಕೋಶಗಳಿಂದಾಗಿದೆ. ಪ್ರತಿಯೊಂದು ಜೀವಕೋಶವು ಪೌಷ್ಟಿಕ ವಸ್ತುಗಳನ್ನು ಬಳಸಿಕೊಂಡು ತನ್ನ ಕಾರ್ಯನಿರ್ವಹಣೆಗೆ ಮತ್ತು ಜೀವಿಯ ಪುನರುತ್ಪಾದನೆಗೆ ಅಗತ್ಯವಿರುವ ಶಕ್ತಿಯನ್ನು ಉತ್ಪಾದಿಸುತ್ತವೆ.



ಪ್ರತಿಯೊಂದು ಜೀವಿಯ ಜೀವಕೋಶದಲ್ಲೂ ಡಿ.ಎನ್.ಎ. ಇದ್ದು, ಜೀವಿಯ ಬೆಳವಣಿಗೆ ಮತ್ತು ಕಾರ್ಯನಿರ್ವಹಣೆಗೆ ಅವಶ್ಯವಿರುವ ವಂಶವಾಹಿನಿ ಗುಣಗಳನ್ನು ಇದು ಹೊಂದಿರುತ್ತದೆ. (ವಂಶಶಾಹಿ ಎಂದರೆ ಪೀಳಿಗೆ ಪೀಳಿಗೆಗೆ ಜೀವಿಯ ಗುಣ ಲಕ್ಷಣಗಳನ್ನು ಒಯ್ಯುವ ಜೀನ್ಸ್‌ಗಳು) ಅದು ಜೀವಕೋಶದಲ್ಲಿ 'ಡಬಲ್ ಹೆಲಿಕ್ಸ್' ಎಂದು ಕರೆಯಲಾಗುವ (ಏಣಿಯೊಂದನ್ನು ಕಾಲುಗಳು ಇರುವಂತೆಯೇ ಮೇಲ್ಭಾಗವನ್ನು ಎಡಕ್ಕೂ, ಕೆಳಭಾಗ ವನ್ನು ಬಲಕ್ಕೂ ತಿರುಚಿದೆ ಎಂದುಕೊಳ್ಳಿ. ಅದು ಡಬಲ್ ಹೆಲಿಕ್ಸ್ ಆಕೃತಿ) ಆಕೃತಿಯಲ್ಲಿ ಹೆಣೆದುಕೊಂಡಿರುತ್ತದೆ. ಡಿ.ಎನ್.ಎ.ಯು ಜೈವಿಕ ಮಾಹಿತಿಯನ್ನು ದೀರ್ಘಾವಧಿವರೆಗೆ ಹೊಂದಿರುತ್ತದೆ. ಜೀವಕೋಶದ ಇತರೆ ಅಂಶಗಳಾದ ಪ್ರೋಟೀನ್ ಮತ್ತು ಆರ್.ಎನ್.ಎ. (ರೈಬೋಸ್ ನ್ಯೂಕ್ಲಿಯಿಕ್ ಆಸಿಡ್) ಗಳು ರೂಪುಗೊಳ್ಳಲು ಅಗತ್ಯ ಜೈವಿಕ ಮಾಹಿತಿಯನ್ನು ಡಿ.ಎನ್.ಎ. ಯು ಹೊಂದಿರುವುದರಿಂದ ಇದನ್ನು ಜೀವಿಯೊಂದರ 'ನೀಲಿ ನಕ್ಷೆ' ಎಂತಲೂ ಕರೆಯುತ್ತಾರೆ. ಈ ಡಿ.ಎನ್.ಎ. ಯು ನ್ಯೂಕ್ಲಿಯೋಟೈಡ್ ಎಂಬ ರಾಸಾಯನಿಕ ಸಂಯುಕ್ತ ವಸ್ತುವಿನಿಂದ ರಚನೆಯಾಗಿದೆ. ಪ್ರತಿಯೊಂದು ರಾಸಾಯನಿಕ ಸಂಯುಕ್ತ ವಸ್ತುವು ಒಂದಕ್ಕಿಂತ ಹೆಚ್ಚು ಸಂಖ್ಯೆಯ ಮೂಲವಸ್ತುಗಳಿಂದ ಕೂಡಿ ರೂಪು ಗೊಂಡಿರುತ್ತದೆ. ಉದಾಹರಣೆಗೆ - ಸಂಯುಕ್ತ ವಸ್ತುವಾದ ನೀರು, ಮೂಲವಸ್ತುಗಳಾದ ಹೈಡ್ರೋಜನ್ ಮತ್ತು ಆಕ್ಸಿಜನ್‌ಗಳಿಂದ ರೂಪುಗೊಂಡಿರು ವುದು. ಹಾಗೆಯೇ ನ್ಯೂಕ್ಲಿಯೋಟೈಡ್ ಸಂಯುಕ್ತ ವಸ್ತುವು ನ್ಯೂಕ್ಲಿಯಿಕ್ ಆಸಿಡ್‌ಗಳಿಂದ ರೂಪುಗೊಂಡಿದೆ. ಸರಳವಾಗಿ ಹೇಳುವುದಾದರೆ, ರಾಸಾಯನಿಕ ಕ್ರಿಯೆಯಿಂದ ನ್ಯೂಕ್ಲಿಯಿಕ್ ಆಸಿಡ್ ರೂಪು ಗೊಂಡು ಅದರಿಂದ ಜೀವಕೋಶಗಳು ರಚನೆ ಗೊಂಡು ಜೀವಿಯೊಂದರ ಉಗಮವಾಗಿದೆ.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH